ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 48

ನವೆಂಬರ್ 30, 2008

ರೂ. 5/-



ಭಯೋತ್ಪಾದನೆಯ ಬೆನ್ನಿಗೆ ನಿಂತ ಬಿಜೆಪಿ




ಅಂತರಗಂಗೆ

ಅಂತರಾಳಕ್ಕೆ ವಿಭಜನೆಯ ವಿಷ

ಗಣಿ ಬಿಕ್ಕಟ್ಟು



ನಲುಗಿದ ಬಳ್ಳಾರಿ



ಪ್ರಧಾನಿಯವರ ತಿರುಕನ ಕನಸು !

LIC

ವಿಮಾ ಉದ್ದಿಮೆ : ಹಾನಿಕಾರಕ ವಿದೇಶಿ ಬಂಡವಾಳ

ಮಾಧ್ಯಮಗಳ ಪೂರ್ವಾಗ್ರಪೀಡಿತ ಕನ್ನಡಕ

ನೋಟ



ಡಾ. ಜಿ. ಭಾಸ್ಕರ ಮಯ್ಯ

ವಿಶ್ವ ರಾಜಕೀಯ ಇತಿಹಾಸದಲ್ಲಿ ಬಂಡವಾಳಶಾಹಿ ವ್ಯವಸ್ಥೆ ತೀವ್ರ ಬಿಕ್ಕಟ್ಟನ್ನು ಎದುರಿಸಬೇಕಾಗಿ ಬಂದಾಗ ಫ್ಯಾಸಿಸಂ ಅಸ್ತಿತ್ವಕ್ಕೆ ಬಂತು. ಸಮಾಜವಾದಿ ಕ್ರಾಂತಿಯನ್ನು ತಡೆಯಲು ಮೊತ್ತಮೊದಲ ಬಾರಿಗೆ ಶಾಸಕವರ್ಗದಿಂದ ಪ್ರಭುತ್ವದ ರಾಜದಂಡವನ್ನು ಫ್ಯಾಸಿಸ್ಟ್ ಮುಖಂಡ ಮುಸಲೋನಿಗೆ ನೀಡಲಾಯಿತು.(1922) ಇಪ್ಪತ್ತನೇಯ ಶತಮಾನದ ನಾಲ್ಕನೇಯ ದಶಕವಂತೂ ಫ್ಯಾಸಿಸ್ಟ್‌ವಾದದ ಪರಮ ಉತ್ಕರ್ಷದ ಕಾಲ. ಸಮಾಜವಾದಿ ಕ್ರಾಂತಿ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಗಳೆದುರು ಫ್ಯಾಸಿಸಂ ನೆಲಕಚ್ಚಿತು. ಅದು ಪರಾಭವ ಹೊಂದಿತು. ಆದರೆ ನಾಶವಾಗಲಿಲ್ಲ. ಹಿಟ್ಲರ್, ಮುಸಲೋನಿ, ತೋಜೋ ಸಂತತಿಗಳು ಬೇರೆ ಬೇರೆ ದೇಶಗಳಲ್ಲಿ ತಲೆಯೆತ್ತುವ ಪ್ರಯತ್ನವನ್ನು ಮಾಡುತ್ತಾ ಬಂದಿವೆ. ಇಂದು ಭಾರತದಲ್ಲಿ ಫ್ಯಾಸಿಸಂನ ಪ್ರಭಾವ ತನ್ನ ಕಬಂಧ ಬಾಹುಗಳನ್ನು ದಶದಿಕ್ಕುಗಳಿಗೂ ಚಾಚಿದೆ. ಅದು ಇಂದು ಕೇವಲ ಒಂದು ಸಂಘಟನೆಯಾಗಿಯೋ, ಪಕ್ಷವಾಗಿಯೋ ಉಳಿದಿಲ್ಲ.

ಸೇನೆ, ಪೋಲಿಸು, ಜೈಲು, ನ್ಯಾಯಾಲಯ ಮತ್ತು ಮಾಧ್ಯಮಗಳು, ಯಾವಾಗಲೂ ಪ್ರಭುತ್ವದ ಶಸ್ತ್ರಗಳು ಎಂಬುದು ಮಾರ್ಕ್ಸ್‌ವಾದದ ತಿಳುವಳಿಕೆ. ಸಂದರ್ಭ ಬಂದಾಗ, ಅಗತ್ಯವಿದ್ದಾಗ ಇವುಗಳೆಲ್ಲವೂ ಪ್ರಭುತ್ವದ ಪರವಾಗಿ ತೀವ್ರಗತಿಯಿಂದ ಕೆಲಸ ಮಾಡಲು ತೊಡಗುತ್ತವೆ. ಭಾರತದಲ್ಲಿ ಎರಡು ವರ್ಷಗಳಿಂದ ದೊಡ್ಡ ಮಟ್ಟದಲ್ಲಿ ಪೋಲೀಸು ವ್ಯವಸ್ಥೆ ಕೋಮುವಾದಿಯಾಗಿರುವುದು ಇದಕ್ಕೆ ನಿದರ್ಶನ. ಈ ಹೇಳಿಕೆಯನ್ನು ಯಾರಾದರೂ ನೀಡಬಹುದು. ಆದರೆ ಪೋಲೀಸ್ ಮಹಾನಿರ್ದೇಶಕರಾಗಿದ್ದ ವಿಭೂತಿ ನಾರಾಯಣ್ ರಾಯ್ ಅವರು ರಾಷ್ಟ್ರೀಯ ಪೋಲೀಸು ಅಕಾಡೆಮಿಯಿಂದ ಫೆಲೋಶಿಪ್ ಪಡೆದು ದೇಶದಾದ್ಯಂತ ನಡೆದ ಕೋಮುಗಲಭೆಗಳ ಅಧ್ಯಯನ ನಡೆಸಿ "ಕೋಮುಗಲಭೆಗಳು ಮತ್ತು ಭಾರತೀಯ ಪೋಲೀಸರು" ಎಂದು ಮಹಾಪ್ರಬಂಧವನ್ನು (ಹಿಂದಿಯಲ್ಲಿ) ಬರೆದು ಪ್ರಕಟಿಸಿರುತ್ತಾರೆ. ಅದರ ಮೊದಲ ಪ್ರಕಾಶನ ರಾಧಾಕೃಷ್ಣ ಪ್ರಕಾಶನ, ಡೆಲ್ಲಿಯಿಂದ ಕ್ರಿ.ಶ. 2000 ದಲ್ಲಿ ಪ್ರಕಟವಾಗಿದೆ. ಅದು ಹೊರಗೆಡಹಿರುವ ಪೋಲೀಸರ ಕೋಮುವಾದಿ ಚಾರಿತ್ರ್ಯವು ಅತ್ಯಂತ ಭಯಾನಕವಾಗಿದೆ. ಅನಂತರ ಇಂಗ್ಲಿಷ್ ಪಡೆನುಡಿಯಂತೆ "Much water has flowed under the bridge"- ಗುಜರಾತ್, ರಾಜಸ್ಥಾನ್, ಉತ್ತರ ಪ್ರದೇಶ, ಕರ್ನಾಟಕ, ಒರಿಸ್ಸಾಗಳಲ್ಲಿ ಪ್ರಭುತ್ವದ ಗೂಂಡಾ ಪಡೆಯಂತೆ ವರ್ತಿಸಿದ ಅನಾಗರೀಕ ಮತ್ತು ಬರ್ಬರ ವರ್ತನೆ ನಮ್ಮ ಕಣ್ಣ ಮುಂದಿದೆ.

> **ಇಂದಿನ ತನಕ ಭಯೋತ್ಪಾದನೆಯ ಆರೋಪದಲ್ಲಿ ಬಂಧಿಸಲ್ಪಟ್ಟವರ ಪೈಕಿ ಕೇವಲ 5 ರಿಂದ 10 ಶೇ. ಜನರಿಗಷ್ಟೇ ಶಿಕ್ಷೆ ನೀಡಲಾಗಿದೆ. ಉಳಿದವರು ಬಹುತೇಕ ನಿರಪರಾಧಿಗಳು. ಈ ವಿಚಾರ ಇತ್ತೀಚೆಗೆ ಪ್ರಕಟಗೊಂಡ 'ಅಜೀತ್‌ಶಾಹಿ' ವರದಿಯಲ್ಲಿ ಪ್ರಕಟಗೊಂಡಿದೆ. ಇಲ್ಲಿ ಪ್ರಶ್ನೆ ಏನೆಂದರೆ, ಈ ಪ್ರಕ್ರಿಯೆಯಲ್ಲಿ ಮಿಕ್ಕುಳಿದ ದೊಡ್ಡ ಸಂಖ್ಯೆಯ ನಿರಪರಾಧಿಗಳ ಭವಿಷ್ಯ ನಿರ್ನಾಮವಾಯಿತು. ಅವರನ್ನು ಪೋಲಿಸರು ಬಂಧಿಸಿದ್ದಾದರೂ ಯಾವ ಆಧಾರದಲ್ಲಿ? ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲದೆ ಅಷ್ಟೊಂದು ದೊಡ್ಡ ಆರೋಪವನ್ನು ಹೊರಿಸಿದ್ದಾದರೂ ಹೇಗೆ? ಅವರೆಲ್ಲಾ ಒಂದು ಪ್ರತ್ಯೇಕ ಸಮುದಾಯಕ್ಕೆ ಸೇರಿರುವುದೇ ಅಪರಾಧವೇ?**

ಕಣ್ಣೆದುರು ಚಾಚಿದರೂ ಒಪ್ಪರು

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮಗಳ ಪಾತ್ರ ಬಹಳ ಹಿರಿದಾದುದು; ಮಹತ್ತರವಾದುದು ಎಂಬ ಕಾಲ ಒಂದಿತ್ತು. ಇಂದು ಕೋಮುವಾದವು ಭಯೋತ್ಪಾದನೆಯ ಮಾರ್ಗವನ್ನು ಹಿಡಿದಿದೆ. ಇಷ್ಟರ ತನಕ ಮುಸ್ಲಿಂ ಭಯೋತ್ಪಾದನೆಯ ಬಗ್ಗೆ ಮಾತನಾಡುತ್ತಿದ್ದ ಮಾಧ್ಯಮಗಳು ಇಂದು ಹಿಂದೂ ಭಯೋತ್ಪಾದನೆಯ ಬಗ್ಗೆ ಮಾತನಾಡುತ್ತಿವೆಯೇ? ಮಾತನಾಡುತ್ತಿವೆ. ಆದರೆ, ಅದು ಅತ್ಯಂತ ಪಿಸುದನಿಯಲ್ಲಿ. ಆದರೆ, ಮಾಧ್ಯಮಗಳು ಈ ತನಕ ಮಾಡಿದ್ದೇನು? ಜನಮಾನಸದಲ್ಲಿ ಆತಂಕವಾದಿಗಳೆಂದರೆ ಮುಸ್ಲಿಮರು ಎಂಬುದನ್ನು ಅಚ್ಚೊತ್ತುವಂತೆ ಮಾಡುವಲ್ಲಿ ಮಾಧ್ಯಮಗಳೇ ಸಫಲವಾಗಿವೆ. ಅದರ ಇನ್ನೊಂದು ಮುಖ ಹಿಂದೂ ಭಯೋತ್ಪಾದನೆಯನ್ನು ಕಣ್ಣೆದಿರು ಚಾಚಿದರೂ ಜನ ಅದನ್ನು ಒಪ್ಪಲು ಇದರಿಲ್ಲದ ಸ್ಥಿತಿಯೂ ಆಗಿದೆ.

ಮಿರ್ಚಿ - ಮಸಾಲೆ -ಭಾವೋದ್ರೇಕ

ಭಯೋತ್ಪಾದನೆಯ ವಿರುದ್ಧ ಹೋರಾಟ ನಡೆಸುವ ದೇಶಗಳ ಪೈಕಿ ಭಾರತವು ಒಂದೊಂದು ಹೇಳಿಕೊಳ್ಳಲಾಗುತ್ತಿದೆ. ಆದರೆ, ಭಯೋತ್ಪಾದನೆಗೆ ಯಾವ ರೀತಿಯ ಕವರೇಜ್ ಕೊಡಬೇಕೆಂಬ ಬಗ್ಗೆ ನಮ್ಮ ಮಾಧ್ಯಮಗಳ ಬಳಿ ಯಾವುದೇ ಒಂದು ನೀತಿ ಹಾಗೂ ಯೋಜನೆಯಿದ್ದಂತೆ ಕಾಣಿಸುವುದಿಲ್ಲ. ಅದು ಅತಿರೇಕಗಳಿಂದ, ಅಸಂಗತಿಗಳಿಂದ ಮಾರಾಟದ ವಸ್ತುವಿನ ಹಾಗೆ ಪ್ರಸ್ತುತಪಡಿಸುತ್ತದೆ. ಎಷ್ಟು ಸಾಧ್ಯವೋ ಅಷ್ಟು ಮಸಾಲೆ ಮಿರ್ಚಿ ಹಾಗೆ ಭಾವೋದ್ರೇಕಗೊಳ್ಳುವಂತೆ ಮಾಡುತ್ತದೆ. ನ್ಯೂಸ್ ಚಾನೆಲ್ ಎಂದರೆ ಒಂದು ಬಗೆಯಲ್ಲಿ ಉರಿಯುತ್ತಿರುವ ಕುಲುಮೆಯಂತೆ ಭಾಸವಾಗುತ್ತದೆ. ಇಡೀ ವಾತಾವರಣವನ್ನೇ ಅದು ತಲ್ಲಣಗೊಳಿಸಿ ಬಿಡುತ್ತದೆ. ಭಯೋತ್ಪಾದಕರು ಯಾವ ಉದ್ದೇಶವನ್ನಿಟ್ಟುಕೊಂಡಿರುತ್ತಾರೋ ಆ ಉದ್ದೇಶವು ಸಂಪೂರ್ಣವಾಗಿ ಈಡೇರಿಬಿಡುತ್ತದೆ. ಆತಂಕವಾದದ ಕವರೇಜ್‌ಗೆ ಯಾವ ಸಂಯಮ ಮತ್ತು ಜವಾಬ್ದಾರಿ ಇರಬೇಕೋ ಅದು ಮಾಯವಾಗಿ ಬಿಡುತ್ತದೆ. ಸತ್ತವರ, ಗಾಯಗೊಂಡವರ ಸಂಖ್ಯೆಯನ್ನು ದ್ವಿಗುಣಗೊಳಿಸಿ, ಮತ್ತೆ ಮತ್ತೆ ಅದದೇ ಭಯಾನಕ ಚಿತ್ರಗಳನ್ನು ತೋರಿಸುತ್ತಾ ಇಡೀ ಸ್ಕ್ರೀನ್ ಬ್ರೇಕಿಂಗ್ ನ್ಯೂಸ್‌ನಿಂದ ಆವರಿಸಿ ಬಿಡುತ್ತದೆ. ಅದಕ್ಕೆ ಸರಿಯಾದ ತಾಳ, ಲಯ, ಸಂಗೀತ ಬೇರೆ. ನಡುನಡುವೆ ಪ್ರತ್ಯಕ್ಷದರ್ಶಿಗಳ ಹೇಳಿಕೆಗಳು. ಏದುಸಿರು ಬಿಡುತ್ತಾ ವಾರ್ತೆ ಒಪ್ಪಿಸುವ ಎಂಕರ್‌ಗಳು. ಒಟ್ಟಿನಲ್ಲಿ ಹಿಂಸಾಮಯ ವಾತಾವರಣ ಎಲ್ಲೆಡೆಗೂ ವ್ಯಾಪಿಸಿ ಬಿಡುತ್ತದೆ.


ಕುರುಡು ರಾಷ್ಟ್ರವಾದ

ಇದರ ಪರಿಣಾಮವಾಗಿ ಪೋಟಾ ಕಾಯ್ದೆಗೆ ಒತ್ತಾಯಿಸಲು ಸಂಘ ಪರಿವಾರದವರಿಗೆ ಉತ್ತಮ ನೆಪ ಸಿಗುತ್ತದೆ. ಸ್ಫೋಟದ ದುರ್ಘಟನೆಗಳು ಎಷ್ಟೆಷ್ಟು ನಡೆಯುತ್ತವೆಯೋ ಮಾಧ್ಯಮಗಳಿಂದಾಗಿ ಅಷ್ಟಷ್ಟು ಓಟುಗಳು ಸಂಘ ಪರಿವಾರದ ಜೋಳಿಗೆಗೆ ತುಂಬಿ ಬಿಡುತ್ತವೆ. ಕುರುಡು ರಾಷ್ಟ್ರ ಭಕ್ತಿ ಗೀತೆಗಳು ಪ್ರಸಾರವಾಗುತ್ತವೆ. ಕುರುಡು ರಾಷ್ಟ್ರವಾದವು ಹಿಂದೂ ರಾಷ್ಟ್ರವಾದವಲ್ಲದೇ ಬೇರೇನೂ ಅಲ್ಲ. ಕ್ರಮಕ್ರಮವಾಗಿ ಎಲ್ಲ ಮುಸಲ್ಮಾನರೂ ಆತಂಕವಾದಿಗಳು ಎಂದು ಭ್ರಮೆ ಹುಟ್ಟಿಸುವಲ್ಲಿ ಮಾಧ್ಯಮಗಳು ಮಹತ್ವದ ಪಾತ್ರ ವಹಿಸುತ್ತಿವೆ. ಮಾಧ್ಯಮಗಳ ಇನ್ನೊಂದು ದುಷ್ಕೃತ್ಯವೆಂದರೆ ಅವುಗಳು ಪೋಲೀಸರು ಕೊಡುವ ಮಾಹಿತಿಯನ್ನೇ ಸತ್ಯವೆಂಬಂತೆ ಪ್ರಸ್ತುತ ಪಡಿಸುವುದು. ಆರುಷಿ ಪ್ರಕರಣದಲ್ಲಿ ಪೋಲೀಸರು ಮತ್ತು ಸಿಬಿಐ ವಹಿಸಿದ ಕುಖ್ಯಾತ ಪಾತ್ರ ಮತ್ತಷ್ಟೇ ಬೆಳಕಿಗೆ ಬಂತು. ಈ ದೇಶದಲ್ಲಿ ಪೋಲೀಸ್ ರೆಕಾರ್ಡ್ ಎಷ್ಟೊಂದು ಅಸತ್ಯಗಳಿಂದ ಕೂಡಿದೆ ಎಂಬುದರ ಬಗೆಗೆ ಮಾಧ್ಯಮಗಳಿಗೆ ಚಿಂತೆಯೇ ಇಲ್ಲ. ಏಕೆಂದರೆ, ಕೋಮುವಾದವು ವ್ಯಾಪಿಸುತ್ತಿರುವಾಗ ಪೋಲೀಸರು ವ್ಯವಸ್ಥೆ ಮತ್ತು ಮಾಧ್ಯಮಗಳು ಜಂಟಿಯಾಗಿ ಸಮರಾಭ್ಯಾಸ ನಡೆಸುತ್ತವೆ.

ನಿರಾಧಾರ ಬಂಧನಗಳು

ಇಂದಿನ ತನಕ ಭಯೋತ್ಪಾದನೆಯ ಆರೋಪದಲ್ಲಿ ಬಂಧಿಸಲ್ಪಟ್ಟವರ ಪೈಕಿ ಕೇವಲ 5 ರಿಂದ 10 ಶೇ. ಜನರಿಗಷ್ಟೇ ಶಿಕ್ಷೆ ನೀಡಲಾಗಿದೆ. ಉಳಿದವರು ಬಹುತೇಕ ನಿರಪರಾಧಿಗಳು. ಈ ವಿಚಾರ ಇತ್ತೀಚೆಗೆ ಪ್ರಕಟಗೊಂಡ 'ಅಜೀತ್‌ಶಾಹಿ' ವರದಿಯಲ್ಲಿ ಪ್ರಕಟಗೊಂಡಿದೆ. ಇಲ್ಲಿ ಪ್ರಶ್ನೆ ಏನೆಂದರೆ, ಈ ಪ್ರಕ್ರಿಯೆಯಲ್ಲಿ ಮಿಕ್ಕುಳಿದ ದೊಡ್ಡ ಸಂಖ್ಯೆಯ ನಿರಪರಾಧಿಗಳ ಭವಿಷ್ಯ ನಿರ್ನಾಮವಾಯಿತು. ಅವರನ್ನು ಪೋಲಿಸರು ಬಂಧಿಸಿದ್ದಾದರೂ ಯಾವ ಆಧಾರದಲ್ಲಿ? ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲದೆ ಅಷ್ಟೊಂದು ದೊಡ್ಡ ಆರೋಪವನ್ನು ಹೊರಿಸಿದ್ದಾದರೂ ಹೇಗೆ? ಅವರೆಲ್ಲಾ ಒಂದು ಪ್ರತ್ಯೇಕ ಸಮುದಾಯಕ್ಕೆ ಸೇರಿರುವುದೇ ಅಪರಾಧವೇ?

ಕಳೆದ ಹತ್ತಾರು ವರ್ಷಗಳಿಂದ ಕಂಡು ಕೇಳಿ ಬರುವ ಸಂಗತಿಯೆಂದರೆ ಸ್ಫೋಟ ಸಂಭವಿಸುವ ತನಕ ತಣ್ಣಗಿರುವ ಗುಪ್ತ ಇಲಾಖೆ ಸ್ಫೋಟ ಸಂಭವಿಸಿದ ಹತ್ತೇ ನಿಮಿಷಗಳಲ್ಲಿ ಆ ಘಟನೆಯನ್ನು ಯಾವುದಾದರೊಂದು (ಮುಸ್ಲಿಂ) ಸಂಘಟನೆಯ ತಲೆಗೆ ಕಟ್ಟಿ ಬಿಡುತ್ತದೆ. ಕೆಲವೊಮ್ಮೆ ನನ್ನಂತಹ ಸಾಮಾನ್ಯನಿಗೆ-ಪೋಲೀಸು ವ್ಯವಸ್ಥೆ ಮತ್ತು ಮೀಡಿಯಾ ಇಡೀ ಮುಸ್ಲಿಂ ಸಮುದಾಯವನ್ನೇ ಹಿಡಿಯಲು ಪ್ರಯತ್ನಿಸುತ್ತಿರುವಂತೆ ಭಾಸವಾಗುತ್ತದೆ.



ಪ್ರಖ್ಯಾತ ಮಾಧ್ಯಮ ವಿಮರ್ಶಕಿಯಾದ ಶೇವಂತಿ ಮೆನನ್ ಭಯೋತ್ಪಾದನೆಯ ಕೋಮುವಾದೀಕರಣದ ಬಗೆಗೆ ಹೀಗೆ ಬರೆಯುತ್ತಾರೆ: 'ದಿಲ್ಲಿಯ ವಿಸ್ಫೋಟದ ಎರಡು ಮೂರು ದಿನಗಳಲ್ಲಿ ಅದಕ್ಕೆ ಕಾರಣರಾದವರೆನ್ನಲಾದ ವ್ಯಕ್ತಿಗಳ ಹೆಸರು, ವಿಳಾಸ, ಕಂಪ್ಯೂಟರ್ ಮಾಹಿತಿ ಇತ್ಯಾದಿಗಳನ್ನು ಪ್ರಕಟಿಸಲಾಗುತ್ತದೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ಒರಿಸ್ಸಾ ಮತ್ತು ಕರ್ನಾಟಕದಲ್ಲಿ ಭಜರಂಗಿಗಳು ಮಾಡಿದ ಭಯೋತ್ಪಾದಕ ಕೃತ್ಯಗಳ ವರದಿಗಳೇನೋ ಬರುತ್ತವೆ. ಆದರೆ, ಅದರಲ್ಲಿ ಭಾಗಿಯಾದವರ ಪತ್ತೆಯೇ ಆಗುವುದಿಲ್ಲ'.

ಇದೇ ಸಂದರ್ಭದಲ್ಲಿ ಚಿಂತಕ ಎಂ.ಜೆ.ಅಕ್ಬರ್ ಅವರ ಈ ಮಾತುಗಳು ಗಮನಾರ್ಹ "ದಿಲ್ಲಿ ವಿಸ್ಫೋಟದ ಬಳಿಕ ಬಂಧಿಸಲಾದ ಮೂವರು ಆರೋಪಿಗಳ ಮುಖಗಳನ್ನು ಕಪ್ಪು ಬಟ್ಟೆಯಿಂದ ಮುಚ್ಚುವುದರ ಬದಲಾಗಿ ಕೆಂಪುಬಣ್ಣದ ಅರಬೀ ಕುಮಾಲಿನಿಂದ ಏಕೆ ಮುಚ್ಚಲಾಯಿತು?

ಪುಟ 6 ಕ್ಕೆ

ಸಂಪಾದಕೀಯ

ಗಣಿ ಬಿಕ್ಕಟ್ಟು : ನಿರ್ಲಕ್ಷ್ಯತನದಲ್ಲಿ ಸರ್ಕಾರ

ರಾಜ್ಯದ ರಾಜಕೀಯ, ಆರ್ಥಿಕ ರಂಗಗಳಲ್ಲಿ ಅಲ್ಲೋಲ ಕಲ್ಲೋಲದ ಪರಿಣಾಮಗಳನ್ನುಂಟು ಮಾಡಿದ 'ಗಣಿಗಾರಿಕೆ' ವಿಷಯ ಇಂದು ಮುಸುಕು ಎಳೆದುಕೊಂಡು ಮೌನ ವಹಿಸಿದಂತೆ ಕಾಣುತ್ತದೆ. ಎಗ್ಗಿಲ್ಲದೇ ಗಣಿಗಾರಿಕೆ ನಡೆಸಿ ಕಬ್ಬಿಣದ ಅದಿರನ್ನು ವಿದೇಶಕ್ಕೆ ರಫ್ತು ಮಾಡುತ್ತಿದ್ದ ವಹಿವಾಟು ಕುಸಿದಿರುವುದೇ ಇದಕ್ಕೆ ಕಾರಣ. ಮುಖ್ಯವಾಗಿ ಅಂತರರಾಷ್ಟ್ರೀಯವಾಗಿ ಕಬ್ಬಿಣ-ಉಕ್ಕಿನ ಬೆಲೆಯಲ್ಲಿ ಆಗಿರುವ ಕುಸಿತ. ಹಾಗೆಯೇ ಜಾಗತಿಕ ಆರ್ಥಿಕ ಮುಗ್ಗಟ್ಟಿನ ದುಷ್ಪರಿಣಾಮಗಳು, ಕಟ್ಟಡ ಇತ್ಯಾದಿ ಕಾಮಗಾರಿಗಳ ಗಣನೀಯ ಸ್ಥಗಿತ, ಬಂಡವಾಳ ಹೂಡಿಕೆ ಹಿಂಜರಿತ ವಿಶೇಷವಾಗಿ ಭಾರತದಿಂದ ಕಬ್ಬಿಣ ಅದಿರನ್ನು ಆಮದು ಮಾಡಿಕೊಳ್ಳುತ್ತಿದ್ದ ನೆರೆಯ ಚೀನಾದಲ್ಲಿ ಒಲಂಪಿಕ್ಸ್ ಕ್ರೀಡೆ ಮುಕ್ತಾಯವಾದದ್ದು ಹಾಗೂ ಅಲ್ಲಿ ಉತ್ಪಾದನೆ ಕಡಿತ... ಹೀಗೆ ಒಟ್ಟಾರೆ ಭಾರತದಿಂದ ಅದರಲ್ಲೂ ಬಳ್ಳಾರಿ, ಚಿತ್ರದುರ್ಗ ಸುತ್ತಲಿನ ಪ್ರದೇಶಗಳಿಂದ ಅದಿರಿನ ರಫ್ತು ಚಲಿಸಲಾರದೇ ಹೋಗಿದೆ.

ಹೊರ ನೋಟದಲ್ಲಿ ಇದು 'ಸ್ತಬ್ಧ'ವೆಂಬಂತೆ ಕಂಡರೂ ಆ ರಂಗದಲ್ಲಿನ ಬೆಳವಣಿಗೆಗಳು, ಅತ್ಯಂತ ಆತಂಕಕಾರಿಯಾಗಿವೆ, ಹಲವಾರು ತಲ್ಲಣ ಕ್ರೌರ್ಯಗಳನ್ನು ಒಡಲಲ್ಲಿಟ್ಟುಕೊಂಡು, ಅದರ ಫಲ ನೀಡುತ್ತಿವೆ. ಪ್ರಮುಖವಾಗಿ ಈ ಗಣಿಗಾರಿಕೆಯನ್ನೇ ನಂಬಿ ಕೆಲಸ ಮಾಡಿ ಗಂಜಿ ಗಳಿಸುತ್ತಿದ್ದ ಲಕ್ಷಾಂತರ ಕಾರ್ಮಿಕರ ಬದುಕು ಅಕ್ಷರಶಃ ಬೀದಿಯ ಮೇಲೆ ಬಿದ್ದಿದೆ. ಒಂದೊತ್ತಿನ ಗಂಜಿಗೂ ಪರಿತಪಿಸು ವಂತಾಗಿದೆ. ಇನ್ನೂ ಮೈನಿಂಗ್ ಸಾಗಾಣಿಕೆಯ ಲಾರಿಗಳಲ್ಲಿ ದುಡಿಯುತ್ತಿದ್ದ ಡ್ರೈವರ್, ಕ್ಲೀನರ್, ಲೋಡರ್‌ಗಳು ಕೆಲಸವಿಲ್ಲದೆ ಪರದಾಡುತ್ತಿದ್ದಾರೆ. ಇದಕ್ಕೆ ಹೊಂದಿಕೊಂಡೇ ಸಾಲ ಸೋಲ ಮಾಡಿ ಲಾರಿಗಳನ್ನು ಕೊಂಡವರು ಬಡ್ಡಿಯನ್ನು ಪಾವತಿ ಮಾಡದೇ ತೆರಿಗೆ ಕಟ್ಟಲೂ ಆಗದೆ ದಿಕ್ಕೇ ದೋಚಲಾಗಿ ದಿವಾಳಿಯನ್ನು ಘೋಷಿಸುತ್ತಿದ್ದಾರೆ. ಚಿತ್ರದುರ್ಗದಲ್ಲಿ ಅಂತಹ ಲಾರಿ ಮಾಲೀಕ ಆತ್ಮಹತ್ಯೆಯನ್ನು ಮಾಡಿಕೊಂಡ ಧಾರುಣ ವರದಿಯಿದೆ. ಇನ್ನು ಅಷ್ಟಿಷ್ಟು ಹಣ ಹಾಕಿ ಹೊಲಗಳಲ್ಲಿ ಗಣಿಗಾರಿಕೆ ಮಾಡುತ್ತಿದ್ದವರು, ಕ್ರಷರ್‌ಗಳಲ್ಲಿ ದುಡಿಯುತ್ತಿದ್ದವರು, ಇದಕ್ಕೆ ಹೊಂದಿಕೊಂಡು ಹೋಟೇಲ್, ಸಣ್ಣಪುಟ್ಟ ವ್ಯಾಪಾರ, ವಹಿವಾಟುಗಳನ್ನು ಅವಲಂಬಿಸಿದವರು.... ಹೀಗೆ ಒಟ್ಟು ಆರ್ಥಿಕ ಚಟುವಟಿಕೆಯೇ ಗರಬಡಿದಂತಾಗಿ ನೆಲಮುಗಿಲು ನೋಡುತ್ತಿದೆ. ಅಕ್ರಮ-ಸಕ್ರಮ ಗಣಿಗಾರಿಕೆಯ ಒಟ್ಟು ಹಾಲೀ ಚಿತ್ರವೇ ಒಂದು ದುರಂತ ಅಧ್ಯಾಯವಾಗಿದೆ.


ಆದರೆ ಇಂತಹ 'ಅಕ್ರಮ-ಸಕ್ರಮ'ಗಳಿಂದ ಮನಸೋಇಚ್ಛೆ ಹಣ ದೋಚಿದ ಗಣಿ ಮಾಲೀಕರು ತಮಗೂ ಇದಕ್ಕೇ ಸಂಬಂಧವೇ ಇಲ್ಲವೆಂಬಂತೆ, ಈ ಬಿಕ್ಕಟ್ಟಿನ ಅವಧಿಯಲ್ಲಿಯೂ ಲಾಭ ಹೊಡೆಯುವ ಲೆಕ್ಕಾಚಾರದಲ್ಲಿ ಇರುವುದು ಅಮಾನವೀಯವೇ ಆಗಿದೆ.

ಇಂತಹ ಸ್ಥಿತಿಯಲ್ಲಿ ಸಂಕಷ್ಟದಲ್ಲಿರುವ ಜನರ ನೆರವಿಗೆ ಬರಬೇಕಾಗಿರುವ ರಾಜ್ಯ ಸರ್ಕಾರವು ನಿರ್ಲಕ್ಷ್ಯತನದಿಂದ ನಿರ್ಲಿಪ್ತವಾಗಿರುವುದು ಬೇಜವಾಬ್ದಾರಿತನದ ಪರಮಾವಧಿಯೇ. ಅಲ್ಲಿಗೆ ಭೇಟಿ ಮಾಡಿದ ಬಿಜೆಪಿ ಅಧ್ಯಕ್ಷ ಸದಾನಂದಗೌಡ, ಗ್ರಾಮೀಣಾಭಿವೃದ್ಧಿ ಸಚಿವೆ ಶೋಭಾ ಕರಂದ್ಲಾಜೆ, ಅಲ್ಲೆ ಠಿಕಾಣಿ ಹೂಡಿರುವ ಜಿಲ್ಲಾ ಉಸ್ತುವಾರಿ ಸಚಿವರು, ಮುಖ್ಯಮಂತ್ರಿಯಾಗಲೀ ಈ ಬಗ್ಗೆ ಚಕಾರವೆತ್ತದೇ ಇರುವುದು ಖಂಡನೀಯ.

ಈ ಹಿನ್ನೆಲೆಯಲ್ಲಿ ಈಗಲಾದರೂ ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಬೇಕು. ಈ ಬಿಕ್ಕಟ್ಟಿನ ಪ್ರಮಾಣ, ವಿವಿಧ ವಿಭಾಗಗಳ ಮೇಲೆ ಅದರ ಪರಿಣಾಮಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿ ಒಂದು ವರದಿ ಸಿದ್ಧಪಡಿಸಲು ಸಮಿತಿಯೊಂದನ್ನು ಕಾರ್ಯತತ್ಪರಗೊಳಿಸಬೇಕು. ಲಾಭ ಬರುವಾಗ ದೋಚಿ, ಅನುಭವಿಸಿ ಈಗ ತಿರಸ್ಕರಿಸಿ ಸುಮ್ಮನಾಗದೇ ಜನರನ್ನು ರಕ್ಷಿಸಲು ಮುಂದಾಗಬೇಕು. ರಾಜ್ಯ ಸರ್ಕಾರ ಪರಿಹಾರದ ಪ್ಯಾಕೇಜ್ ಘೋಷಿಸಿ ಕಾರ್ಯಗತಗೊಳಿಸಬೇಕು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯ ಯೋಜನೆಯನ್ನು ವ್ಯಾಪಕವಾಗಿ ಅನುಷ್ಠಾನಕ್ಕೆ ತುರ್ತಾಗಿ ತೀವ್ರವಾಗಿ ತರಬೇಕು. ಇದಕ್ಕಾಗಿ ಹೆಚ್ಚಿನ ಹಣಕಾಸು ಬಿಡುಗಡೆಗೊಳಿಸಬೇಕು, ತೊಡಗಿಸಬೇಕು. ಹಾಗೂ ಈಗಾಗಲೇ ಇರುವ ಗಣಿ ಕಾರ್ಮಿಕರ ಕಲ್ಯಾಣನಿಧಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರ ಹೆಚ್ಚು ಹಣ ನೀಡಿ ಅದರ ಪ್ರಯೋಜನ ಅಲ್ಲಿನ ಕೆಲಸಗಾರರಿಗೆ ಸಿಗುವಂತಾಗಬೇಕು; ಇದರಿಂದಾಗಿ ಮುಖ್ಯವಾಗಿ ಗಣಿ ಧಣಿಗಳು ಸೂರೆಗೊಂಡಿರುವ ಸಂಪತ್ತಿನ ಮೇಲೆ ಅವರು ಮಾಡಿದ ರಫ್ತು ಆಧರಿಸಿ, ಸೆಸ್ ಟ್ಯಾಕ್ಸ್ ಹಾಕಿ ಹಣ ಸಂಗ್ರಹಿಸಬೇಕು. ಇದು ತುರ್ತಾಗಿ ಸಮರೋಪಾದಿಯಲ್ಲಿ ಆಗಬೇಕಾದ ಕೆಲಸ. ಹಾಗೆಯೇ ಮುಂದಾದರೂ ಕಬ್ಬಿಣದ ಅದಿರು ರಫ್ತು ನಿಲ್ಲಿಸಿ, ದೇಶಿಯ ಅಗತ್ಯಕ್ಕೆ ಅನುಗುಣವಾಗಿ ಉತ್ಪಾದನಾ ಕೈಗಾರಿಕೆ ಸ್ಥಾಪಿಸುವುದೇ ಆದ್ಯತೆಯ ಪರಿಗಣಿಸುವುದು ಅಗತ್ಯ.

ಪರಿಸ್ಥಿತಿ ಇಷ್ಟು ಗಂಭೀರವಾಗಿರುವಾಗ ಸಚಿವರು, ಮುಖ್ಯಮಂತ್ರಿಗಳು ಉತ್ಸವ, ವಿಹಾರಗಳಲ್ಲಿ ಮಗ್ನರಾಗಿದ್ದಾರೆ. ಅಂದರೆ ಈ ಸರ್ಕಾರದ ಆದ್ಯತೆಗಳೇನು? ದುಡಿವ ಜನರ ರಕ್ಷಣೆಗೆ ಎಲ್ಲಿದೆ ಕಿಮ್ಮತ್ತು...

ಜೆಡಿ(ಎಸ್)ನ ಪುನಶ್ಚೇತನ ಪ್ರಯತ್ನ



ಬಿಜೆಪಿ-ಕಾಂಗ್ರೆಸ್ ಪಕ್ಷಗಳಿಗೆದುರಾಗಿ ಮೂರನೆಯ ಜಾತ್ಯತೀತ ಪರ್ಯಾಯ ರೂಪುಗೊಳ್ಳುವಲ್ಲಿ ಜೆಡಿ(ಎಸ್)ಗೆ ಮಹತ್ವದ ಪಾತ್ರವಿದೆ. ಆ ದಿಶೆಯಲ್ಲಿ ಅದರ ಯತ್ನಕ್ಕೆ ಜನತೆಯ ಪ್ರೋತ್ಸಾಹವೂ ಸಿಕ್ಕಿದೆ. ಆದರೆ ಮುಂದಡಿ ಇಡುವಾಗ ಸ್ಪಷ್ಟ ನಿಲುವು ಅಗತ್ಯ.

'ಬದುಕಿ ಉಳಿದದ್ದೇ ದೊಡ್ಡಾತ್ ಆದಾರೀ... ನಾನೀಗ ಅಗದೀ ಫಸ್ಟ್ ಕ್ಲಾಸ್ ಇದ್ರೇನ್ರೀ, ಹಾರ್ಟ್ ಚಲೋ ನಡೆದದಾ, ಏಕದಂ ಠೀಕ್".. ಹೀಗೆ ಶಸ್ತ್ರ ಚಿಕಿತ್ಸೆ ಒಳಗಾದ ತಮ್ಮ ಹೃದಯದ ಬಗ್ಗೆ ನಾನು ವಿಚಾರಿಸಿದಾಗ ಹೇಳಿದರು ಮಿರಾಜುದ್ದೀನ್ ಪಟೇಲ್‌ರು. ಭಾರತ-ಅಮೇರಿಕಾ ಅಣು ಒಪ್ಪಂದ ವಿರೋಧಿಸಿ ಎಡಪಕ್ಷಗಳು, ಜೆಡಿ(ಎಸ್) ಮತ್ತಿತರೆ ಸಂಘಟನೆಗಳು ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆ ಬಳಿಕ ಕುಲಶೋಪರಿಯಲ್ಲಿ ಹೀಗೆ ಅಂದಿದ್ದರು. ಪಟೇಲರ ಮಾತು ಖಡಕ್ ಬೀದರ್‌ನದ್ದೇ. ಅತೀ ಸರಳ-ಸುಂದರವಾಗಿ ವಿಚಾರಗಳನ್ನು ಜನರಿಗೆ ತಲುಪಿಸುವ ಕುಶಲತೆ ಅವರಲ್ಲಿತ್ತು. ಅದನ್ನು ಹಲವಾರು ಪ್ರಸಂಗಗಳಲ್ಲಿ ನಾನು ಗಮನಿಸಿದ್ದೇನೆ. ಅಣು ಒಪ್ಪಂದ ಬಗ್ಗೆ ಮಾತನಾಡುತ್ತಾ 'ಅಲ್ಲಿ ಅವ ಬುಷ್ಷಾ, ಎಲೆಕ್ಷನ್ ಆದ ಮ್ಯಾಲ ಮನೆಗೆ ಹೋಗೋವ ಅದಾನ, ಇಲ್ಲಿ ಮನಮೋಹನಸಿಂಗ್ ಅದೇ ಹಾದಿ ಹಿಡ್ಯಾನ್ನೇ... ಇಬ್ಬರು ಕೂಡಿ, ನಮ್ ಜನರಿಗೆ ಟೊಪ್ಪಿಗಿ ಹಾಕಾಕ ಹೊಂಟಾರ...' ಹೀಗೆ ಅಲ್ಲಿತ್ತು ಅವರ ಧಾಟಿ.

ಜೆಡಿ(ಎಸ್)ಗೆ ಹೊಸ ನಾಯಕತ್ವ

ಆದರೆ ಫಸ್ಟ್ ಕ್ಲಾಸ್ ಇದ್ದ ಹೃದಯ ಏಕ್‌ದಂ ಲಬ್‌ಡಬ್ ಅಂಬೋದನ್ನ ನಿಲ್ಲಿಸಿಬಿಡ್ತು. ಹಿಂಗಾದೀತು ಅಂತಾ ಯಾರೂ ಊಹಿಸಿರಲಿಲ್ಲ. ಅದು ಅನಿರೀಕ್ಷಿತ... ಹೀಗಾಗಿ ಜೆಡಿ(ಎಸ್) ಪಕ್ಷವು ಅಧ್ಯಕ್ಷರನ್ನು ಕಳೆದುಕೊಂಡು ಬಳಿಕ ಹೊಸ ಅಧ್ಯಕ್ಷರ ನೇಮಕದಲ್ಲಿ ತೊಡಗಿದ್ದು ಸಹಜವೇ.. ಅವರ ಆಯ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಈ ಆಯ್ಕೆ ಬಗ್ಗೆ ಹಲವರಿಗೆ ಹಲವು ಅಭಿಪ್ರಾಯಗಳಿರಬಹುದು. ಪಕ್ಷದ ನಾಯಕ ಯಾರಾಗಬೇಕೆಂಬುದು ಅವರ ಆಂತರಿಕ ತೀರ್ಮಾನ. ಹೀಗಿರುವಾಗ ಅದನ್ನು ಒಂದು ರಂಜನೀಯ ರಂಪ ಮಾಡುವ ಮಾಧ್ಯಮಗಳ ಉದ್ದೇಶ ಸದಾ ಪ್ರಶ್ನಾರ್ಹವೇ. 'ಕುಮಾರನ ಪಟ್ಟಾಭಿಷೇಕ'ವೆಂದು ಮಾಧ್ಯಮಗಳು ಕರೆದ ನವೆಂಬರ್ 17ರ ಬೃಹತ್ ರ್ಯಾಲಿ 'ಕಾಯಕಲ್ಪ ಪ್ರತಿಜ್ಞೆ ಸಮಾವೇಶ' ಗಮನಾರ್ಹವೇ ಆಗಿತ್ತು. ಈ ಕಾರ್ಯಕ್ರಮಕ್ಕೆ ಸೇರಿದ್ದು ಮಾಧ್ಯಮವೇ ಕಣ್ಣು ಬಿಟ್ಟು ವರ್ಣಿಸಿದಂತೆ ಎರಡೂ ಕಾಲು ಲಕ್ಷ. ಅದರ ಸಂಘಟಕರೇ ಈ ಮೊದಲು ಹೇಳಿದಂತೆ 'ಜಾತ್ಯಾತೀತ ಜನತಾದಳ ಇನ್ನೆಲ್ಲಿ' ಎಂಬುವವರಿಗೆ ಒಂದು ಉತ್ತರ... ಇದು.

ಹೌದು! ಇದು ಪ್ರಮುಖ ರಾಜಕೀಯ ಘಟನೆ ಎಂಬುದರಲ್ಲಿ ಅನುಮಾನವಿಲ್ಲ. ಈ ಮೂಲಕ ಜೆಡಿ(ಎಸ್) ತನ್ನ ಅಸ್ತಿತ್ವ ಸಾಬೀತುಪಡಿಸುವ ಯತ್ನವೂ ಇದಾಗಿದೆ. ರಾಷ್ಟ್ರದ-ರಾಜ್ಯದ ರಾಜಕೀಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಎದುರಿಸಿ ಮೂರನೇಯ ಜಾತ್ಯಾತೀತ ಶಕ್ತಿ ಬೆಳವಣಿಗೆಯ ಪ್ರಯತ್ನಗಳ ಹಿನ್ನೆಲೆಯಲ್ಲಿ ಇದು ಸ್ವಾಗತಾರ್ಹವೇ. ಇಂತಹ ಶಕ್ತಿಯನ್ನು ರಾಜ್ಯದಲ್ಲಿ ಹೇಗೆಲ್ಲಾ ರಾಜಕೀಯವಾಗಿ ಸಂಘಟನಾತ್ಮಕವಾಗಿ ಕ್ರಿಯಾಶೀಲವಾಗಿ ತೊಡಗಿಸಬೇಕೆಂಬುದು ಹಾಗೂ ಎಡಪಕ್ಷಗಳೊಡಗೂಡಿದ ಮೂರನೇ ಪರ್ಯಾಯ ಕಟ್ಟಲು ಹೇಗೆಲ್ಲಾ ಮುಂದಾಗಬೇಕು ಎಂಬುದೂ ಇಂದಿನ ಪ್ರಶ್ನೆ. ಇದರೊಟ್ಟಿಗೆ ಮುಖ್ಯವಾಗಿ ಸಂಕಷ್ಟದಲ್ಲಿರುವ ಜನರಿಗೆ ಸ್ಪಂದಿಸುವ ಸಂಗತಿಯೂ ಕೋಮುವಾದಿ ಫಾಶಿಸ್ಟ್ ಶಕ್ತಿಗಳ ಅಟ್ಟಹಾಸಕ್ಕೆ ತಡೆ ಹಾಕುವ ಮಹತ್ತರ ರಾಜಕೀಯ ಹೊಣೆಗಾರಿಕೆ ಕೂಡಾ ಜೊತೆಯಲ್ಲೇ ಈ ದಿಕ್ಕಿನಲ್ಲಿ ಜೆಡಿ(ಎಸ್) ನಾಯಕತ್ವ ಕಾರ್ಯತತ್ಪರವಾಗುವುದು ಅಗತ್ಯ.

ಅನಗತ್ಯ ಹೇಳಿಕೆಗಳು

ಇದೇ ಸಂದರ್ಭದಲ್ಲಿ 'ಜೆಡಿ(ಎಸ್) ತಾನೊಂದು ಪ್ರಾದೇಶಿಕ ಪಕ್ಷ ಎಂದು, ಭಿನ್ನ ಎಂದು ಗುರುತಿಸಿಕೊಳ್ಳುವ ಭರದಲ್ಲಿ ರಾಷ್ಟ್ರೀಯ ಪಕ್ಷಗಳ ಬಗೆಗಿನ ಮಾತುಗಳು ಅನಗತ್ಯ, ಅನಪೇಕ್ಷಿತ. ಇಂತಹ ಮಾತುಗಳು ಜೆಡಿ(ಎಸ್)ಗೆ ಇಂದಿನ ಸ್ಥಿತಿಯಲ್ಲಿ ಹೆಚ್ಚಿನ ಬೋನಸ್ ತರುವುದಿಲ್ಲ. ರಾಷ್ಟ್ರೀಯ, ಪ್ರಾದೇಶಿಕ ಎಂಬಂತಹ ವಿಷಯದಲ್ಲಿ ಎರಡನ್ನು ಮುಖಾಮುಖಿಯಾಗಿ ನಿಲ್ಲಿಸುವುದು ಅನರ್ಥವನ್ನೇ ತಂದೀತು ಎಂಬ ಎಚ್ಚರ ಅಗತ್ಯ. ಈ ಕುರಿತು ಬೇರೆ ಪಕ್ಷಗಳ ಬಗ್ಗೆ ಅವರಿಗೆ ಟೀಕೆ ಇದ್ದಲ್ಲಿ ನಿರ್ದಿಷ್ಟವಾಗಿಯೇ ಹೇಳಬಹುದಿತ್ತು. ಆದರೆ ಅವರು ರಾಷ್ಟ್ರೀಯ ರಾಜಕಾರಣದ ಒಟ್ಟು ಚೌಕಟ್ಟಿನಾಚೆ ನಿಂತವರಂತೆ ಮಾತನಾಡುವುದರ


ಅಣಿನೆರೆದ ಲಕ್ಷಾಂತರ ಜನ

ಅಗತ್ಯವೇನಿದೆ? ನಾಡಿನ ನೆಲದ ಸೊಗಡು ಹೊಂದಿ ರಾಷ್ಟ್ರಮಟ್ಟದಲ್ಲಿ ಬೆಳೆವವರಿಗೆ ಅಡ್ಡಿ ಎಲ್ಲಿದೆ?

ಮಾಧ್ಯಮ: ಕೇಸರಿ ಪಡೆಯ ಕಾರ್ಯಾಚರಣೆ

ಅಂತೂ ಇಂತಹ ಒಂದು ಗಮನಾರ್ಹ ರಾಜಕೀಯ ಘಟನೆಗೆ ನಮ್ಮ ಮಾಧ್ಯಮಗಳು ಮಸಿ ಬಳಿದ ರೀತಿ ಖಂಡನೀಯವೇ. ಟೈಮ್ಸ್‌ನಂತಹ ಕೆಲವು ಇಂಗ್ಲೀಷ್ ಪತ್ರಿಕೆಗಳೂ, ಅದರೊಟ್ಟಿಗೆ ಪ್ರಜಾವಾಣಿ ಇತ್ಯಾದಿ, ಕನ್ನಡದ ಬಹುಪ್ರಸಾರಿತ ಪತ್ರಿಕೆಗಳೂ ಟ್ರಾಫಿಕ್ ಜಾಮ್‌ನ್ನೇ ಪ್ರಧಾನ ವಿವಾದಿತ ವಿಷಯವಾಗಿಸಿದವು. ಸಮಾವೇಶದಲ್ಲಿ ಎತ್ತಿದ ಪ್ರಶ್ನೆಗಳನ್ನು ವಿವಾದವಾಗಿಸಿ, ಚರ್ಚಿಸಿದ್ದರೆ ಅದಕ್ಕೆ ಒಂದು ಅರ್ಥವಾದರೂ ಬರುತ್ತಿತ್ತೇನೋ. ಆದರೆ ಹಾಗೆ ಮಾಡಲಿಲ್ಲ.

ಹಾಗೆಯೇ ಅದೇ ವೇಳೆ ಇಂತಹ ಬೃಹತ್ ರ್ಯಾಲಿಯ ಬಗ್ಗೆ ಬಹುಮುಂಚೆಯೇ ಆಡಳಿತಕ್ಕೆ ಲಿಖಿತವಾದ ಪತ್ರ ನೀಡಿ ಅಗತ್ಯ ಕ್ರಮ ವಹಿಸಿ ಎಂದು ಜೆಡಿ(ಎಸ್) ಕೋರಿದ್ದ ಬಗ್ಗೆ ಈ ಮಾಧ್ಯಮಗಳು ಎಲ್ಲೂ ಪ್ರಸ್ತಾಪಿಸಿರಲಿಲ್ಲ. ಬೇಕೆಂದೇ ಇಂತಹ ಅವಾಂತರದ ವಾತಾವರಣ ಸೃಷ್ಟಿಯಾಗಲಿ ಎಂದು ಸರ್ಕಾರ ಬಯಸಿ ಹೀಗೆ ಮಾಡೀತೇ?

ಪುಟ 15ಕ್ಕೆ

ಬೆಂಗಳೂರು : ಕಟ್ಟಡ ಕಾರ್ಮಿಕರು ಸಮ್ಮೇಳನದತ್ತ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಬಿಟ್ಟು ಭೂಮಿಯನ್ನು ಒಮ್ಮೆ ಯೋಚಿಸುವುದು ಎಂದರೆ, ಆದಿ ಮಾನವರು ಕಾಡುಗಳ ಗುಹೆಗಳಲ್ಲಿನ ಜೀವನದ ಚಿತ್ರಣ ಕಣ್ಣ ಮುಂದೆ ಬಂದು ನಿಲ್ಲುತ್ತದೆ, ಆದುದರಿಂದಲೇ ಇಡೀ ಜಗತ್ತನ್ನು ಕಟ್ಟುವವರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು. ಕಟ್ಟಡ ನಿರ್ಮಾಣ ಕೈಗಾರಿಕೆ ಪುರಾತನ ಕೈಗಾರಿಕೆಯಾಗಿದೆ. ಕಟ್ಟಡ ನಿರ್ಮಿಸಲು ದುಡಿಯುತ್ತಿರುವ ಕಾರ್ಮಿಕರು ಪುರಾತನ ಕಾರ್ಮಿಕರಾಗಿದ್ದಾರೆ.

'ಅಬ್ಬ ಬೆಂಗಳೂರು ಎಷ್ ಬೆಳೆದಿದೆ' ಬೆಂಗಳೂರಿನಲ್ಲಿ ಇಂದು ಕಟ್ಟಡ ಕೈಗಾರಿಕೆ ಪ್ರಧಾನ ಕೈಗಾರಿಕೆ, 50 ಕಿ.ಮೀ. ಸುತ್ತಳತೆಯಲ್ಲಿ ಬೆಳೆಯುತ್ತಿರುವ ಕಟ್ಟಡ ನಿರ್ಮಾಣ, ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ದೊಡ್ಡ ದೊಡ್ಡ ಫ್ಲೈಓವರ್‌ಗಳಲ್ಲಿ ಇಂದು ಲಕ್ಷಾಂತರ ಕಾರ್ಮಿಕರು ದುಡಿಯುತ್ತಿದ್ದಾರೆ. ಯಾವುದೇ ದೊಡ್ಡ ಕಟ್ಟಡ ನಿರ್ಮಾಣದ ಬಳಿ ಹೋಗಿ ಅಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಮಾತನಾಡಿದರೆ, ಇಡೀ ಭಾರತವೇ ನಮಗೆ ಕಾಣಸುತ್ತದೆ. ಮಹಾರಾಷ್ಟ್ರ, ಬಿಹಾರ, ಒರಿಸ್ಸಾ, ಗುಜರಾತ್, ಉತ್ತರ ಪ್ರದೇಶ, ಪಶ್ಚಿಮಬಂಗಾಳ, ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಕರ್ನಾಟಕದ ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಮೈಸೂರು, ಮಂಡ್ಯ, ಹೀಗೆ ಬೇರೆ ಬೇರೆ ರಾಜ್ಯ ಬೇರೆ ಬೇರೆ ಜಿಲ್ಲೆಗಳಿಂದ ಬಂದು ಭಾಷೆ, ಜಾತಿ, ಧರ್ಮ, ಬೇಧ ಮರೆತು ಭಾವೈಕ್ಯತೆಯಿಂದ ದುಡಿದು ಬೆಂಗಳೂರನ್ನು ಕಟ್ಟುತ್ತಿದ್ದಾರೆ.

ದೇಶದ ಕೃಷಿ ಬಿಕ್ಕಟ್ಟು ಭೂಮಿಯ ಕರುಳ ಬಳ್ಳಿಯಿಂದ ಕಿತ್ತು ದೂರದ ನಗರಗಳಲ್ಲಿ ಬಂದು ಜಗಮಗಿಸುವ ಆಧುನಿಕ ಕಟ್ಟಡ ನಿರ್ಮಾಣದಲ್ಲಿ ದುಡಿಯುವ ಕಾರ್ಮಿಕರಿಗೆ ಸದಾ ಜೊತೆಯಲ್ಲಿ ಇರುವುದು ಉದ್ಯೋಗದ ಮತ್ತು ಆದಾಯದ ಅಭದ್ರತೆ, ನಿರ್ಮಾಣ ಕೆಲಸಗಳಲ್ಲಿ ಆಗುತ್ತಿರುವ ಅಪಘಾತಗಳು, ಕನಿಷ್ಠ ಮಾನವ ಅವಶ್ಯಕತೆಗಳಾದ ಕುಡಿಯುವ ನೀರು, ಶೌಚಾಲಯಗಳಿಲ್ಲದ ಶೆಡ್‌ಗಳು, ದುಡಿದು, ದುಡಿದು ಸವಕಲಾದ ಬಡಕಲು ದೇಹ, ಒಂದು



ಕಟ್ಟಡ ನಿರ್ಮಾಣ ಪೂರ್ಣಗೊಂಡ ನಂತರ ಇನ್ನೊಂದನ್ನು ಹುಡುಕುವ ಅಲೆಮಾರಿ ಬದುಕು. ಇದರಿಂದ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಇವರಿಗೆ ಆಗುವುದಿಲ್ಲ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ದೇಶದಾದ್ಯಂತ ಸಂಘಟಿತರಾಗಿ ಹೋರಾಟ ನಡೆಸಿದ ಫಲವಾಗಿ, ಎಡಪಕ್ಷಗಳ ಒತ್ತಡದಿಂದ "1996ರಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಮೀಕರಣ ಮತ್ತು ಕಾರ್ಮಿಕೀಕರಣ ಕಾಯ್ದೆ" ಕೇಂದ್ರ ಸರ್ಕಾರ ಜಾರಿಗೆ ತಂದಿತು. ಈ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಲು ಮತ್ತೆ ಹತ್ತು ವರ್ಷಗಳು ಹೋರಾಟವನ್ನು ಕಾರ್ಮಿಕರು ನಡೆಸಿದರು.ಇಂದು ಜಗತ್ತಿನ ಆರ್ಥಿಕ ಕುಸಿತ ಮತ್ತು ನಿರ್ಮಾಣ ಸಾಮಗ್ರಿಗಳಾದ ಸಿಮೆಂಟ್, ಕಬ್ಬಿಣ, ಮರಳು, ಮುಂತಾದ ವಸ್ತುಗಳ ಬೆಲೆಗಳು ವಿಪರೀತ ಏರಿಕೆಯಾಗಿ ಕೈಗಾರಿಕೆ ಬೆಳವಣಿಗೆಗೆ ತಡೆಯಾಗುತ್ತಿದೆ. ಮತ್ತು ಕಟ್ಟಡ ಕಾರ್ಮಿಕರು ಇಂದು "ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ" ಯಲ್ಲಿ ನೋಂದಾಯಿಸಿಕೊಂಡು ವರ್ಷಕ್ಕೆ 120 ರೂ.ಗಳನ್ನು ಕಟ್ಟುವ ಮುಖಾಂತರ 12 ಕಲ್ಯಾಣ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

ಕೈಗಾರಿಕೆ ಬೆಳವಣಿಗೆಗೆ ಸಹಕಾರಿಯಗುವ ಹೋರಾಟಕ್ಕೆ ಮತ್ತು ಸರ್ಕಾರದ ಕಲ್ಯಾಣ ಸೌಲಭ್ಯಗಳನ್ನು ಪಡೆಯುವ ಅರಿವನ್ನು ಕಾರ್ಮಿಕರಿಗೆ ಇಂದು ದೊಡ್ಡ ರೀತಿಯಲ್ಲಿ ನೀಡಬೇಕಾಗಿದೆ. ಈ ದಿಕ್ಕಿನಲ್ಲಿ ಸಿಐಟಿಯು ನೇತೃತ್ವದ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಡಬ್ಲ್ಯೂಎಫ್‌ಐ) ಸಂಘಟನೆಯ ಬೆಂಗಳೂರು ಜಿಲ್ಲಾ ಪ್ರಥಮ ಸಮ್ಮೇಳನವು ದಿನಾಂಕ:28-12-2008ರಂದು ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿರುವ ಎನ್‌ಜಿಓ ಹಾಲ್‌ನಲ್ಲಿ ನಡೆಯಲಿದೆ.

ಅದಕ್ಕೆ ವಿಶಾಲ ಸಹೃದಯರನ್ನೊಳಗೊಂಡ ಸ್ವಾಗತ ಸಮಿತಿ ರಚಿಸಲಾಗಿದೆ. ಸಭೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರು ಹಾಗೂ ಕಟ್ಟಡ ಕಾರ್ಮಿಕರ ರಾಜ್ಯ ಫೆಡರೇಷನ್‌ನ ಅಧ್ಯಕ್ಷರು ಆದ ಕಾಂ: ವಿ.ಮಾಧವರವರು ಮುಂತಾದ ನಾಯಕರು ಹಾಜರಿದ್ದು ಮಾರ್ಗದರ್ಶನ ನೀಡಿದರು.ಅದರಂತೆ ಗೌರವ ಅಧ್ಯಕ್ಷರಾಗಿ ವಕೀಲರಾದ ಕೆ.ಆರ್.ವೆಂಕಟೇಶ್‌ಗೌಡ, ಅಧ್ಯಕ್ಷರಾಗಿ ಡಿ.ನಾರಾಯಣಸ್ವಾಮಿ, ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಶಂಕರ್, ಖಜಾಂಜಿಯಾಗಿ ಎಂ.ಆರ್.ಶೆಣೈ ಮುಂತಾದವರನ್ನು ಒಳಗೊಂಡು 100 ಜನರ ಸ್ವಾಗತಿ ಸಮಿತಿ ರಚನೆಯಾಗಿ ಸಮ್ಮೇಳನದ ಯಶಸ್ವಿಗೆ ಕೆಲಸ ಮಾಡಲು ಆರಂಭಿಸಿದ್ದಾರೆ.

ವರದಿ : ಎಸ್.ಶಂಕರ್

ಜಗದ ಬೆಳಕುಗಳು

ಬುದ್ಧ ಗೆಲಿಲಿಯೋ ಲೂಯಿ ಪಾಶ್ಚರ್ ಮತ್ತು
ಮಾರ್ಕ್ಸ್ ಲೆನಿನ್‌ರೇ ಈ ಜಗದ ಸೊತ್ತು
ಈ ಮಹಾ ಪುರುಷರುಗಳು ಕಂಡಿರುವ ಸತ್ಯ
ಜಗಕೆಲ್ಲ ಬೆಳಕನ್ನು ನೀಡುತಿದೆ ನಿತ್ಯ

ಜೋತಿಷ್ಯ

ಒಂದು ಅವಘಡದಲ್ಲಿ ಹಲವಾರು ಸಾವು
ಆಗುವುದ ಈ ಹೊತ್ತು ಕಾಣವಿರಿ ನೀವು
ಸತ್ತ ಮಂದಿಗಳ ಜಾತಕದಿ ಮತ್ತೆ
ಆ ದಿನವೆ ಸಾವೆಂದು ಬರೆಯಲಾಗಿತ್ತೆ

- ವಿಡಂಬಾರಿ

ಕರೆಂಟನ್ನ ಕಳ್ರು ಕದ್ಕೊಂಡೋಗಿದಾರಂತೆ !

'ಸನ್ಮಾನ ಬೇಡಿ, ವಿಧಾನ ಸೌಧದಲ್ಲಿ ಕೂತು ಸ್ವಲ್ಪ ಕೆಲಸ ಮಾಡಲು ಬಿಡಿ' ಅಂತ ಸನ್ಮಾನ್ಯ ಶ್ರೀ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅಧಿಕಾರಕ್ಕೆ 'ಇಳಿದಾಗಿಂದ' (ಸಾಮಾನ್ಯವಾಗಿ ಎಲ್ಲರೂ ಅಧಿಕಾರಕ್ಕೆ ಏರುತ್ತಾರೆ, ಆದರೆ ಇದು ಸ್ವಲ್ಪ ಡಿಫರೆಂಟ್ ಕೇಸು) ಸನ್ಮಾನಗಳ ಸುಖ ನಿದ್ರೆಯಲ್ಲಿರುವ ಮಹಾಶಯರು ಈಗ ಸ್ವಲ್ಪ ಎಚ್ಚರವಾಗುತ್ತಿದ್ದಾರೆಯೋ, ಅಥವಾ ಇನ್ನೂ ಇದುವರೆಗೂ ಸನ್ಮಾನ ಏರ್ಪಡಿಸದವರಿಗೆ ಸೂಚನೆಯೋ ತಿಳಿಯದು. ಸನ್ಮಾನಗಳ ಸುಖ ನಿದ್ರೆಯಲ್ಲಿರುವವರಿಗೆ, ರೈತರ ಮೇಲೆ ಗೋಲಿಬಾರ್ ಆದಂತಹ ದುರಂತಗಳು, ಚರ್ಚ್‌ಗಳ ಮೇಲಿನ ಭಯೋತ್ಪಾದನಾ ದಾಳಿಗಳು, ಕಗ್ಗತ್ತಲಲ್ಲಿ ಮುಳುಗಿರುವ ಕರ್ನಾಟಕ, ಬೆಲೆಯೇರಿಕೆಯಿಂದ ತತ್ತರಿಸಿರುವ ಜನತೆಯ ಆಕ್ರಂದನ, ಮುಂತಾದ ವಿಷಯಗಳು ಸೊಳ್ಳೆ ಕಚ್ಚಿದಂತೆ, ಸೊಳ್ಳೆ ಗುಯ್ ಗುಟ್ಟಿದಂತೆ ನಿದ್ರೆಗೆ ಸ್ವಲ್ಪ ತೊಂದರೆ ಕೊಟ್ಟಿವೆಯೇನೋ? ಆಗಿರುವ ಸನ್ಮಾನಗಳ ಲೆಕ್ಕ ಇಟ್ಟಿದ್ದರೆ ಗಿನ್ನಿಸ್ ದಾಖಲೆಗೆ ಪ್ರಯತ್ನಿಸಬಹುದೇನೋ. ಏನೇ ಆಗಲಿ, ಕೂತು ಕೆಲಸ ಮಾಡಿಲ್ಲ, ಅಧಿಕಾರಿಗಳ ಮೇಲೆ ಹಿಡಿತ ಇಲ್ಲ, ಯಥಾ ಮಂತ್ರಿ ತಥಾ ಅಧಿಕಾರಿ ಎಂಬಂತೆ ಅವರೂ ಕೆಲಸ ಮಾಡಿಲ್ಲ ಅಂತ ಒಪ್ಪಿಕೊಂಡಿದ್ದಾರಲ್ಲ. ಅಭಿನಂದನೆಗಳು!

ವಿದ್ಯುತ್ ಕ್ಷಾಮಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಕಾರಣ ಕಂಡು ಹಿಡಿದಿದ್ದಾರೆ. ವಿದ್ಯುತ್ತನ್ನು ಕಳ್ರು ಕದ್ದುಕೊಂಡು ಹೋಗಿಬಿಟ್ಟಿದ್ದಾರಂತೆ! ಇಂಥ ಅಭಾವದ ಕಾಲದಲ್ಲಿ ಕದಿಯುವವರನ್ನು ಜೈಲಿಗೆ ಹಾಕುವುದಾಗಿ ಎಚ್ಚರಿಕೆ ಕೊಟ್ಟಿದ್ದಾರೆ. (ಅಂದರೆ ಸಮೃದ್ಧಿಯಾಗಿದ್ದಾಗ ಕದ್ಕೊಳಿ ಪರವಾಗಿಲ್ಲ ಅಂತನೋ ಏನೋ? ಅರ್ಥ ಆಗ್ತಿಲ್ಲ) ಆ ಕಳ್ಳರನ್ನೇನೋ ಜೈಲಿಗೆ ಹಾಕಬಹುದು ಕಣ್ರೀ, ಆದರೆ ನಮ್ಮೂರ ಜೈಲು, ಜೈಲಿನ ಸಾವಿರಾರು ಎಕರೆ ಜಾಗ ಎಲ್ಲವನ್ನೂ ಕದಿಯಲು ಸ್ಕೆಚ್ ಹಾಕುವವರು ವಿಧಾನ ಸೌಧದ ಸಿಂಹಾಸನಗಳಲ್ಲಿ ವಿರಾಜಮಾನರಾಗಿದ್ದಾರಲ್ಲ! ಅವರನ್ನು ಎಲ್ಲಿಗೆ ಹಾಕೋದು?

ಶ್ರೀ

ದೆಹಲಿಯಲ್ಲಿ ನಡೆದ ವಿಶ್ವ ಆರ್ಥಿಕ ಸಮ್ಮೇಳನದಲ್ಲಿ ಚರ್ಚ್‌ಗಳ ಮೇಲಿನ ಧಾಳಿ ವಿಷಯ ಬಂದಾಗ ತಬ್ಬಿಬ್ಬಾದರಂತೆ. ಅವರ ಪರವಾಗಿ ಅವರ ಅಧಿಕಾರಿ ಮಾಧ್ಯಮಗಳ ಬಗ್ಗೆ ಎಗರಾಡಿದರಂತೆ. ಯಾಕೋ ಇಲ್ಲಿ ವಿರೋಧ ಪಕ್ಷಗಳ ಮೇಲೆ ಸದಾ ಉರಿದಾಳಿ ಮಾಡುವ ಇವರು ಅಲ್ಲಿ ಇವರ ಪರವಾಗಿ ಅಧಿಕಾರಿ ಎಗರಾಡಲು ಬಿಟ್ಟಿದ್ಯಾಕೋ? ಅಮೆರಿಕದ ಅಂಕಲ್ ಭಯವೇ? ಜಾರ್ಜ್ ಫರ್ನಾಂಡಿಸ್ ಗೆ ಮಾಡಿದ ಹಾಗೆ ಬಟ್ಟೆಯೆಲ್ಲ ಬಿಚ್ಚಿ ಪರಿಶೀಲಿಸಿ ಒಳಗೆ ಬಿಟ್ಟರೂ ಪರವಾಗಿಲ್ಲ. ಶೀರ ಮೋದಿಗೆ ಮಾಡಿದ ಹಾಗೆ ಅಮೆರಿಕದ ಬಾಗಿಲ ಬಳಿ ಬರಲೂ ಬಿಡದಿದ್ದರೆ ಎನ್ನುವ ದಿಗಿಲೇ?


ಆದರೆ ಇಲ್ಲಿ ಯಾರು ಏನೇ ಪ್ರಶ್ನೆ ಕೇಳಿದ್ರೂ ಎಷ್ಟು ಚೆನ್ನಾಗಿ ಉತ್ರ ಕೊಡ್ತಾರೆ ನೋಡಿ. 'ಗೊಬ್ಬರ ಸಿಗ್ತಾಯಿಲ್ಲ, ರೈತ್ರು ಸಾಯ್ತಾ ಇದಾರೆ' ಅಂತ ಕೇಳಿದ್ರೆ, ಎಲ್ಲಿಂದನಾದ್ರೂ ಗೊಬ್ಬರ ತಗೊಂಬನ್ನಿ ನೀವು ಕೇಳಿದಷ್ಟು ದುಡ್ಡು ಕೊಡ್ತೀನಿ ಅಂತಾರೆ. ಕರೆಂಟೇ ಇಲ್ಲದಲೆ ಕತ್ಲಲ್ಲಿ ಕೂಳಿತಿದೀವಲ್ರೀ..., ಅಂದ್ರೆ 'ನೀವು ಕೇಳಿದಷ್ಟು ದುಡ್ಡು ಕೊಡ್ತೀನಿ ಎಲ್ಲಿಂದನಾದ್ರೂ ಕರೆಂಟ್ ತನ್ನಿ' ಅಂತಾರೆ. (ನಾವೇ ಇದನ್ನೆಲ್ಲ ಮಾಡೋದಾದ್ರೆ ನೀವ್ಯಾಕ್ರೀ ಇರೋದು ಅಂತ ಯಾರೂ ಕೇಳಿಲ್ಲ) ಯಾವುದಕ್ಕಾದರೂ ದುಡ್ಡು ಕೇಳಿದ್ರೆ ಖಜಾನೆ ಎಲ್ಲ ಖಾಲಿ ಅಂತಾರೆ! ಎಷ್ಟು ಸುಲಭ ನೋಡಿ ಸರಕಾರ ನಡೆಸೋದು!

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಂತರಗಂಗೆ

ಅಂತರಾಳಕ್ಕೆ ವಿಭಜನೆಯ ವಿಷ

ಧಾರ್ಮಿಕ ಸಾಮರಸ್ಯ, ಸೌಹಾರ್ದತೆಯನ್ನು ಎಲ್ಲಿ ಕಂಡರೂ ಅದರ ಮೇಲೆ ಧಾಳಿ ಮಾಡುವುದೇ ಆರೆಸ್ಸೆಸ್, ಭಜರಂಗದಳದ ಗುರಿ. ಈಗ ಅವು ಕೋಲಾರದಲ್ಲಿ ಪ್ರಸಿದ್ಧ ಅಂತರಗಂಗೆಯ ಮೇಲೆ ಎರಗಿದ್ದಾರೆ. ಕಾರ್ತಿಕ ಮಾಸದ ಜಾತ್ರೆಯನ್ನು ಅವರೀಗ ಜನರಲ್ಲಿ ವಿಭಜನೆ ತರಲು ಬಳಸುತ್ತಿದ್ದಾರೆ.



ಕೋಲಾರ ಸಮೀಪದ ಅಂತರಗಂಗೆ ಗಿರಿಶ್ರೇಣಿಗೆ ಶತ ಶೃಂಗ ಪರ್ವತ ಎಂಬ ಹೆಸರಿದೆ. ಸಮುದ್ರ ಮಟ್ಟದಿಂದ 4026 ಅಡಿ ಎತ್ತರದಲ್ಲಿರುವ ಈ ಬೆಟ್ಟಸಾಲು ಪ್ರಕೃತಿ ಸೌಂದರ್ಯವನ್ನು ತನ್ನ ಒಡಲಲ್ಲಿ ತುಂಬಿಕೊಂಡಿವೆ. ಹಲವಾರು ಜೀವರಾಶಿ, ಸಸ್ಯರಾಶಿ ಮತ್ತು ಗಿಡ ಮೂಲಿಕೆಗಳನ್ನು ತನ್ನ ಬಸಿರಲ್ಲಿ ಹುದುಗಿಸಿಕೊಂಡಿದ್ದು, ಸಂಶೋಧಕರಿಗೆ ಎಷ್ಟು ಅಗೆದರೂ ಬರಿದಾಗದ ಗಣಿಯಾಗಿದೆ.

ಪಾಂಡುರಾಜನ ವಾನಪ್ರಸ್ಥ ಜೀವನ ಮತ್ತು ಪಾಂಡವ ಜನನ ಪ್ರಸಂಗದ ವಿವರಗಳಲ್ಲಿ ಆದಿ ಕವಿ ಪಂಪನು ಶತಶೃಂಗ ಪರ್ವತದ ವರ್ಣನೆ ಮಾಡಿದ್ದಾನೆ ಎಂದು ಹೇಳಲಾಗುತ್ತದೆ. ಈ ಕುರಿತ ಐತಿಹ್ಯಗಳಂತೂ ಪ್ರಚಲಿತದಲ್ಲಿವೆ.

ಇಷ್ಟೇ ಅಲ್ಲದೆ ಅಂತರಗಂಗೆಯ ತಪ್ಪಲಿನಲ್ಲಿರುವ ಉಸ್ಮಾನ್‌ವಲಿ ದರ್ಗ, ಬೆಟ್ಟದ ಮೇಲಿನ ಪಾಪರಾಜನ ಹಳ್ಳಿಯಲ್ಲಿರುವ ಖಾದರ್ ಜಲಾಲ್ ಸಮಾಧಿ, ಶಿವಗಂಗೆಯಲ್ಲಿ 'ಆದಿಮ' ಕುಟೀರಗಳಿದ್ದು ಇಡೀ ರಾಜ್ಯಕ್ಕೆ ಕೋಮುಸೌಹಾರ್ದತೆ, ಶಾಂತಿಯನ್ನು ಸಾರುವ ಐತಿಹಾಸಿಕ ಸ್ಥಳವಾಗಿದೆ ಶತಶೃಂಗ ಪರ್ವತ. ಅಂತರಗಂಗೆಯನ್ನು ದಕ್ಷಿಣ ಕಾಶಿ ಎಂದು ಕರೆಯುವುದಕ್ಕೆ ಎಲ್ಲಾ ಸಹ ಕಿಂಚಿತ್ತೂ ಪ್ರಸ್ತಾಪಗಳಿಲ್ಲ. ಆದಿಕವಿ ಪಂಪ ಈ ಗಿರಿ ಶ್ರೇಣಿಯನ್ನು ಶತಶೃಂಗ ಶೈಲ ಎಂದು ಹೆಸರಿಸಿದ್ದಾನೆಯೇ ಹೊರತು ಎಲ್ಲೂ ದಕ್ಷಿಣ ಕಾಶಿ ಎಂದು ಹೆಸರಿಸಿಲ್ಲ.

ಇಂತಹ ಪರಂಪರೆ, ಐತಿಹ್ಯಗಳನ್ನೆಲ್ಲ ಮಣ್ಣು ಪಾಲು ಮಾಡಿ ಈ ಗಿರಿ ಶ್ರೇಣಿಗೆ ಇತ್ತೀಚಿನ ವರ್ಷಗಳಲ್ಲಿ ಕೋಮು ಬಣ್ಣ ಹಚ್ಚಿ ತಮ್ಮ ಸ್ವಾರ್ಥಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿರುವುದು ಖಂಡನೀಯ. 1990ಕ್ಕೂ ಮೊದಲು ಶತಶೃಂಗ ಗಿರಿ ಶ್ರೇಣಿ ಸ್ಥಳವಾಗಿತ್ತು. ಬೆಟ್ಟದ ಮೇಲಿರುವ ಏಳು ಗ್ರಾಮಗಳ ಜನತೆಗೆ ಆಶ್ರಯ ವಾಗುವುದರೊಂದಿಗೆ ವಿಶಿಷ್ಟವಾದ ಜೀವನ ಶೈಲಿಯನ್ನು ಒದಗಿಸಿತ್ತು. ಮುಸ್ಲಿಂ ಬಾಂಧವರು ಕೆಳಗಿನ ಉಸ್ಮಾನ್‌ವಲಿ ದರ್ಗದಲ್ಲಿ ಪ್ರಾರ್ಥನೆ ಸಲ್ಲಿಸಿ ಅಂತರಗಂಗೆ ಮೂಲಕ ಹಾದು ಪಾಪರಾಜನ ಹಳ್ಳಿಯಲ್ಲಿರುವ ಖಾದರ್ ಜಲಾಲ್ ದರ್ಗಾಕ್ಕೆ ತೆರಳಿ ತಮ್ಮ ಹರಕೆ ತೀರಿಸಿಕೊಳ್ಳುತ್ತಿದ್ದರು. ಏಳು ಊರಿನ ಜನರೂ ಅಂತರಗಂಗೆಯಲ್ಲಿ ಪೂಜೆ ಸಲ್ಲಿಸಿ ತಮ್ಮ ಎಂದಿನ ಚಟುವಟಿಕೆಗಳಿಗೆ ಮುಂದಾಗುತ್ತಿದ್ದರು. ಬೆಟ್ಟದ ಮೇಲಿನ ಎಲ್ಲ ಗ್ರಾಮಗಳಲ್ಲೂ ಮುಸ್ಲಿಂ ಮತ್ತು ಹಿಂದೂಗಳು ಸೌಹಾರ್ದತೆಯಿಂದ ಮುನ್ನಡೆಸಿಕೊಂಡು ಹೋಗುತ್ತಿದ್ದರು. ಆಲ್ಲಿವರೆಗೂ ಅಂತರಗಂಗೆಗೆ ದಕ್ಷಿಣ ಕಾಶಿ ಎಂಬ ಹೆಸರು ಬಂದಿರಲಿಲ್ಲ.

ಕಳೆದ ಐದು ವರ್ಷಗಳಿಂದ ಗಿರಿ ಶ್ರೇಣಿಯ ಶಿವಗಂಗೆಯಲ್ಲಿ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸಿರುವ 'ಆದಿಮ' ಈ ಸೌಹಾರ್ದತೆಗೆ ಮತ್ತೊಂದು ಮುಕುಟ ಮಣಿಯಾಗಿದೆ. ಕಳೆದು ಹೋಗಿರುವ ಸಾಂಸ್ಕೃತಿಕ ಬೇರು ಮೂಲಗಳನ್ನು ಹುಡುಕುತ್ತಾ, ನೀರು, ಗೊಬ್ಬರ ಹಾಕಿ ಪೋಷಿಸುತ್ತಾ ಬಂದಿದೆ.

ಹೆಡೆ ಎತ್ತಿದ ಪರಿವಾರ

90ರ ದಶಕದಲ್ಲಿ ಮೊದಲಬಾರಿಗೆ ಕೋಲಾರದಲ್ಲಿ ಹೆಡ್ಗೆವಾರ್ ಜನ್ಮಶತಾಬ್ದಿಯನ್ನು ಆಚರಿಸಲಾಯಿತು. ಅದರ ಮೂಲಕ ಭಜರಂಗದಳ ಮತ್ತು ಆರ್‌ಎಸ್‌ಎಸ್ ತಮ್ಮ ಬಲಿಷ್ಠ ಅಸ್ತಿತ್ವ ಸ್ಥಾಪಿಸಲು ಆರಂಭಿಸಿತು. ಜಾತಿಯನ್ನು ಆರೆಸ್ಸೆಸ್ ಬಳಸಿತು. ಕೋಲಾರದ ಹಲವು ಶೆಟ್ಟರು, ಮಾರ್ವಾಡಿಗಳು, ಬ್ರಾಹ್ಮಣರು ಈ ಸಂಘಟನೆಗಳಿಗೆ ಬೆನ್ನೆಲುಬಾಗಿ ನಿಂತರು. ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದ ಭುಗಿಲೆದ್ದ ಹೊತ್ತಿನಲ್ಲಿ ಕೋಲಾರ ಎಂದೂ ಕಾಣದಷ್ಟು ಭೀಕರ ಸ್ವರೂಪದ ಕೋಮುಗಲಭೆಗಳನ್ನು ಕಾಣಲು ಆಗಷ್ಟೇ ಬೇರು ಬಿಡಲು ಆರಂಭಿಸಿದ ಆರ್‌ಎಸ್‌ಎಸ್ ಮತ್ತು ಭಜರಂಗದಳಗಳೇ ಮೂಲ ಕಾರಣ.

ಹುಟ್ಟುಹಾಕಿದರು ಕೋಮುಗಲಭೆ

ಆಗ ನಗರದ ಕಠಾರಿ ಪಾಳ್ಯದಲ್ಲಿ ಹಿಂದೂ ಯುವಕನೊಬ್ಬ ಜುಬ್ಬ ಹಾಕಿಕೊಂಡು ಹೋಗುತ್ತಿದ್ದ. ಅಲ್ಲಿದ್ದ ಕೆಲವು ಕಿಡಿಗೇಡಿಗಳು ಉರ್ದು ಭಾಷೆಯಲ್ಲಿ ಕ್ಯಾರೆ (ಏನು ಸಮಾಚಾರ) ಎಂದು ಮಾತನಾಡಿಸಿದರು. ಆ ಯುವಕ ಸಹಜವಾಗೇ ಉರ್ದು ಭಾಷೆಯಲ್ಲೇ ಕ್ಯಾಬಿನೈ(ಏನೂ ಇಲ್ಲ) ಎಂದು ಉತ್ತರಿಸಿದ. ಆ ಯುವಕ ಮುಸ್ಲಿಮನೇ ಎಂದು ಗ್ರಹಿಸಿದ ಯುವಕರ ಗುಂಪು ಭೀಕರವಾಗಿ ದಾಳಿ ಮಾಡಿತು. ಯುವಕ ಮೃತಪಟ್ಟ. ಇದರ ಪರಿಣಾಮವಾಗಿ, ಉದ್ಭವಿಸಿದ ಕೋಮುಘರ್ಷಣೆಯಲ್ಲಿ ಹತ್ತಾರು ಮಂದಿ ಅಮಾಯಕ ಹಿಂದೂ, ಮುಸ್ಲಿಮರು ಜೀವ ಕಳೆದುಕೊಂಡರು. ಸತತ ಎರಡು ತಿಂಗಳು ಕರ್ಫ್ಯೂ ವಿಧಿಸಲಾಗಿತ್ತು. ಜನ ಮನೆಯಿಂದ ಹೊರಬರುವುದೇ ದುಸ್ತರ ಎನಿಸಿತ್ತು. ಕೋಲಾರದಲ್ಲಿ ನಡೆಯುವ ವಹಿವಾಟಿನಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಸಾವಿರಾರು ಮಂದಿ ಹೊಟ್ಟೆಗೆ ತಣ್ಣೀರು ಬಟ್ಟೆ ಹಾಕಿಕೊಳ್ಳುವಂತಾಗಿತ್ತು. ಇಷ್ಟರಲ್ಲಾಗಲೇ ಕೋಲಾರ ಜಿಲ್ಲೆ ಕೋಮು ಘರ್ಷಣೆಗಳ ಕೇಂದ್ರ ಸ್ಥಾನವಾಯಿತು. ಬಹುಕಾಲದಿಂದಲೂ ಹಳ್ಳಿಗಳಲ್ಲೇ ನೆಲೆಸಿ ಅಲ್ಲಿನ ಜನತೆಯೊಂದಿಗೆ ಜೀವನ ಬೆಸೆದುಕೊಂಡಿದ್ದ ಮುಸ್ಲಿಂ ಬಾಂಧವರು ಮನೆ, ಮಠಮಾರಿ ನಗರಕ್ಕೆ ವಲಸೆ ಬರುವಂತಾಯಿತು. ಬೆಟ್ಟದ ಮೇಲಿನ ಮುಸ್ಲಿಂ ಕುಟುಂಬಗಳೂ ನಗರಕ್ಕೆ ವಲಸೆ ಬಂದವು. ಭಜರಂಗದಳ ಮತ್ತು ಆರ್‌ಎಸ್‌ಎಸ್ ರೂಪಿಸಿದ ಸಂಚು ಬಹುತೇಕ ಯಶಸ್ವಿಯಾಗಿತ್ತು. ಇಂತಹ ಕೋಮು ಪ್ರಕ್ಷುಬ್ಧತೆ ಎಂದೂ ಕೋಲಾರ ಜನತೆಯಿಂದ ಮರೆಯಾಗದಂತೆ ಮಾಡುವ ಪಿತೂರಿಯೇ ಈಗ ಅವರು ನಡೆಸುತ್ತಿರುವ 'ಕಾರ್ತಿಕ ಮಾಸದ ಜಾತ್ರೆ'.

ದುಷ್ಟ ಸಂಚಿಗೆ ಜಾತ್ರೆ ಬಳಕೆ

ಕಾರ್ತಿಕ ಮಾಸದ ಜಾತ್ರೆ ನೂರಾರು ವರ್ಷಗಳಿಂದ ತನ್ನದೇ ಆದ ಸಂಪ್ರದಾಯ, ಸಂಸ್ಕೃತಿ, ಆಚಾರ ವಿಚಾರಗಳನ್ನು ಹೊತ್ತು ನಡೆಯುತ್ತಿತ್ತು. ಸಾವಿರಾರು ಭಕ್ತಾದಿಗಳು ಇಲ್ಲಿಗೆ ಆಗಮಿಸಿ ಪೂಜೆ ಸಲ್ಲಿಸುತ್ತಿದ್ದರು. ಶಿವರಾತ್ರಿ ಹಬ್ಬದಂದು ಇಡೀ ರಾತ್ರಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಗುತ್ತಿತ್ತು. ಅಂತರಗಂಗೆ ದೇವಾಲಯಕ್ಕೆ 92 ಎಕರೆ ಪ್ರದೇಶ ಸೇರಿದ್ದು ಮುಜರಾಯಿ ಇಲಾಖೆ ಸುಪರ್ದಿಯಲ್ಲಿದೆ. ಅರ್ಚಕರಾದ ಸೋಮಪ್ಪನವರ ಕುಟುಂಬ ಹತ್ತಾರು ವರ್ಷಗಳಿಂದ ಪೂಜಾಕಾರ್ಯಗಳನ್ನು ನೆರವೇರಿಸುತ್ತಾ ಬರುತ್ತಿದೆ. ಸೋಮಪ್ಪ ಅವರ ನಂತರ ಅವರ ಮಗ ಆ ಕಾರ್ಯ



ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇದರಲ್ಲೇನೂ ಆಶ್ಚರ್ಯ ಇಲ್ಲ.

ಏಕೆಂದರೆ ಲಾಭದಾಯಕವಾದ ದೇವಾಲಯಗಳನ್ನು ಪುರೋಹಿತಶಾಹಿ ವರ್ಗ ಎಂದೂ ಅನ್ಯರಿಗೆ ಬಿಟ್ಟುಕೊಡುವುದಿಲ್ಲ. ಹಾಗಾಗಿ ಸೋಮಪ್ಪನ ಕೆಲಸ ಪುತ್ರ ಮಂಜುನಾಥನಿಗೆ 'ಪಿತ್ರಾರ್ಜಿತ'ವಾಗಿ ಬಂದಿದೆ. ಅರ್ಚಕ ಮಂಜುನಾಥನದು ಸಾಧಾರಣ ಮನೆ. ಅಂತರಗಂಗೆ ದೇವಾಲಯದಲ್ಲಿ ಒಮ್ಮೆ ಕಿಟಕಿ ಒಡೆದು, ಮತ್ತೊಮ್ಮೆ ಬಾಗಿಲು ಮುರಿದು ಮಗದೊಮ್ಮೆ ಗೋಡೆಗೆ ಕನ್ನಹಾಕಿ ಮೂರು ಬಾರಿ ಡಕಾಯಿತಿ ಮಾಡಲಾಗಿದೆ. ಇತ್ತ ಅರ್ಚಕ ಮಂಜುನಾಥನ ಸಾಧಾರಣ ಮನೆಯೂ ಮೂರು ಅಂತಸ್ತು ಮೇಲೆದ್ದಿದೆ. ಹೇಗಿದೆ ನೋಡಿ ಅರ್ಚಕನ ನಡುವಿನ ಸಾಮ್ಯತೆ. ಡಕಾಯಿತಿ ಆದ ಮೂರು ಬಾರಿಯೂ ಪೋಲೀಸರಿಗೆ ದೂರು ನೀಡಿದ್ದರೂ ಕಾಟಾಚಾರಕ್ಕೆ ಪ್ರಕರಣ ದಾಖಲಿಸಿ ಮುಚ್ಚಿ ಹಾಕಲಾಗಿದೆ.

ನೂರಾರು ವರ್ಷ ಪುರಾತನವಾದ ಅಂತರಗಂಗೆ ತಪ್ಪಲಿನಲ್ಲಿರುವ ಉಸ್ಮಾನ್‌ವಲಿ ದರ್ಗವನ್ನು ಹಂತ ಹಂತವಾಗಿ ಅಭಿವೃದ್ಧಿ ಮಾಡಲಾಗಿದೆ. ಈಗದು ಆಕರ್ಷಕ ತಾಣವಾಗಿದೆ. ನೂರಾರು ಭಕ್ತಾದಿಗಳು ಪ್ರತಿದಿನ ಆಗಮಿಸಿ ಪ್ರಾರ್ಥನೆ ಸಲ್ಲಿಸುತ್ತಾರೆ. ಒಮ್ಮೆಯೂ ಕೋಮುಗಲಭೆಗಳು, ಧಾರ್ಮಿಕ ದ್ವೇಷಗಳು ಕಂಡು ಬಂದಿಲ್ಲ. 1989ರಲ್ಲಿ ಅಯೋಧ್ಯೆ ವಿವಾದ, ರಥಯಾತ್ರೆ ಆರಂಭಗೊಂಡ ನಂತರ ಕೋಲಾರದ ಅಂತರಗಂಗೆಗೂ ಅದೇ ರೂಪ ನೀಡುವ ವ್ಯವಸ್ಥಿತ ಪಿತೂರಿಯನ್ನು ಸಂಘ ಪರಿವಾರ ಹೆಣೆಯಿತು. ಅದರ ಫಲವಾಗಿಯೇ ಅಂತರಗಂಗೆಗೆ ದಕ್ಷಿಣ ಕಾಶಿ ಎಂಬ ಹೆಸರು ಹೊಸದಾಗಿ ಸೇರಿಕೊಂಡಿತು. ಕಾರ್ತಿಕ ಮಾಸದ ಕೊನೆ ಸೋಮವಾರವನ್ನು ಧಾರ್ಮಿಕ ದುರ್ಲಾಭಕ್ಕೆ ಬಳಸಿಕೊಳ್ಳಲು ಸಂಘ ಪರಿವಾರ ಮುಂದಾಯಿತು.

ಅಕ್ರಮ ಹಣವೂ ಸೇರಿ

ಈಗ ಎಲ್ಲಿ ನೋಡಿದರೂ ಕೋಮುದ್ವೇಷ ಸೃಷ್ಟಿಸುವಂತಹ ಘೋಷಣೆಗಳನ್ನು ಬರೆಯಲಾಗಿದೆ. ಅಕ್ಕಪಕ್ಕದ ಮನುಷ್ಯನನ್ನು ಅನುಮಾನದಿಂದ ನೋಡುವಂತಹ ಉದ್ರಿಕ್ತ ವಾತಾವರಣದ ಸೃಷ್ಟಿಸಲಾಗಿದೆ. ನಗರದ ಹೊಸ ಬಸ್ ನಿಲ್ದಾಣದಿಂದ ಆರಂಭಿಸಿ ಅಂತರಗಂಗೆ ತನಕ ಬ್ಯಾನರ್‌ಗಳು, ಪೋಸ್ಟರ್‌ಗಳು ಬಂಟಿಂಗ್‌ಗಳನ್ನು ಕಟ್ಟಲಾಗುತ್ತದೆ. ವ್ಯಾಪಾರಸ್ಥರೂ, ಅನುಕೂಲಸ್ಥರೂ ಆಗಿರುವ ನಗರದ ಹಲವು ಮಾರ್ವಾಡಿಗಳು, ಶೆಟ್ಟರು, ಬ್ರಾಹ್ಮಣರು ಅವ್ಯಾಹತವಾಗಿ ಹಣ ಒದಗಿಸುತ್ತಾರೆ. ಮಾಲೂರಿನ ಹಾಲಿ ಶಾಸಕ ರಾಜ್ಯದ ಮುಜರಾಯಿ ಸಚಿವ ಕೃಷ್ಣಯ್ಯಶೆಟ್ಟಿ 1990ರಿಂದಲೂ ಪ್ರತಿ ವರ್ಷವೂ 1 ಲಕ್ಷರೂ ಕೊಡುತ್ತಾನಂತೆ. ಕೃಷ್ಣಯ್ಯಶೆಟ್ಟಿ ವಿರುದ್ಧ 30 ಕ್ಕೂ ಹೆಚ್ಚು ಚೆಕ್‌ಬೌನ್ಸ್ ಮೊಕದ್ದಮೆಗಳು ದಾಖಲಾಗಿವೆ. ಆತನು ನಡೆಸುತ್ತಿರುವ ರಿಯಲ್ ಎಸ್ಟೇಟ್ ದಂಧೆ ಬಗ್ಗೆ ಸಿಓಡಿ ತನಿಖೆ ನಡೆಸಿದ್ದು ಆತ ತಪ್ಪಿತಸ್ಥ ಎಂತಲೂ ಸಾಬೀತಾಗಿದೆ. ಇನ್ನು ಹೀಗೆ ಅನ್ಯಾಯವಾಗಿ ದೋಚಿದ ಹಣವನ್ನು ವಿಷ ಬೀಜ ಬಿತ್ತುವ ಕೆಲಸಗಳಿಗೆ ಬಳಕೆ ಮಾಡುತ್ತಿದ್ದಾನೆ. ಈ ಕಾರ್ಯಕ್ರಮಕ್ಕೆ ಹಣ ನೀಡುವ ಬಹುತೇಕ ದಾನಿಗಳು ಅಪರಾಧಿ ಹಿನ್ನೆಲೆ ಹೊಂದಿರುವರೆ ಎಂದು ಕೋಲಾರ ನಗರದ ಜನತೆ ಹೇಳುತ್ತಿದ್ದಾರೆ.

ಪರಂಪರೆ ನಾಶಕ್ಕೆ ಕೈಹಾಕಿದರು

ಕಾರ್ತಿಕ ಮಾಸದ ಕೊನೆ ಸೋಮವಾರದ ಜಾತ್ರೆಯನ್ನು ಅಯೋಧ್ಯೆ, ಬಾಬಾಬುಡನ್‌ಗಿರಿ ಮಾಡುತ್ತೇವೆ ಎಂದು ಭಜರಂಗಗಳು ಘಂಟಾಘೋಷವಾಗಿ ಹೇಳಿಕೊಂಡು ತಿರುಗುತ್ತಿದ್ದಾರೆ. ಆ ದಿನ ಭಕ್ತಾದಿಗಳಿಗೆ ಉಚಿತ

ಪುಟ 12ಕ್ಕೆ



ವೈದ್ಯ ವೃತ್ತಿಗೆ ತಗಲಿರುವ ಶಾಪಗಳು

ವೈದ್ಯವೃತ್ತಿ ನೂರಾರು ವರ್ಷಗಳಿಂದ ಜನರ ಆರೋಗ್ಯ ಸೇವೆ ಮಾಡುತ್ತಾ ಬಂದಿದೆ. ವೈದ್ಯ ವೃತ್ತಿಯಲ್ಲಿರುವವರು ಖಾಸಗಿ ವೈದ್ಯರೇ ಹೆಚ್ಚು ಸಂಖ್ಯೆಯಲ್ಲಿ. ವೈದ್ಯರೆಂದರೆ ದೇವರಿಗೆ ಸಮಾನ ಅನ್ನುವ ಮನೋಭಾವನೆ ಜನರಲ್ಲಿದೆ. ಆದರೆ ಇತ್ತೀಚಿಗಿನ ದಶಕಗಳಲ್ಲಿ ವೈದ್ಯವೃತ್ತಿ ವ್ಯಾಪಾರೀಕರಣಗೊಳ್ಳುತ್ತಿದೆ. ಜನರು ಈಗೀಗ ಅರ್ಥಮಾಡಿಕೊಳ್ಳುತ್ತಿದ್ದಾರೆ. ಈ ವ್ಯಾಪಾರೀಕರಣ ದಿಂದಾಗಿ ವೈದ್ಯವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಾಮಾನ್ಯರಿಗೆ ದಿನನಿತ್ಯದ ಆರೋಗ್ಯ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಪಡೆಯಲು ಮೊದಲಿನಷ್ಟು ಸುಲಭವಾಗಿಲ್ಲ ಹಾಗೂ ದುಬಾರಿಯಾಗುತ್ತಿದೆ. ಈ ಬದಲಾವಣೆಯಿಂದ ವೈದ್ಯವೃತ್ತಿ ಏಳು ಶಾಪಗಳಿಗೆ ಗುರಿಯಾಗಿದೆ!

ಶಾಪ - 4

ಚಿಕಿತ್ಸೆಗಳು ರೋಗಿಯ ತೊಂದರೆಗಳನ್ನು (ನೋವು, ಉಸಿರಾಟದ ತೊಂದರೆ, ಜ್ವರ) ಹಾಗೂ ಕೆಲವು ಬಾರಿ ರೋಗವನ್ನು (ಟೈಫಾಯಿಡ್, ಬೆಕ್ಟೀರಿಯಾದ ಸೋಂಕು) ಉಪಶಮನ ಮಾಡಬಹುದಾಗಿದೆ. ಚಿಕಿತ್ಸೆ ವೈಜ್ಞಾನಿಕವಾಗಿದ್ದು, ರೋಗಿಗೆ ಕೊಂಡುಕೊಳ್ಳಲು ಸಾಧ್ಯವಾಗಿರಬೇಕು. ಸುಲಭವಾಗಿ ದೊರೆಯಬೇಕು. ಈ ಉದ್ದೇಶವಿಟ್ಟು ಚಿಕಿತ್ಸೆಗಳನ್ನು ವಿಶ್ಲೇಷಿಸಿದಾಗ, ಈ ಕೆಳಗಿನ ಕೆಲವು ವಿಷಯಗಳು ಹೊರಹೊಮ್ಮುತ್ತವೆ.

ಅನಗತ್ಯ ಔಷಧಿಗಳ ಬಳಕೆ (ಟಾನಿಕ್, ಕೆಮ್ಮಿನ ಸಿರಪ್‌ಗಳು, ಪ್ರೊಟೀನ್ ಪುಡಿ)

ಅನಗತ್ಯವಾಗಿ ಔಷಧಿ ಬಳಕೆ (ಆಂಟಿಬಯಾಟಿಕ್‌ಗಳು, ವಿಟಮಿನ್‌ಗಳು, ಗ್ಲೂಕೋಸ್ ಡ್ರಿಪ್

ದುಬಾರಿ ಔಷಧಿಗಳ ಬಳಕೆ (ಮಾರುಕಟ್ಟೆಯಲ್ಲಿ ಒಂದೇ ಔಷಧಿ ಬೇರೆ ಬೇರೆ ಬೆಲೆಯಲ್ಲಿ ದೊರಕುವುದು. ಔಷಧಿ ಕಂಪನಿಯವರ ಪ್ರಭಾವದಿಂದ ದುಬಾರಿ ಔಷಧಿಗಳನ್ನೇ ಕೆಲವು ಬಾರಿ ವೈದ್ಯರು ಬರೆದುಕೊಡುವರು)

"ನಾನೂ ಔಷಧಿ"
(me too drugs) ಬಳಕೆ

ಇತ್ತೀಚೆಗಿನ ದಿನಗಳಲ್ಲಿ ಹಲವಾರು ಔಷಧಿಗಳನ್ನು ಮಾರುಕಟ್ಟೆಗೆ ತರಲಾಗಿದೆ. ಆದರೆ ಈ ಔಷಧಿಗಳು ಗುಣದಲ್ಲಿ ಮೊದಲು ಲಭ್ಯವಿದ್ದ ಔಷಧಿಗಿಂತ ಭಿನ್ನವಾಗಿಲ್ಲ. ಆದರೆ ದುಬಾರಿ (2ರಿಂದ 5 ಪಟ್ಟು) ಆದರೆ ವೈದ್ಯರಿಗೆ ಈ ಔಷಧಿಗಳು ಆಧುನಿಕ ಸಂಶೋಧನೆಯ ಔಷಧಿಗಳು ಹೆಚ್ಚು ಪರಿಣಾಮಕಾರಿಯೆಂದು ನಂಬಿಸಲಾಗಿದೆ.

"ನಾನೂ ಔಷಧಿಗಳು" ಪರಿಣಾಮಕಾರಿ ಔಷಧಿಗಳು

ಉದಾ ಸಿಟ್ರೈಝಿನ್ (ಅಲ್‌ಡೇ)
ಕ್ಲೋರ್ ಫೆನರಮಿನ್ ಮ್ಯಾಲಿಯೇಟ್
ಫೆನರಮಿನ್ ಮ್ಯಾಲಿಯೇಟ್ (ಅವಿಲ್
ಕಿಟೊರೊಲ್ಯಾಕ್ ಐಬೊಪ್ರುಫೆನ್ ಜ್ಯೂಫೆನ್
ಕ್ಲ್ಯಾರಿಥ್ರೋಮೈಸಿನ್
ಎಂಥ್ರೋಮೈಸಿನ್
ರೈಬೋಪಿಕ್ಲೋನ್ ಆಕ್ಸಝೀಪ್ಯಾಮ್

ಜೀರ್ಣಶಕ್ತಿ ದೇಹದ ಸ್ವಾಭಾವಿಕ ಗುಣ. ಅದನ್ನು ಹೆಚ್ಚಿಸಲು ಸಾಧ್ಯವಿಲ್ಲ. ಆದರೆ ಜೀರ್ಣಶಕ್ತಿ 'ಹೆಚ್ಚಿಸುವ' ಔಷಧಿಗಳಿವೆ, ಅವು ಕಂಪನಿಗಳ ಆವಿಷ್ಕಾರ ಹಾಗೂ ಅವು ಜೀರ್ಣಶಕ್ತಿ ಹೆಚ್ಚಿಸುವಲ್ಲಿ (ಉದಾ ವಿರಝೈಮ್)

ನಮ್ಮ ಮಾರುಕಟ್ಟೆಯಲ್ಲಿ ಕೆಲವು ಔಷಧಿಗಳಿವೆ. ಅವುಗಳನ್ನು ಇತರೇ ದೇಶಗಳಲ್ಲಿ ನಿಷೇಧಿಸಿದ್ದಾರೆ. (ಉದಾ ಅನಾಲ್‌ಜಿನ್ ಇತ್ಯಾದಿ) ಆದರೆ ತಾಂತ್ರಿಕ ಕಾರಣಗಳಿಂದ ನಮ್ಮಲ್ಲಿ ಇನ್ನೂ ನಿಷೇಧಿಸಲಾಗಿಲ್ಲ. ನಮ್ಮಲ್ಲಿ ಹಲವಾರು ನಿಷೇಧಿಸಲು ಯೋಗ್ಯವಾದ ಔಷಧಿಗಳಿವೆ.

ಅನಗತ್ಯವಾಗಿ ಹೆಚ್ಚು ದಿನಗಳವರೆಗೆ ಔಷಧಿಗಳ ಬಳಕೆ ತಲೆಸುತ್ತು ಎಂದು ಹೋದ ರೋಗಿಗೆ ನರರೋಗ ತಜ್ಞ ಬರೆದುಕೊಟ್ಟ ಔಷಧಿ ಸೂಜಿರಾನ್ 3 ತಿಂಗಳುಗಳು ಉಪಯೋಗಿಸುವ ಆದೇಶ ನೀಡಿದ್ದರು. ಕೆಲವರು ದಿನನಿತ್ಯ ವಿಟಮಿನ್ ಉಪಯೋಗಿಸುವ ಆದೇಶ ನೀಡುತ್ತಾರೆ. ವಿಶೇಷವಾಗಿ ಸಕ್ಕರೆ ಕಾಯಿಲೆ ರೋಗಿಗಳಿಗೆ. ಔಷಧಿಯಲ್ಲಿ ಅಲ್ಲದ ಔಷಧಿ ಬಳಕೆ ಸೆರೇಶಿಯೋ ಪೆಪ್ಟಿಡೇಸ್ ಬವರೊಮೆಕ್ಸಿನ್, ರಕ್ತಸ್ರಾವ ನಿಲ್ಲಿಸುವ ಔಷಧಿಗಳು ಮಾರುಕಟ್ಟೆಯಲ್ಲಿವೆ. ಆದರೆ ಪರಿಣಾಮಕಾರಿಯೆಂದು ಸಾಬೀತಾಗಿಲ್ಲ. ಆದರೂ ಈ ಔಷಧಿಗಳು ಬಳಕೆಯಾಗುತ್ತಿವೆ. ವೈಯಕ್ತಿಕ ನೀತಿ ಹಾಗೂ ಔಷಧಿ ಕಂಪನಿಗಳ ಒತ್ತಡದಿಂದ ಚಿಕಿತ್ಸೆಗಳನ್ನು ಉಪಯೋಗಿಸಲಾಗುತ್ತಿದೆ. ಬರೆದುಕೊಟ್ಟ ಔಷಧಿಗಳನ್ನು ಪ್ರಶ್ನಿಸದೆ ಉಪಯೋಗಿಸುವ ಪ್ರವೃತ್ತಿ ಜನರಲ್ಲಿದ್ದಾಗ, ಅನಕ್ಷರತೆ ವ್ಯಾಪಕವಾಗಿದ್ದಾಗ ಚಿಕಿತ್ಸೆ ನೀಡುವಾಗ ವೈದ್ಯರು ಜಾಗರೂಕವಾಗಿರಬೇಕು ಹಾಗೂ ವೈಜ್ಞಾನಿಕವಾಗಿರಬೇಕು. medical prescription audit ಇಂತಹ ಸಮಸ್ಯೆಗಳನ್ನು ಕಂಡುಹಿಡಿಯಬಹುದು ಹಾಗೂ ಸರಿಪಡಿಸಬಹುದು. ಆದರೆ ಅನಿಯಂತ್ರಿತ ವೈದ್ಯಕೀಯ ಕ್ಷೇತ್ರದಲ್ಲಿ ಇದು ಸಾಧ್ಯವೇ? ವೈದ್ಯರು ಸಹಕರಿಸುವವರೇ? ಅನೇಕ ರೋಗಗಳು ತಂತಾನೇ ವಾಸಿಯಾಗುವುವು. ಆದ್ದರಿಂದ ಈ ರೀತಿ ಅವೈಜ್ಞಾನಿಕ ಚಿಕಿತ್ಸೆಗಳನ್ನು ಕೊಟ್ಟಾಗಲೂ ರೋಗಿ ಗುಣಹೊಂದಬಹುದು. ಆದರೆ ಅಡ್ಡ ಪರಿಣಾಮಗಳು ಉಂಟಾಗುತ್ತವಲ್ಲ? ಅವು ತಂತಾನೇ ಕಡಿಮೆಯಾಗುವುದಿಲ್ಲವಲ್ಲ.

ಅನಗತ್ಯ ಚಿಕಿತ್ಸೆಗಳಲ್ಲಿ ಇಂಜೆಕ್ಷನ್ ಹಾಕುವುದು ಒಂದು ಪ್ರಮುಖ ಹಾಗೂ ವ್ಯಾಪಕವಾಗಿ ಕಂಡುಬರುವ ಪದ್ಧತಿ ರೋಗಿಗೆ ಮಾತ್ರೆಗಳನ್ನು ನುಂಗಲಾಗದಿದ್ದಾಗ ಜ್ಞಾನ ತಪ್ಪಿದಾಗ, ಶಸ್ತ್ರಚಿಕಿತ್ಸೆಯಾಗಿದ್ದಾಗ, ಇಂಜೆಕ್ಷನ್ ಮೂಲಕ ಔಷಧಿಯನ್ನು ದೇಹದಲ್ಲಿ ಸೇರಿಸಬಹುದಾಗಿದೆ. ಆದರೆ ಇಂಜಕ್ಷನ್‌ನಿಂದ ಬೇಗ ಗುಣ ಹೊಂದುತ್ತದೆ. ಮಾತ್ರೆಗಿಂಗ ಇಂಜಕ್ಷನ್ ಹೆಚ್ಚು ಪರಿಣಾಮಕಾರಿ. ಇಂಜೆಕ್ಷನ್ ಬಹಳ ದಿನಗಳವರೆಗೆ ಕೆಲಸ ಮಾಡುತ್ತದೆ ಎಂಬ ತಪ್ಪು ನಂಬಿಕೆಗಳು ಇಂಜೆಕ್ಷನ್‌ಗೆ ಅಂಟಿಕೊಂಡಿವೆ.

ಇಂಜೆಕ್ಷನ್‌ನಿಂದ ತೊಂದರೆಯೂ ಆಗಬಹುದು. ನೋವು ಇಂಜೆಕ್ಷನ್ ಕೊಟ್ಟ ಭಾಗದಲ್ಲಿ ಕೀವು ತುಂಬುವುದು. ಅಲರ್ಜಿ, ಅನಫೈಲ್ಯಾಕ್ಸಿಸ್ (ಸಾವೂ ಉಂಟಾಗಬಹುದು) ಏಡ್ಸ್ ಹಿಪೆಟೈಟಿಸ್ ಬಿ ಹರಡಬಹುದು. "ಇಂಜೆಕ್ಷನ್ ಹಾಕದಿದ್ದರೆ ರೋಗಿಗೆ ಸಮಾಧಾನವಾಗುವುದಿಲ್ಲ ಹಾಗೂ ಅವರು ಬೇರೆಯವರ ಹತ್ತಿರ ಹೋಗಿ ಇಂಜೆಕ್ಷನ್ ತೆಗೆದುಕೊಳ್ಳುತ್ತಾರೆ ಎಂಬುದು ಹಲವಾರು ವೈದ್ಯರ ಅಭಿಪ್ರಾಯ.

ಕೆಲವು ಬಾರಿ ಇಂಜೆಕ್ಷನ್‌ಗಳ ಅಗತ್ಯತೆ ಇದೆ. ಉದಾ : ಟಿಟೆನಸ್ ರೋಗ ತಡೆಗಟ್ಟಲು, ಸಕ್ಕರೆ ರೋಗಿಗೆ ಇನ್ಸುಲಿನ್, ಹೃದಯಾಘಾತವಾದಾಗ ನೋವು ನಿವಾರಕಗಳು ಇತ್ಯಾದಿ. ಈ ವಿಷಯದಲ್ಲಿ ವೈದ್ಯರು ಸಂಯಮ ಸಾಧಿಸುತ್ತ, ರೋಗಿಗಳಿಗೆ ಸತ್ಯಾಂಶವನ್ನು ತಿಳಿಸುತ್ತ, ಇಂಜೆಕ್ಷನ್ ಕೊಡುವುದನ್ನು ಕ್ರಮೇಣ ನಿಲ್ಲಿಸಬೇಕು.

ರೋಗಿಗಳಿಗೆ ಗ್ಲೂಕೋಸ್, ಸಲೈನ್ ಹಾಕುವುದು. ಇಂಜೆಕ್ಷನ್ ಹಾಕುವುದರ ಮುಂದಿನ ಹಂತ, ಗ್ಲೂಕೋಸ್ ಹಾಕುವುದು ನಿರ್ಜಲತೆಯನ್ನು ತಡೆಯಲು, ನಿಶ್ಶಕ್ತಿ ನಿವಾರಿಸಲಿಲ್ಲ. ಇದರ ಬಳಕೆ ವ್ಯಾಪಕವಾಗಿದೆ.

ಮಾಧ್ಯಮಗಳ ಪೂರ್ವಾಗ್ರಪೀಡಿತ ಕನ್ನಡಕ

ಪುಟ 2 ರಿಂದ

ರುಮಾಲುಗಳನ್ನು ಅಂಗಡಿಯಿಂದ ಯಾರು ಖರೀದಿಸಿದರು? ಗೃಹಮಂತ್ರಿ ಶಿವರಾಜ್ ಪಾಟೀಲ್ ಅವರೇ? ಈ ಭಯೋತ್ಪಾದಕರ ಸಂಬಂಧ ಅರಬ್‌ಸ್ಥಾನದ ತನಕ ಚಾಚಿದೆಯೆಂದು ಜಗತ್ತಿನೆದುರು ಸಾಬೀತುಪಡಿಸಲಿಕ್ಕಾಗಿಯೇ?"


ಪೋಲೀಸರ ಹೇಳಿಕೆಯ ಮೇರೆಗೆ ಮಾಧ್ಯಮಗಳ 'ಆರೋಪಿ'ಗಳ ತಲೆಗೆ 'ಭಯೋತ್ಪಾದಕ' ಪಟ್ಟಿಯನ್ನು ಕಟ್ಟಿ ಬಿಡುತ್ತವೆ. ಅಪರಾಧ ಸಾಬೀತಾಗುವ ತನಕ ಯಾರನ್ನೇ ಆಗಲಿ ಅಪರಾಧಿಯೆನ್ನುವಂತಿಲ್ಲ. ಆದರೆ, ಮಾಧ್ಯಮಗಳು ಇಂದು, ಇಂತಹ ಕಡೆ ಮೂವರು ಆತಂಕವಾದಿಗಳನ್ನು ಪೋಲೀಸರು ಬಂಧಿಸಿದ್ದಾರೆ ಎಂದು ಮತ್ತೆ ಮತ್ತೆ ಬೆಚ್ಚಿ ಬೀಳುವಂತೆ ತೋರಿಸುತ್ತಾರೆ. ಮಾಧ್ಯಮಗಳಿಗೆ ಮಾರಲಿಕ್ಕೆ (ಕಡಿಮೆ ಖರ್ಚಿನಲ್ಲಿ - ಏಕೆಂದರೆ Investigative report ಗೆ ಹಿತಾಸಕ್ತಿಗಳು ಎಲ್ಲಿ ಬಿಡುತ್ತವೆ) ಹೊಸ ಹೊಸ ಸರಕುಗಳು ಬೇಕು. ಕಡಿಮೆ ಸಮಯದಲ್ಲಿ ರುಚಿರುಚಿಯಾದ ಮಸಾಲೆ ಪದಾರ್ಥಬೇಕು. ಅದನ್ನು ಮೂಸುತ್ತಲೇ ತಲೆ ಸುತ್ತಿಬರಬೇಕು. ಆದ್ದರಿಂದ ಅದು ಶೋಧನೆಗೆ ತೊಡಗುವುದಿಲ್ಲ. ಅದಕ್ಕೆ ಅವು ಪೋಲೀಸರನ್ನು ನೆಚ್ಚಿಕೊಂಡಿರುತ್ತವೆ.

ಆಶ್ಚರ್ಯವೆಂದರೆ, ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ಬರ್ಬರ ಕೃತ್ಯ ಭಯೋತ್ಪಾದನೆಯಲ್ಲ; ನರೇಂದ್ರ ಮೋದಿ ಸರ್ಕಾರದ ವತಿಯಿಂದ ನಡೆಸಿದ ಭಯಾನಕ ನರಮೇಧ ಭಯೋತ್ಪಾದನೆ ಯಲ್ಲ; ಕರ್ನಾಟಕ, ಒರಿಸ್ಸಾ ಎಲ್ಲೆಂದರಲ್ಲಿ ಚರ್ಚುಗಳನ್ನು ನಾಶಪಡಿಸಿದ, ಕ್ರೈಸ್ತರನ್ನು ಕೊಂದ ಸಿಸ್ಟರ್‌ಗಳನ್ನು ಅತ್ಯಾಚಾರಕ್ಕೊಳಪಡಿಸಿದ ಯಾವ ಘಟನೆಯೂ ಭಯೋತ್ಪಾದನೆಯಲ್ಲ. ಕಣ್ಣೂರಿನಲ್ಲಿ ನೂರಾರು ಬಾಂಬುಗಳು ಪತ್ತೆಯಾದವು. ಕಾನ್‌ಪುರದಲ್ಲಿ ಬಾಂಬ್ ತಯಾರಿಸುತ್ತಿದ್ದಾಗಲೇ ಇಬ್ಬರು ಆರ್‌ಎಸ್‌ಎಸ್ ಕಾರ್ಯಕರ್ತರು ಸತ್ತರು. ಇಡೀ ಕಾನ್‌ಪುರವನ್ನು ಸುಟ್ಟು ಹಾಕುವಷ್ಟು ಬಾಂಬ್ ಸಂಗ್ರಹ ಅಲ್ಲಿತ್ತು. ಮಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಬಂಧಿಸಲ್ಪಟ್ಟ ಸಾಧ್ವಿ ಪ್ರಗ್ಯಾ ಸಿಂಗ್, ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ್ ಪುರೋಹಿತ್ ಭಯೋತ್ಪಾದಕರು ಅಲ್ಲವೇ ಅಲ್ಲ! ಬಾಂಬ್ ಸ್ಫೋಟಿಸಿದ್ದು, ತಾನೇ ಎಂದು ಪುರೋಹಿತ ಒಪ್ಪಿಕೊಂಡರೂ ಆತ ಭಯೋತ್ಪಾದಕನಲ್ಲ! ನರೇಂದ್ರಮೋದಿ, ಅಡ್ವಾಣಿ, ತೊಗಾಡಿಯಾರಂತಹ ನಿಜವಾದ ಭಯೋತ್ಪಾದಕರನ್ನು ಪ್ರಜಾಪ್ರಭುತ್ವದ ಸಾಂಸ್ಕೃತಿಕ ರಾಷ್ಟ್ರವಾದದ ನಾಯಕರನ್ನಾಗಿ ಬಿಂಬಿಸುವ ಮಾಧ್ಯಮಗಳು ಯಾವ ಬಾಯಿಯಿಂದ ದಯಾನಂದ ಪಾಂಡೆಯೆನ್ನುವ (ಭಯೋತ್ಪಾದಕ) ಸಾಧುಸಂತರನ್ನು ಆತಂಕವಾದಿಗಳೆಂದು ಕರೆದೀತು?

ಆಶ್ಚರ್ಯದ ಸಂಗತಿಯೆಂದರೆ ಗೃಹ ಸಚಿವ ಶಿವರಾಜ್ ಪಾಟೀಲ್ 'ಮಾಲೆಗಾಂವ್ ಬಾಂಬ್ ಸ್ಫೋಟವನ್ನು ಯಾವುದೇ ಧರ್ಮದೊಂದಿಗೆ ತಳಕು ಹಾಕಬೇಡಿ' ಎಂದಿರುವುದು.

ಇನ್ನೂ ಆಶ್ಚರ್ಯಕರ ಸಂಗತಿಯೆಂದರೆ, ಈ ಎಲ್ಲಾ ಸಂಘ ಪರಿವಾರದ ಆತಂಕವಾದಿಗಳನ್ನು ಆಯಾಯ ಸಂಘಟನೆಗಳು ಅವರು ನಮ್ಮ ಸದಸ್ಯರಲ್ಲ ಎಂದು ತಳ್ಳಿಹಾಕಿ ಬಿಡುತ್ತವೆ. ಆದರೆ ಮರುಕ್ಷಣವೇ ಅವರಿಗಾಗಿ ರಾಷ್ಟ್ರವ್ಯಾಪಿ ಚಳವಳಿಗೆ ಕರೆಕೊಡುತ್ತವೆ! ಇದಕ್ಕಿಂತ ನಿರ್ಲಜ್ಜ ರಾಜಕಾರಣ ಬೇರೆಯಿದೆಯೇ?

ಅತ್ಯಂತ ಅಪಾಯಕಾರಿಯಾದ ಸಂಗತಿಯೆಂದರೆ ಈ ನಾಜಿವಾದೀ ಶಕ್ತಿಗಳು ಸಂವಿಧಾನ, ಪ್ರಜಾಪ್ರಭುತ್ವ ಹಾಗೂ ಸೆಕ್ಯುಲರಿಸಮ್ಮನ್ನು ಬ್ಲಾಸ್ಟ್ ಮಾಡಿ ಈ ದೇಶವನ್ನು ಒಂದು ಅಘೋಷಿತ ಆಂತರಿಕಯುದ್ಧದೆಡೆಗೆ ತಳ್ಳುತ್ತಿದ್ದಾರೆ.



ನಮ್ಮ ಪ್ರಧಾನ ಮಂತ್ರಿಗಳಿಗೆ ಜಿ-20 ಶೃಂಗ ಸಭೆಯಿಂದ ಏಳು ದೊಡ್ಡ ಸಂದೇಶಗಳು ಕಾಣಬಂದಿವೆ. ಇವು ಶೃಂಗ ಸಭೆಯ ನಿರ್ಣಯಗಳು ಎನ್ನುವುದಕ್ಕಿಂತ ಭಾರತದ ಪ್ರಧಾನ ಮಂತ್ರಿಗಳ ಆಶಯ ಪಟ್ಟಿ ಎಂದೆನ್ನುವುದೇ ಬಹುಶಃ ಸೂಕ್ತ. ಶ್ರೀಮಂತ ದೇಶಗಳ ಜಿ-7 ಕೂಟದ ಜತೆಗೆ ಕೂರಲು ಸಿಕ್ಕರೆ ಅಷ್ಟರಿಂದ ಅವರು ತೃಪ್ತಿ ಪಟ್ಟುಕೊಳ್ಳ ಬಹುದು. ಆದರೆ ಅದರಿಂದ ಭಾರತದ ಕೋಟ್ಯಂತರ ಜನಸಾಮಾನ್ಯರ ಸಂಕಟಗಳಿಗೆ ಪರಿಹಾರ ಸಿಗುವುದಿಲ್ಲ.

ಪ್ರಧಾನ ಮಂತ್ರಿಗಳು ಮತ್ತು ತಿರುಕನ ಕನಸು

ವಿಶ್ವದ ಮುಂದುವರೆದ ಮತ್ತು "ಮೂಡಿ ಬರುತ್ತಿರುವ ಆರ್ಥಿಕ" ಗಳನ್ನು ಹೊಂದಿದ 20 ದೇಶಗಳ "ಜಿ-20" ಶೃಂಗಸಭೆ ಇತ್ತೀಚಿಗೆ ನಡೆಯಿತು. ಪ್ರಸಕ್ತ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಚರ್ಚಿಸಲು ಎಂದು ಬೇರೆ ಹೇಳಬೇಕಾಗಿಲ್ಲ. ಆದರೆ ಅದರಲ್ಲಿ "ನವ-ಉದಾರವಾದ"ದಿಂದ ದೂರ ಸರಿಯಬೇಕೆನ್ನುವ ನಿಲುವಾಗಲೀ, ಈ ಬಿಕ್ಕಟ್ಟನ್ನು ತಂದ ಕಾರಣಗಳನ್ನು ಎದುರಿಸುವ ಬಗ್ಗೆಯಾಗಲೀ ಏನೂ ನಿರ್ಧಾರವಾಗಲಿಲ್ಲ. ಇದು ಅಂತರಾಷ್ಟ್ರೀಯ ಹಣಕಾಸು ಬಂಡವಾಳಿಗರಿಗಂತೂ ಹರ್ಷ ತಂದಿರುವ ವಿಷಯ. ಆದರೆ ಸಂಕಟಗಳಿಗೊಳಗಾಗುತ್ತಿರುವ ಜನಸಾಮಾನ್ಯರಿಗೆ?

ಆದರೆ ನಮ್ಮ ಪ್ರಧಾನ ಮಂತ್ರಿಗಳಿಗೆ ಈ ಶೃಂಗ ಸಭೆಯಿಂದ ಏಳು ದೊಡ್ಡ ಸಂದೇಶಗಳು ಕಾಣಬಂದಿವೆ. ಶೃಂಗ ಸಭೆಯಿಂದ ಹಿಂದಿರುಗುತ್ತಿರುವಾಗ ವಿಮಾನದಲ್ಲಿ ಡಾ. ಮನಮೋಹನ ಸಿಂಗ್ ಪತ್ರಕರ್ತರಿಗೆ ಈ ಏಳು ಸಂದೇಶಗಳ ಬಗ್ಗೆ ತಿಳಿಸಿದರು. ಮೊದಲನೆಯದಾಗಿ, ಈ ಬಿಕ್ಕಟ್ಟಿನ ಜಾಗತಿಕ ಸ್ವರೂಪವನ್ನು ಸಭೆ ಗುರುತಿಸಿ ಅದಕ್ಕೆ ಜಾಗತಿಕ ಸ್ಪಂದನ ಅಗತ್ಯ ಎಂದು ಹೇಳಿದೆಯಂತೆ; ಎರಡು, ಹಲವು ದೇಶಗಳಲ್ಲಿ ಕೈಗೊಂಡ ಬೃಹತ್ "ಜಾಮೀನು"ಕ್ರಮಗಳಿಗೆ ಪೂರಕವಾಗಿ ಒಂದು ಹಣಕಾಸು ಪ್ರೋತ್ಸಾಹಕವೂ ಬೇಕು(ಅಂದರೆ ಹೆಚ್ಚೆಚ್ಚು ಸಾರ್ವಜನಿಕ ಖರ್ಚುಗಳು?); ಮೂರು, ಐಎಂಎಫ್-ವಿಶ್ವ ಬ್ಯಾಂಕ್ ಮೂಲಕ ಅಭಿವೃದ್ಧಿಶೀಲ ದೇಶಗಳಿಗೆ ಹೆಚ್ಚಿನ ಸಂಪನ್ಮೂಲ ಪೂರೈಕೆ; ನಾಲ್ಕು, ಹಣಕಾಸು ವ್ಯವಸ್ಥೆಯಲ್ಲಿ ತ್ವರಿತವಾಗಿ ನಿಯಂತ್ರಕ ಸುಧಾರಣೆಗಳು(ಚಮತ್ಕಾರವೇನಿಲ್ಲ); ಐದು, ಈ ನಿಯಂತ್ರಣಗಳ ಬಹುಪಕ್ಷೀಯ ನಿಗಾ ವ್ಯವಸ್ಥೆ; ಆರು, ದೇಶಗಳು ತಮ್ಮ ಆಂತರಿಕ ಆರ್ಥಿಕವನ್ನು ರಕ್ಷಿಸಿಕೊಳ್ಳಲು ವಿಪರೀತ ರಕ್ಷಣಾತ್ಮಕ ಕ್ರಮಗಳಿಗಿಳಿಯಬಾರದು.

ಮತ್ತು ಕೊನೆಯದಾಗಿ ಪ್ರಧಾನ ಮಂತ್ರಿಗಳು ಶೃಂಗ ಸಭೆಯಲ್ಲಿ ತಮ್ಮ ಮಧ್ಯಪ್ರವೇಶವನ್ನು ಪ್ರಸ್ತಾಪಿಸಿದರು. ಜೂಜುಕೋರ ಹಣಕಾಸು ಬಂಡವಾಳದ "ಜೂಜುಕಟ್ಟೆ ಬಂಡವಾಳಶಾಹಿ"ಯ ಬಗ್ಗೆ ತಾನು ನೆನಪಿಸಿದುದಾಗಿ ಅವರು ಹೇಳಿದರು.

ಇವು ಜಿ-20 ಶೃಂಗ ಸಭೆಯ ನಿರ್ಣಯಗಳು ಎನ್ನುವುದಕ್ಕಿಂತ ಭಾರತೀಯ ಪ್ರಧಾನ ಮಂತ್ರಿಗಳ ಆಶಯ ಪಟ್ಟಿ ಎಂದೆನ್ನುವುದೇ ಬಹುಶಃ ಸೂಕ್ತ.

ಬಂಡವಾಳಶಾಹಿಯ ಕ್ರೂರ ತರ್ಕ

ಜಿ-20ರ ಮುಖಂಡರು ಪ್ರಸಕ್ತ ಬಿಕ್ಕಟ್ಟಿನಿಂದ ಹೊರಬರಲು "ಜಾಮೀನು ಕ್ರಮ"ಗಳೊಂದಿಗೆ ಹಣಕಾಸು ಪ್ರೋತ್ಸಾಹಕಗಳು ಕೂಡಾ ಅಗತ್ಯ ಎಂದು ಬಗೆದಿರುವುದು ಸ್ಪಷ್ಟ. ಆದರೆ, ಈ "ಜಾಮೀನು" ಕ್ರಮಗಳ ಹಿಂದಿರುವುದು, ಈಗ ಕುಸಿದಿರುವ ಹಣಕಾಸು ಸಂಸ್ಥೆಗಳನ್ನು ಈ ಮೂಲಕ ಮತ್ತೆ ಎಬ್ಬಿಸಿ ನಿಲ್ಲಿಸಿದರೆ ಭವಿಷ್ಯ ಹಾಲು-ಜೇನು ಎಂಬ ನಂಬಿಕೆ. ನಾವು ಈಗಾಗಲೇ ಗಮನಿಸಿರುವಂತೆ ಇದು ಪ್ರಸಕ್ತ ಬಿಕ್ಕಟ್ಟಿನ ಮೂಲ ಕಾರಣಗಳನ್ನು ಉಪೇಕ್ಷಿಸುವ ಒಂದು ನಿಲುವು. ಈಗಿನ ಬಿಕ್ಕಟ್ಟು ಉಂಟಾಗಿರುವುದು ಸಾಲಗಾರರು ಸಾಲ(ಸಬ್ ಪ್ರೈಮ್ ಸಾಲ) ಮರುಪಾವತಿ ಮಾಡಲಾರದ ಸ್ಥಿತಿಯಲ್ಲಿರುವುದ ರಿಂದಾಗಿಯೇ ಹೊರತು ಸಾಲ ನೀಡುವವರಲ್ಲಿ ಶಕ್ತಿಯಿಲ್ಲದ್ದರಿಂದ ಅಲ್ಲ. ಸಾಲ ಪಡೆದವರನ್ನು ಸಬಲಗೊಳಿಸದೆ, ಅಂದರೆ ಅವರ ಆದಾಯಗಳನ್ನು ಹೆಚ್ಚಿಸದೆ ಸಾಲ ನೀಡುವವರಿಗೆ ಎಷ್ಟು ಹಣ ಹರಿದು ಬರುವಂತೆ ಮಾಡಿದರೂ ಏನೂ ಪ್ರಯೋಜನವಾಗದು. ಈ ಹಣದ ಹರಿವಿನಿಂದ ಸಾಲ ನೀಡಿದವರ ಅಂದರೆ ಅಂತ್ರಾಷ್ಟ್ರೀಯ ಹಣಕಾಸು ಬಂಡವಳಿಗರ ನಷ್ಟಗಳನ್ನು ಕಡಿತ ಮಾಡಬಹುದಷ್ಟೇ. ವಿನಾಶಕ್ಕೊಳಗಾದ ಸಾಲಗಾರನಿಗೆ ಇದರಿಂದ ಏನೂ ಸಹಾಯ ಸಿಗುವುದಿಲ್ಲ. ಅಲ್ಲದೆ ಉದ್ಯೋಗಾವಕಾಶಗಳ ಸಾಧ್ಯತೆಗಳಿಲ್ಲದೆ ಕ್ಷೀಣಿಸಿರುವ ಕೋಟ್ಯಂತರ ಜನಗಳ ಬದುಕಿನ ಮಟ್ಟಗಳನ್ನು ಮರಳಿ ಪಡೆಯಲು ಇದೇನೂ ಸಹಾಯ ಮಾಡುವುದಿಲ್ಲ. ಇದೇ ಬಂಡವಾಳಶಾಹಿಯ ಕ್ರೂರ ತರ್ಕ ತಾನೇ?

ಈ ಆರ್ಥಿಕ ಹಿಂಜರಿತ ಒಂದು ಆರ್ಥಿಕ ಕುಸಿತದತ್ತ ಸಾಗಿರುವಾಗ ಇದರಿಂದ ಸರ್ವನಾಶವಾಗುತ್ತಿರುವ ವಿಶಾಲ ಜನಸಮೂಹಗಳ ಆರ್ಥಿಕ ಸ್ಥಿತಿ-ಗತಿಯನ್ನು ಕೇವಲ ಆಂತರಿಕ ಬೇಡಿಕೆಗಳನ್ನು ಹೆಚ್ಚಿಸುವುದಷ್ಟೆ ಅಲ್ಲ, ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಭವಿಷ್ಯವನ್ನು ಭದ್ರಪಡಿಸಬಲ್ಲ ಬೃಹತ್ ಪ್ರಮಾಣದ ಸಾರ್ವಜನಿಕ ಹೂಡಿಕೆಗಳಿಂದ ಮಾತ್ರವೇ ಉತ್ತಮ ಪಡಿಸಲು ಸಾಧ್ಯ. ಜಿ-20 ರ ಮುಖಂಡರು ಹಣಕಾಸಿನ ಪ್ರೋತ್ಸಾಹಕ ಎನ್ನುವಾಗ ಇದೆ ಇರಬಹುದೇ? ಆದರೆ ಇಂತಹ ಪ್ರೋತ್ಸಾಹಕಗಳು ಪರಿಣಾಮಕಾರಿಯಾಗಬೇಕಾದರೆ ಅದರ ಫಲಾನುಭವಿಗಳು ಯಾರಿರಬೇಕು, ಯಾವ ಉದ್ದೇಶದಿಂದ ಈ ಹೂಡಿಕೆಗಳಿರಬೇಕು ಎಂಬ ಬಗ್ಗೆ ನಮಗೆ ಸ್ಪಷ್ಟತೆಯಿರಬೇಕು. ನಮ್ಮ ಪ್ರಧಾನ ಮಂತ್ರಿಗಳು ಯೋಚಿಸುವಂತೆ ಸಾರ್ವಜನಿಕ-ಖಾಸಗಿ ಪಾಲುದಾರಿಕೆಯೆಂಬ ಹೆಸರಿನಲ್ಲಿ ಮೂಲರಚನೆಗಳಲ್ಲಿ ಹೂಡಿಕೆಗಳನ್ನು ಹೆಚ್ಚಿಸುವುದರಿಂದ ಈ ಗುರಿ ಸಾಧನೆ ಸಾಧ್ಯವಿಲ್ಲ. ಅದು ಖಾಸಗಿ ವಲಯದ ಲಾಭಗಳನ್ನು ಹೆಚ್ಚಿಸಬಹುದು, ಆದರೆ ಜನಸಮೂಹಗಳನ್ನು ಸಬಲರಾಗಿಸುವ ಗುರಿ ಈಡೇರದೆ ಉಳಿಯುತ್ತದೆ. ಸರಕಾರ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕ ಕಾಮಗಾರಿಗಳ ಯೋಜನೆಗಳ ಮೇಲೆ ಸಾರ್ವಜನಿಕ ಹೂಡಿಕೆಗಳನ್ನು ತುಂಬುವ ಮೂಲಕ ಮಾತ್ರ ಇದು ಸಾಧ್ಯ. ಭಾರತದಲ್ಲಿ ಇಂತಹ ಸಾರ್ವಜನಿಕ ಹೂಡಿಕೆ ಕೃಷಿಯ ಸುತ್ತ ಕೇಂದ್ರಿತವಾಗಬೇಕು. ಏಕೆಂದರೆ ಅದೀಗ ಅತ್ಯಂತ ಸಂಕಟದ ಘಟ್ಟದ ಮೂಲಕ ಹಾದು ಹೋಗುತ್ತಿದೆ.

ಅರ್ಥಪೂರ್ಣ ಪ್ರಜಾಪ್ರಭುತ್ವೀ ಕರಣ ಅಗತ್ಯ

ಯಾವುದೇ ನೀತಿ ಈಗಿನ ಪರಿಸ್ಥಿತಿಯನ್ನು ಬಿಕ್ಕಟ್ಟಿನಿಂದ . ಹೊರ ತರಲು ಯಶಸ್ವಿಯಾಗಬೇಕಾದರೆ ದೇಶದ ಗಡಿಗಳನ್ನು ದಾಟುವ ಅಂತರ್ರಾಷ್ಟ್ರಿಯ ಹಣಕಾಸು ಬಂಡವಾಳದ ಹಣದ ಹರಿವಿನ ಮೇಲೆ ಕಟ್ಟುನಿಟ್ಟಾದ ಹತೋಟಿ ಅತ್ಯಗತ್ಯ. ಇಲ್ಲವಾದರೆ, ಹಿಂದಿನಂತೆ ಹಣಕಾಸು ಬಂಡವಾಳದ ಚಲನೆ ಸಟ್ಟಾಕೋರತನವನ್ನು ಅವಲಂಬಿಸಿದ್ದರೆ, ಆಂತರಿಕ ಬೇಡಿಕೆಗಳ ಮೇಲೆ ಕೈಗಾರಿಕೀಕರಣ ನಡೆಸುವ ಎಲ್ಲಾ ಪ್ರಯತ್ನಗಳು ನಿರರ್ಥಕವಾಗಬಹುದು. ಹಣಕಾಸು ಬಂಡವಾಳಿಗರು ಇಂತಹ ಹತೋಟಿಗಳನ್ನು ಖಂಡಿತ ವಿರೋಧಿಸುತ್ತಾರೆ. ಡಾ. ಮನಮೋಹನ ಸಿಂಗ್‌ರವರ ಆಡಿಯಲ್ಲಿ ಇದುವರೆಗಿನ ಅನುಭವವನ್ನು ನೋಡಿದರೆ ಭಾರತ ಈ

ಪುಟ 15ಕ್ಕೆ

ಹೋರಾಟ ಮುಂದುವರೆಯುತ್ತದೆ.....

ಸುಫ್ರೀದ್ ದತ್ತಾ, ಒಬ್ಬ ಜನಪ್ರಿಯ ಮುಖಂಡರು. ಅವರು ಪಶ್ಚಿಮ ಬಂಗಾಳದ ಸಿಪಿಐ(ಎಂ)ನ ಹೂಗ್ಲಿ ಜಿಲ್ಲಾ ಸಮಿತಿಯ ಸದಸ್ಯರು, ಅವರ ಜನಪರ ಹೋರಾಟ ಮತ್ತು ನಾಯಕತ್ವದ ಬಗೆಗೆ ಸಿಂಗೂರು, ಮಾತ್ರವಲ್ಲ, ಹೂಗ್ಲಿ ಜಿಲ್ಲೆಯಾದ್ಯಂತ ಜನರಿಗೆ ತಿಳಿದಿದೆ.

ಅವರೀಗ ಚಂಡೇರ್ ನಗೋರ್ ನ್ಯಾಯಾಲಯದ ನೀಡಿದ ತೀರ್ಪಿನಲ್ಲಿ ಶಿಕ್ಷೆಗೆ ಗುರಿಯಾಗಿದ್ದಾರೆ. ನ್ಯಾಯಾಲಯ ಅವರನ್ನು ಅಪರಾಧಿ ಎಂದು ತೀರ್ಮಾನಿಸಿದೆ. ಜೀವಾವಧಿ ಜೈಲುವಾಸದ ಶಿಕ್ಷೆ ನೀಡಿದೆ.

ಸುಧೀರ್ ದತ್ತಾ ಮಾಡಿದ ತಪ್ಪೇನು?

ಪಶ್ಚಿಮ ಬಂಗಾಳದ ಸರ್ಕಾರ ಕೈಗಾರಿಕಾ ನೀತಿಯ ಗುರಿಯೇನು. ಅದು ಹೇಗೆ ಒಟ್ಟು ರಾಜ್ಯ ಅಭಿವೃದ್ಧಿಗೆ ಪ್ರೇರಕವಾಗಲಿದೆ. ಸಿಂಗೂರಿನಲ್ಲಿ ನ್ಯಾನೋ ಕಾರು ಘಟಕ ಬರುವುದರ ಲಾಭವೇನು? ರೈತರಿಗೆ, ಭೂಮಿ ಅವಲಂಬಿಸಿದವರಿಗೆ ಸರ್ಕಾರ ಏನೆಲ್ಲಾ ಪರಿಹಾರ, ಪುನರ್‌ವಸತಿ, ಉದ್ಯೋವಕಾಶ ಒದಗಿಸಲಿದೆ. ಇದನ್ನು ಜನರಿಗೆ ಮನದಟ್ಟು ಮಾಡಿಕೊಡುವಲ್ಲಿ, ಜನರ ಮನವೊಲಿಸುವಲ್ಲಿ ದೊಡ್ಡ ಪಾತ್ರ ವಹಿಸಿದ್ದರು. ಇಂತಹ ನಾಯಕರನ್ನು ಸುಮ್ಮನೆ ಬಿಟ್ಟಾರೆಯೇ ಪಶ್ಚಿಮ ಬಂಗಾಳದ ವಿರೋಧ ಪಕ್ಷಗಳವರು.

ಸಂಜಯಗಾಂಧಿ ನೇತೃತ್ವದಲ್ಲಿ ತುರ್ತು ಪರಿಸ್ಥಿತಿಯ ಗೂಂಡಾರಾಜ್ಯದ ಯುಗದಲ್ಲಿ ಪಶ್ಚಿಮಬಂಗಾಳದ ಯುವ ಕಾಂಗ್ರೆಸ್‌ನ ಗೂಂಡಾ ಪಡೆಯ ನಾಯಕಿಯಾಗಿ ಅರಳಿದ 'ಮಮತಾ ದೀ' ವಿರೋಧ ಪಕ್ಷದ ನಾಯಕಿಯಾಗಿರುವಾಗ ಸಿಂಗೂರಿನಲ್ಲಿ ಏನೇನು ನಡೆಯಬಾರದಿತ್ತು ಎಲ್ಲ ನಡೆದು ಹೋಯಿತು.

ಒಂದು ದಿನ ಬೆಳಿಗ್ಗೆ ಸಿಂಗೂರಿನ ಆ ಅಮಾಯಕ ಯುವತಿಯ ಹೆಣ ಕಾರು ಘಟಕದ ಜಮೀನಿನ ಸಮೀಪ ದೊರೆಯಿತು. ಆರೋಪ ಸುಫ್ರೀದ್ ದತ್ತಾ ಮೇಲೆ. ಸಿಬಿಐ ಕೂಡ ಈ ಪ್ರಕರಣದಲ್ಲಿ 'ಬಳಕೆ'ಯಾಗಿದೆ. ಈ ತೀರ್ಪನ್ನು ಒಪ್ಪುವುದು ಸಾಧ್ಯವಿಲ್ಲ. ಸಿಪಿಐ(ಎಂ) ಮೇಲಿನ ಹಂತದ ಕೋರ್ಟ್‌ಗೆ ತೀರ್ಪಿನ ವಿರುದ್ಧ ಮನವಿ ಹೋಗುತ್ತದೆ. ಎಡರಂಗ, ಸಿಪಿಐ(ಎಂ)ನ ವಿರುದ್ಧ ಈ ಹಿಂದೆ ಹೆಣೆಯಲಾದ ಎಷ್ಟೋ ಪಿತೂರಿಗಳಲ್ಲಿ ಇದೂ ಒಂದು. ಅವುಗಳನ್ನು ಎದುರಿಸಿರುವ ಸಿಪಿಐ(ಎಂ) ಈ ಪ್ರಕರಣದಲ್ಲೂ ಜನ ಬೆಂಬಲ ದೊಂದಿಗೆ ಹೋರಾಟ ನಡೆಸಲು ತೀರ್ಮಾನಿಸಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ
ನವೆಂಬರ್ 30, 2008

ಜಾಗತಿಕ ಆರ್ಥಿಕ ಬಿಕ್ಕಟ್ಟು

ನಲುಗಿದ ಬಳ್ಳಾರಿ ಜಿಲ್ಲೆ

ರಾಜ್ಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ತೀವ್ರ ಆರ್ಥಿಕ ಸಂಚಲನ ಉಂಟು ಮಾಡಿದ್ದ ಬಳ್ಳಾರಿ ಗಣಿಗಾರಿಕೆ ಸ್ಥಗಿತವಾಗಿದೆ. ವಿಶ್ವದ ಆರ್ಥಿಕ ಬಿಕ್ಕಟ್ಟಿನಿಂದಾಗಿ ಇತರ ಹಲವು ಉದ್ದಿಮೆಗಳೂ ಬಿಕ್ಕಟ್ಟಿಗೆ ಸಿಲುಕಿವೆ. ಒಟ್ಟಾರೆ ಲಕ್ಷಾಂತರ ಮಂದಿ ಉದ್ಯೋಗವಿಲ್ಲದೇ ಕೈಚೆಲ್ಲಿ ಕೂರಬೇಕಾದ ಪರಿಸ್ಥಿತಿ ಬಂದಿದೆ. ಗಣಿ ಧಣಿಗಳು ಕೊಳ್ಳೆ ಹೊಡೆದ ಹಣದಲ್ಲಿ ಈಗಲೂ ಮೆರೆದಾಡುತ್ತಿದ್ದರೆ ಗಂಜೀಗೂ ಗತಿಯಿಲ್ಲದ ಜನರ ಕಡೆ ನೋಡಲು ಸರ್ಕಾರವೂ ಸಿದ್ಧವಿಲ್ಲವೆಂದಾಗಿದೆ.

ಯು.ಬಸವರಾಜು

ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣ ನೀತಿಗಳು ಬಳ್ಳಾರಿ ಜಿಲ್ಲೆಯಲ್ಲಿ ಜಾರಿಗೊಂಡ ನಂತರ, ಬಳ್ಳಾರಿ ಜಿಲ್ಲೆ ಜಾಗತಿಕವಾಗಿ ಗುರುತಿಸಲ್ಪಟ್ಟಿತು. ಮುಖ್ಯವಾಗಿ ಇಲ್ಲಿನ ಉತ್ಕೃಷ್ಟ ಕಬ್ಬಿಣ ಹಾಗೂ ಮ್ಯಾಂಗನೀಸ್ ಅದಿರಿನಿಂದ ಮೈದಳೆದ ಭಾರಿ ಬೆಟ್ಟಗಳು ಜಗತ್ತಿನ ವಿವಿಧ ದೇಶಗಳ ಕಡೆ ಸರಿದ ವೇಗವು ಭಾರಿ ಸಂಪತ್ತನ್ನು ಮುಖ್ಯವಾಗಿ ಈ ಜಿಲ್ಲೆಯಲ್ಲಿ ಗುಡ್ಡೆ ಹಾಕುವುದರೊಂದಿಗೆ ಜಿಲ್ಲೆಯು ರಾಜ್ಯದ ಹಾಗೂ ದೇಶದ ಪ್ರಾಮುಖ್ಯತೆ ಪಡೆಯುವಂತಾಯಿತು. ಕೃಷಿ ರಂಗ ಹಾಗೂ ಅದರ ಆದಾಯವೇ ಪ್ರಧಾನವಾಗಿ, ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳ 4ನೇ ಸ್ಥಾನ ಹೊಂದಿದ್ದ ಬಳ್ಳಾರಿ ಜಿಲ್ಲೆಯು, ಗಣಿಗಾರಿಕೆಯ ಬೆಳವಣಿಗೆಯಿಂದಾಗಿ ಒಮ್ಮೆಲೆ ಅದನ್ನು ನಗಣ್ಯವಾಗಿಸಿ, ಕೈಗಾರಿಕಾ ಆದಾಯವನ್ನೇ, ಪ್ರಧಾನವಾಗಿಸಿಕೊಂಡು 'ಮುಂದುವರೆದ ಜಿಲ್ಲೆ'ಗಳ ಸ್ಥಾನಕ್ಕೆ ತಾತ್ಕಾಲಿಕವಾಗಿ ನೆಗೆಯುವಂತಾಯಿತು.

ಈ ಭಾರಿ ಸಂಪತ್ತಿನ ಒಡೆತನ ಹೊಂದಿದ ಗಣಿ ಮಾಲೀಕರು ರಾಜ್ಯದ ರಾಜಕಾರಣದಲ್ಲಿ ಪ್ರಾಮುಖ್ಯತೆ ಪಡೆದರು. ಕಳೆದ ಅವಧಿಯಲ್ಲಿ ರಚಿಸಲಾದ ಕಾಂಗ್ರೆಸ್-ಜೆಡಿ(ಎಸ್) ಹಾಗೂ ಜೆಡಿ(ಎಸ್)-ಬಿಜೆಪಿ ಮತ್ತು ಹಾಲಿ ಬಿಜೆಪಿ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಜನಾರ್ಧನರೆಡ್ಡಿ ಬಳಗವಂತೂ ಬಿಜೆಪಿ ಸರ್ಕಾರದ ಬೆನ್ನೆಲುಬಾಗಿದ್ದಾರೆ. ಇತರೇ ಪಕ್ಷಗಳ ಶಾಸಕರುಗಳನ್ನು ಪಕ್ಷಾಂತರ ಮಾಡಿಸಿ ಸರ್ಕಾರದ ಅತಂತ್ರ (ಪಕ್ಷೇತರರ ಮೇಲಿನ ಅವಲಂಬನೆ) ನಿವಾರಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ. ಈ ಹಿಂದೆ ರಾಜ್ಯ ಸರ್ಕಾರಗಳ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಲಿಕ್ಕರ್ ಲಾಬಿಯು ಈಗ ಐಟಿ ಮತ್ತು ಬಿ.ಟಿ. ಹಾಗೂ ಗಣಿ ಮಾಫಿಯಾ ಬೆಳವಣಿಗೆಯಿಂದ ನೇಪಥ್ಯಕ್ಕೆ ಸರಿದುದು ಗಣಿ ಮಾಫಿಯಾ ಪ್ರಾಧಾನ್ಯತೆ ಪಡೆದುದು, ಇದರಿಂದಾಗಿ ಬಳ್ಳಾರಿ ಎಲ್ಲರ ಗಮನ ಸೆಳೆದುದು. ಎಲ್ಲವೂ ಈಗ ಇತಿಹಾಸದ ಭಾಗವಾಗಿವೆ.

ಜಾಗತಿಕ ಬಿಕ್ಕಟ್ಟು

ಜಾಗತಿಕ ಆರ್ಥಿಕ ಬಿಕ್ಕಟ್ಟು, ಜಿಲ್ಲೆಯ ಸಮೃದ್ಧ ಅದಿರಿನ ಬೆಟ್ಟಗಳ ಜಾಗತಿಕ ಸರಿಯುವಿಕೆಯ ವೇಗಕ್ಕೆ ತಾತ್ಕಾಲಿಕವಾಗಿ ಭಾರಿ ತಡೆಯಾಗಿ ಪರಿಣಮಿಸಿದೆ. ಎಲ್ಲರಿಗೂ ತಿಳಿದಂತೆ ಅಮೇರಿಕಾ ದೇಶವು ಹಣಕಾಸು ಬಿಕ್ಕಟ್ಟಿನಲ್ಲಿ ಮುಳುಗಿರುವುದು ಹಾಗೂ ಅದರ ಪರಿಣಾಮ ಜಾಗತಿಕವಾಗಿರುವಂತೆಯೇ, ಭಾರತದ ಅದರಲ್ಲೂ ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಮೇಲೂ ಆಗಿದೆ.



ಕೆಲಸವಿಲ್ಲದೆ ಕಂಗೆಟ್ಟು ಕುಳಿತ ಕಾರ್ಮಿಕರು

ಬಳ್ಳಾರಿ ಜಿಲ್ಲೆಯು, ಸ್ಟೀಲ್ ಹಾಗೂ ಕಬ್ಬಿಣದ ಅದಿರು ಮತ್ತು ಅದೇ ರೀತಿ ಗಾರ್ಮೆಂಟ್ (ಅಂದರೆ ಜೀನ್ಸ್ ವ್ಯಾಪಾರ) ಕೈಗಾರಿಕೆಯಲ್ಲಿ ಪ್ರಸಿದ್ಧ ಪಡೆದಿದೆ. ಗಣಿ ವ್ಯಾಪಾರದಿಂದ ಬಂದ ಭಾರೀ ಲಾಭವು ಗಣಿ ವ್ಯಾಪಾರದಿಂದ ಇನ್ನಷ್ಟು ಲಾಭ ಮಾಡಲು ಅಕ್ರಮಗಣಿಗಾರಿಕೆಯಲ್ಲಿ ತೊಡಗುವಂತೆ ಪ್ರೋತ್ಸಾಹಿಸುವುದು. ಇದರೊಟ್ಟಿಗೆ ಅನಧಿಕೃತ ಗಣಿಗಾರಿಕೆ ಬೆಳೆಯುವಂತಹ ಪರಿಸ್ಥಿತಿ ಉಂಟಾದುದು. ಎಲ್ಲವೂ, ಬಳ್ಳಾರಿಯನ್ನು ಭ್ರಷ್ಟಾಚಾರದಲ್ಲಿ ರಾಜ್ಯದ ಮುಂಚೂಣಿಗೆ ತಂದು, ಅದು ಕುಖ್ಯಾತಿ ಪಡೆಯುವಂತೆ ಮಾಡಿತು. ಅಧಿಕಾರಿಗಳು ಆಯಕಟ್ಟಿನ ಜಾಗಗಳಿಗೆ ಹಲವು ಲಕ್ಷ ನೀಡಿ ಮುಗಿಬಿದ್ದರು. ಸಂಡೂರಿನ ಅರಣ್ಯಾಧಿಕಾರಿಯ ಜಾಗ 1 ಕೋಟಿ ರೂಪಾಯಿ ತೂಗಿದ ವರದಿಯಿದೆ. ಇದೆಲ್ಲವೂ ಒಟ್ಟಾಗಿ ಸೇರಿ ಜಿಲ್ಲೆಯಲ್ಲಿ ರಿಯಲ್ ಎಸ್ಟೇಟ್ ವ್ಯಾಪಾರವನ್ನು ಗಣನೀಯವಾಗಿ ಬೆಳೆಸಿತ್ತು. ಒಟ್ಟಾರೆ ಈ ಎಲ್ಲ ಬೆಳವಣಿಗೆಗಳಲ್ಲಿ ಒಂದೂವರೆ ಲಕ್ಷಕ್ಕೂ ಅಧಿಕ ಕುಟುಂಬಗಳು ಜೀವನೋಪಾಯ ಕಂಡು ಕೊಂಡಿದ್ದವು. ಪ್ರತಿಷ್ಠಿತ ಜಿಂದಾಲ್-ಕಂಪನಿಗಳ ಹಾಗೂ 30ಕ್ಕೂ ಹೆಚ್ಚು ಮೆದು ಕಬ್ಬಿಣದ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು, ಕ್ರಷರ್‌ಗಳು ಸೇರಿ ಮತ್ತು ಸಾವಿರಾರು ಅಪ್ರತ್ಯಕ್ಷ ಉದ್ಯೋಗಗಳ ಸೇರಿ, ಹಲವು ದಶ ಸಾವಿರ ಉದ್ಯೋಗಿಗಳು ಅಂದರೇ ಒಟ್ಟಾರೆ ಜಾಗತೀಕರಣದಿಂದ, ಅಂದರೆ ಗಣಿಗಾರಿಕೆಯಿಂದ ತಾತ್ಕಾಲಿಕವಾಗಿ ಉಂಟಾಗಿದ್ದ ಲಕ್ಷಾಂತರ ಕುಟುಂಬಗಳ ಉದ್ಯೋಗದ ಶೇ.60ಕ್ಕೂ ಹೆಚ್ಚು ಕುಟುಂಬಗಳು ಜಾಗತಿಕ ಬಿಕ್ಕಟ್ಟಿನ ಪರಿಣಾಮವಾಗಿ ತಮ್ಮ ಜೀವನೋಪಾಯ ಕಳೆದುಕೊಂಡಿವೆ.

ಕಾರಣವೇನು?

ಲಕ್ಷಾಂತರ ಉದ್ಯೋಗಗಳು ಕಳೆದು ಹೋಗಲು ಹಲವು ಕಾರಣಗಳಿವೆ. ಗಣಿಗಾರಿಕೆ ಈ ಪ್ರಮಾಣದಲ್ಲಿ ನಡೆಯುವುದಕ್ಕೆ ಮುಂಚೆಯೇ ಲಕ್ಷಾಂತರ ಗಣಿ ಕಾರ್ಮಿಕರ ಆಶ್ರಯ ತಾಣವಾಗಿತ್ತು. ಸರ್ಕಾರದ ಯಾಂತ್ರೀಕರಣ ನೀತಿಯಿಂದಾಗಿ ಇವರೆಲ್ಲಾ ಉದ್ಯೋಗ ಕಳೆದುಕೊಂಡಿದ್ದು, ಮೊದಲ ಹೊಡೆತವಾಗಿದ್ದಿತು. ಗಣಿಗಾರಿಕೆ ವ್ಯಾಪಕವಾಗಿ ಬೆಳೆದ ನಂತರ ದೊಡ್ಡ ಪ್ರಮಾಣದಲ್ಲಿ ಟ್ರಾನ್ಸ್‌ಪೋರ್ಟ್ ವ್ಯವಹಾರ ಬೆಳೆಯಿತು. 20 ಸಾವಿರಕ್ಕೂ ಅಧಿಕ ಲಾರಿಗಳು, ಡಿಗ್ಗಿಂಗ್ ಮೆಷಿನ್‌ಗಳು, ಸಾವಿರಾರು ಜೀಪ್‌ಗಳು, ಬೈಕ್‌ಗಳು ಉದ್ಯೋಗದಲ್ಲಿ ತೊಡಗಿಸಿಕೊಂಡವು. ಇವರ ಜೊತೆ ದೊಡ್ಡ ಪ್ರಮಾಣದಲ್ಲಿ ಗ್ಯಾರೇಜ್‌ಗಳು ತಲೆ ಎತ್ತಿ ಉದ್ಯೋಗ ನೀಡಿದವು. ಹೊಸದೊಂದು ಉದ್ಯೋಗದ ದೊಡ್ಡ ಪ್ರವಾಹವೇ ಬೆಳೆಯಿತು. ಹೊಸಪೇಟೆ ತಾಲ್ಲೂಕಿನ ಬುಕ್ಕಸಾಗರ ಒಂದು ಚಿಕ್ಕಹಳ್ಳಿ. ಈ ಗ್ರಾಮವೊಂದರಲ್ಲೇ 250 ಕ್ಕೂ ಅಧಿಕ ಕುಟುಂಬಗಳ ಜನರು ಡ್ರೈವರ್‌ಗಳಾಗಿ, ಕ್ಲೀನರ್‌ಗಳಾಗಿ ಉದ್ಯೋಗ ಪಡೆದಿದ್ದರು. ಒಟ್ಟಾರೆ ಸಾವಿರಾರು ಕುಟುಂಬಗಳು ಡ್ರೈವರ್‌ಗಳಾಗಿ, ಕ್ಲೀನರ್‌ಗಳಾಗಿ ಉದ್ಯೋಗ ಪಡೆದಿದ್ದರು. ಒಟ್ಟಾರೆ ಲಕ್ಷಾಂತರ ಕುಟುಂಬವನ್ನು ಕೈಗಾರಿಕೆ ಕೈ ಬೀಸಿ ಕರೆದು ತನ್ನ ತೆಕ್ಕೆಯೊಳಗೆ ತೆಗೆದುಕೊಂಡಿತ್ತು. ಅದೆಲ್ಲವೂ ಈಗ ಕನಸಿನ ಕಂತೆಯಾಗಿದೆ. ಗಣಿಗಾರಿಕೆ ಸ್ಥಗಿತಗೊಳ್ಳುವುದರೊಂದಿಗೆ ಅದು ಕಳೆದು ಹೋಗಿದೆ. ಇದಕ್ಕೆ ಕಾರಣಗಳನ್ನು ಎಂದು ಕಾಣಬಹುದಾಗಿದೆ.



ಉರುಳದ ಚಕ್ರಗಳು

ಮೊದಲನೆಯದು ಎಲ್ಲರೂ ಗಮನಿಸಿದಂತೆ ಗಣಿಗಾರಿಕೆಯ ಭಾರಿ ಲಾಭವು ಗಣಿ ಮಾಲೀಕರ ನಡುವೆ ಭಾರಿ ಸ್ಪರ್ಧೆಯನ್ನೊಡ್ಡಿತು. ಇದರಿಂದಾಗಿ ಮಾಫಿಯಾ ಶಕ್ತಿಗಳು ತಲೆ ಎತ್ತಿ ಅಟ್ಟಹಾಸ ಮೆರೆದು ಜಿಲ್ಲೆಯ ಕಾನೂನು ಸುವ್ಯವಸ್ಥೆ ಗಾಳಿಗೆ ತೂರಲ್ಪಟ್ಟದೆಲ್ಲವೂ ವೇದ್ಯವೇ... ಇದರಿಂದಾಗಿ ಗುತ್ತೇದಾರಿಕೆ ಬೆಳೆಯುವಂತಾಯಿತು. ಅದರ ಪರಿಣಾಮವಾಗಿ ಇದರ ಮುಂಚೂಣಿ ಯಲ್ಲಿರುವ ಬಂಡವಾಳದಾರರು ಇಡೀ ಜಿಲ್ಲೆಯ ಗಣಿಗಾರಿಕೆಯ ಗುತ್ತೇದಾರಿಕೆಗೆ ತಮ್ಮನ್ನು ತೊಡಗಿಸಿಕೊಳ್ಳಲು ಮುಂದಾದರು. ಹಾಗೇ ಮುನ್ನಡೆ ಕಂಡುಕೊಂಡ ರೆಡ್ಡಿ ಬಳಗ ತಮ್ಮ ಅಧಿಕಾರ ದುರುಪಯೋಗ ಮಾಡಿ, ಅಕ್ರಮ ಗಣಿಗಾರಿಕೆ ಹೆಸರಿನಲ್ಲಿ, ರೈತರ ಪಟ್ಟಾ ಜಮೀನುಗಳಲ್ಲಿ ಅನಧಿಕೃತ ಗಣಿಗಾರಿಕೆಯಲ್ಲಿ ತೊಡಗಿದ್ದ ಬಡಪಾಯಿಗಳ ಮೇಲೆ ಬಿದ್ದಿತ್ತು. ಸುಮಾರು 60-80 ಕೋಟಿ ಮೌಲ್ಯದ (ಅಂದಿನ ಬೆಲೆಗಳಲ್ಲಿ) ಅದಿರನ್ನು ವಶಪಡಿಸಿಕೊಂಡು, ಕಡಿಮೆ ಬೆಲೆಗೆ ಹರಾಜು ಹಾಕಿತು. ಇದರ ವಿರುದ್ಧ ಪ್ರತಿಭಟನೆಯನ್ನು ತೀವ್ರವಾಗಿ ನಡೆಸಿದಾದರೂ, ಹತ್ತಾರು ಸಾವಿರ ಕುಟುಂಬಗಳು ಜಿಲ್ಲೆಯ 3 ತಾಲ್ಲೂಕುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ತಮ್ಮ ಜೀವನೋಪಾಯ ಕಳೆದುಕೊಂಡರು. ಅನಧಿಕೃತ ಗಣಿಗಾರಿಕೆಯಲ್ಲಿ ಸಾಪೇಕ್ಷವಾಗಿ ಕಡಿಮೆ ಬೆಲೆಗೆ ಕಲ್ಲು ಖರೀದಿಸುತ್ತಿದ್ದ ಬಹಳಷ್ಟು ಮೆದು ಕಬ್ಬಿಣದ ಘಟಕಗಳು ಉತ್ಪಾದನೆ ನಿಲ್ಲಿಸುವಂತಾಯಿತು.

ಮತ್ತೊಂದು ಕಾರಣವೆಂದರೆ:

ಚೈನಾ ದೇಶವು ಒಲಂಪಿಕ್ಸ್ ಮುಗಿಸಿದ ನಂತರ ಗಣನೀಯ ಪ್ರಮಾಣದ ಅದಿರನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿತು ಹಾಗೂ ಇದೇ ಸಂದರ್ಭದಲ್ಲಿ ಜಾಗತಿಕ ಹಣಕಾಸು ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸ್ಟೀಲ್ ಹಾಗೂ ಅದಿರಿನ ಬೆಲೆಯು ಗಣನೀಯವಾಗಿ ಕುಸಿಯಿತು. ಇದರಿಂದಾಗಿ ಮೊದಲೇ ಆತಂಕದಲ್ಲಿ ನಡೆಯುತ್ತಿದ್ದ ಮೆದು ಕಬ್ಬಿಣದ ಘಟಕಗಳು ಉತ್ಪಾದನೆಯನ್ನು ಪೂರ್ಣವಾಗಿ ನಿಲ್ಲಿಸುವಂತಾಗಿದೆ. ಹಲವು ಹೊಸ ಘಟಕಗಳು ಉದ್ಘಾಟನೆಗೆ ಸಿದ್ದಗೊಂಡಿದ್ದರೂ, ಉತ್ಪಾದನೆ ತೀರುವೆಂದು ತೆರೆದುಕೊಳ್ಳಲಿಲ್ಲ, ಹಾಗೂ ಉತ್ಪಾದನೆಗೆ ತೊಡಗಿದವು. ಪ್ರತಿದಿನ ಲಕ್ಷಾಂತರ ನಷ್ಟ ಹೊಂದುವಂತಾಗಿವೆ. ಸಾವಿರಾರು ಕಾರ್ಮಿಕರು

ಪುಟ 10ಕ್ಕೆ



ಗಣಿ ಹಣ [illegible]ಟಿ ಹೊಡೆದು [illegible]ಾಗ್ಗಿಲು ಎಳೆದು[illegible]ಂಡ ಜನಾರ್ದನ ರೆಡ್ಡಿ

ಯುಪಿಎ ಸರಕಾರ ಅಲ್ಪಸಂಖ್ಯಾತರನ್ನು ಓಲೈಸಲಿಕ್ಕಾಗಿ ಭಯೋತ್ಪಾದನೆಯ ಬಗ್ಗೆ ಮೆದು ಧೋರಣೆ ತಳೆದಿದೆ ಎಂಬ ಆಪಾದನೆಯ ಆಧಾರದಲ್ಲಿ ತನ್ನ "ಭಯೋತ್ಪಾದನೆ ವಿರುದ್ಧ ಪ್ರಚಾರ"ವನ್ನು ಬಿಜೆಪಿ ಅವಿಶ್ರಾಂತವಾಗಿ ನಡೆಸಿಕೊಂಡು ಬಂದಿದೆ. ಜಾತ್ಯಾತೀತ ಪಕ್ಷಗಳು ತಮ್ಮ ಮುಸ್ಲಿಂ ವೋಟ್ ಬ್ಯಾಂಕುಗಳನ್ನು ರಕ್ಷಿಸಿಕೊಳ್ಳ ಬಯಸುವುದರಿಂದ ಭಯೋತ್ಪಾದನೆಯ ವಿರುದ್ಧ ದೃಢ ಕ್ರಮಗಳನ್ನು ತೆಗೆದು ಕೊಳ್ಳಲು ಸಿದ್ಧವಾಗಿಲ್ಲ ಎಂಬುದು ಅದರ ಆರೋಪವಾಗಿತ್ತು. ಆದರೆ ಅದೇ ಬಿಜೆಪಿ ಈಗ ಆರೆಸ್ಸೆಸ್ ನಿಲುವನ್ನು ಸಾರಾಸಗಟಾಗಿ ಅಂಗೀಕರಿಸಿ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ಬುಡಮೇಲು ಮಾಡುತ್ತಿದೆ ಎಂಬ ಆರೋಪಕ್ಕೆ ತಾನೇ ಒಳಗಾಗುತ್ತಿದೆ. ತನ್ನ ಹಿಂದುತ್ವ ಗುರುಗಳನ್ನು ರಕ್ಷಿಸಲಿಕ್ಕಾಗಿಯೇ ಅದು ಭಯೋತ್ಪಾದನೆಯ ಬಗ್ಗೆ ಮೆದು ಧೋರಣೆ ತಳೆಯುತ್ತಿದೆ ಮತ್ತು ಭಯೋತ್ಪಾದನೆ ಯಾವ ಮೂಲದಿಂದ ನಡೆದರೂ ಅದನ್ನು ನಿಷ್ಪಕ್ಷಪಾತದಿಂದ ತನಿಖೆ ಮಾಡಬೇಕಾದ ಪ್ರಭುತ್ವದ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ ಎಂಬ ಆರೋಪ ಅದರ ಮೇಲೆ ಬರುವಂತಾಗಿದೆ.

ಭಯೋತ್ಪಾದನೆಯ ಬೆನ್ನಿಗೆ ನಿಂತ ಬಿಜೆಪಿ

ಪ್ರಕಾಶ್ ಕಾರಟ್

ಬಿಜೆಪಿ ಮುಖಂಡರು ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ತನಿಖೆಗೆ ಒಳಗಾಗಿರುವ ಪ್ರಜ್ಞಾ ಠಾಕುರ್ ಮತ್ತು ಲೆಫ್ಟಿನೆಂಟ್ ಕರ್ನಲ್ ಪುರೋಹಿತ್ ಬೆಂಬಲಕ್ಕೆ ಇಳಿದಿದ್ದಾರೆ. ಎಲ್.ಕೆ.ಅಡ್ವಾಣಿ ಇವರಲ್ಲಿ ಇತ್ತೀಚಿನವರು. ಪ್ರಗ್ಯಾ ಠಾಕುರ್‌ಳನ್ನು ಚಿತ್ರಹಿಂಸೆಗೆ ಗುರಿಪಡಿಸಲಾಗಿದೆ ಎಂಬ ಆಪಾದನೆಯ ನ್ಯಾಯಾಂಗ ತನಿಖೆಯಾಗಬೇಕು ಎಂದು ಅವರು ಆಗ್ರಹಿಸಿದ್ದಾರೆ. ಮಾಲೆಗಾಂವ್ ಮೊಕದ್ದಮೆಯ ತನಿಖೆ ನಡೆಸುತ್ತಿರುವ ಎಟಿಎಸ್(ಭಯೋತ್ಪಾದಕ-ವಿರೋಧಿ) ತಂಡವನ್ನು ಬದಲಿಸಬೇಕು ಎಂದೂ ಅವರು ಆಗ್ರಹಿಸಿದ್ದಾರೆ. ಇದಕ್ಕೆ ಮೊದಲು, ಅಕ್ಟೋಬರ್ 31 ರಂದು ಅವರು ಪ್ರಗ್ಯಾ ಠಾಕುರ್ ತಪ್ಪಿತಸ್ಥರೆಂದು ಕಂಡು ಬಂದರೆ ಆಕೆಗೆ ಶಿಕ್ಷೆಯಾಗಬೇಕು ಎಂದು ಪತ್ರಕರ್ತರಿಗೆ ಹೇಳಿದ್ದರು. ಅಷ್ಟೇ ಅಲ್ಲ, ಆಕೆಗೂ ಬಿಜೆಪಿಗೂ ಸಂಬಂಧವಿಲ್ಲ, ಸಂಘ ಪರಿವಾರದ ಸಂಘಟನೆಗಳಿಂದ ಯಾರಾದರೂ ಯಾವುದಾದರೂ ಅಪರಾಧ ಮಾಡಿದ್ದಾರೆ ಎಂದು ಕಂಡು ಬಂದರೆ ಅವರಿಗೆ ಶಿಕ್ಷೆಯಾಗಲಿ ಎಂದಿದ್ದರು.

ಬಿಜೆಪಿ ಅಧ್ಯಕ್ಷ ರಾಜನಾಥ್ ಸಿಂಗ್ ಹಿಂದೂ ಧಾರ್ಮಿಕ ಮುಖಂಡರ ಮೇಲೆ ಗುರಿಯಿಡಲಾಗುತ್ತಿದೆ ಎನ್ನುತ್ತಾ ಬಂದಿದ್ದಾರೆ. ಈಗ ಅಡ್ವಾಣಿಯವರ ನಿಲುವು ಬದಲಾವಣೆ ಇದಕ್ಕನುಗುಣವಾಗಿದೆ. ನವೆಂಬರ್ 16ರಂದು ಪಾಣಿಪತ್‌ನಲ್ಲಿ ನಡೆದ ಆರೆಸ್ಸೆಸ್-ವಿಹೆಚ್‌ಪಿ ಪ್ರಾಯೋಜಿತ 'ಸಾಧುಗಳ' ಸಮ್ಮೇಳನದಲ್ಲಿ ರಾಜನಾಥ್ ಸಿಂಗ್ ಆರೆಸ್ಸೆಸ್ ಮುಖ್ಯಸ್ಥ ಸುದರ್ಶನ್, ವಿಹೆಚ್‌ಪಿ ಅಧ್ಯಕ್ಷ ಅಶೋಕ ಸಿಂಘಲ್ ಮತ್ತು ವಿಹೆಚ್‌ಪಿ 'ಸಾಧು'ಗಳ ಜೊತೆಗೆ ವೇದಿಕೆಯಲ್ಲಿದ್ದರು. ಹಿಂದೂ ಧಾರ್ಮಿಕ ಮುಖಂಡರ ದೂಷಣೆಗಳನ್ನು ಮುಂದುವರೆಸಿದರೆ ಬಿಜೆಪಿ ಬೀದಿಗಿಳಿಯುತ್ತದೆ ಎಂದು ಅವರು ಅಲ್ಲಿ ಹೇಳಿದರು. ಮಾಲೆಗಾಂವ್ ಬಾಂಬ್ ಸ್ಫೋಟದಲ್ಲಿ ಆಪಾದಿತರಾದವರನ್ನು ಸಮರ್ಥಿಸಿಕೊಳ್ಳಬೇಕು, ಇಲ್ಲದಿದ್ದರೆ ಇಸ್ಲಾಮೀ ಭಯೋತ್ಪಾದನೆಯ ವಿರುದ್ಧ ಪ್ರಚಾರವೆಲ್ಲ ನಿರರ್ಥಕವಾಗುತ್ತದೆ ಎಂಬುದು ಆರೆಸ್ಸೆಸ್ ಆದೇಶ. ಆದ್ದರಿಂದಲೆ ಆರಂಭದಲ್ಲಿ ಹಿಂಜರಿದ ಬಿಜೆಪಿ ಈಗ ಬಹಿರಂಗವಾಗಿ ಪ್ರಗ್ಯಾ ಠಾಕುರ್ ಮತ್ತು ಲೆಫ್ಟಿನೆಂಟ್ ಕರ್ನಲ್ ಪುರೋಹಿತ್‌ರಂತವರ ಬೆಂಬಲಕ್ಕಿಳಿದಿದೆ.

ಏಕೆ ಈ ಸಮರ್ಥನೆ?

ಆರೆಸ್ಸೆಸ್ ಮತ್ತು ಅದರ ಸಂಘಟನೆಗಳು ಆರಂಭಿಸಬೇಕೆಂದಿರುವ ಪ್ರಚಾರ ಹೇಗಿರಬೇಕು ಎಂಬುದನ್ನು ಪಾಣಿಪತ್ ಸಭೆಯಲ್ಲಿ ನಿರ್ಧರಿಸಲಾಯಿತು. ಮಹಾರಾಷ್ಟ್ರ ಸರಕಾರ ಮತ್ತು ಯುಪಿಎ ಹಿಂದೂ ಧಾರ್ಮಿಕ ಮುಖಂಡರ ಮೇಲೆ ಗುರಿಯಿಟ್ಟಿದೆ, ಈ ಮೂಲಕ "ಹಿಂದೂ" ಭಯೋತ್ಪದನೆಯೆಂದು ಪ್ರಚಾರ ಮಾಡಬಹುದೆಂದು ಅವರ ಯೋಚನೆ; ಪ್ರಗ್ಯಾ ಠಾಕುರ್ ಮತ್ತು ಪುರೋಹಿತ್‌ರ ಮೇಲೆ ಮಹಾರಾಷ್ಟ್ರ ಎಟಿಎಸ್ ಸರಕಾರದ ಸೂಚನೆಗಳ ಪ್ರಕಾರ ಸುಳ್ಳು ಆಪಾದನೆಗಳನ್ನು ಹೊರಿಸಲಾಗಿದೆ; ಇನ್ನೂ ಸೇವೆಯಲ್ಲಿ ಇರುವ ಸೇನಾಧಿಕಾರಿಯ ವಿರುದ್ಧ ಸುಳ್ಳು ಆಪಾದನೆಗಳನ್ನು ಹಾಕಿ ಸೇನೆಯನ್ನು ದೂಷಿಸಲಾಗುತ್ತಿದೆ; ಹಿಂದುಗಳು ಭಯೋತ್ಪಾದಕರಾಗಲು ಸಾಧ್ಯವಿಲ್ಲವಾದ್ದರಿಂದ ಯಾವ ಹಿಂದುತ್ವ ಸಂಘಟನೆಯೂ ಭಯೋತ್ಪಾದನೆ ನಡೆಸಲು ಸಾಧ್ಯವಿಲ್ಲ ಎಂಬುದು ಈ ಪ್ರಚಾರದ ಮುಖ್ಯ ಅಂಶಗಳು.



ಪ್ರಗ್ಯಾ ಜೊತೆ ರಾಜನಾಥ ಸಿಂಗ್ ಮತ್ತಿತರ ಬಿಜೆಪಿಯ ನಾಯಕರು ಸಭೆಯಲ್ಲಿ

ಏಕೆ ಬಿಜೆಪಿ ಭಯೋತ್ಪಾದನೆಗೆ ಇಳಿದಿರುವವರನ್ನು ಸಮರ್ಥಿಸುವ ಅಪಾಯಕಾರಿ ನಿಲುವನ್ನು ಅಂಗೀಕರಿಸಿದೆ, ಈ ನಿಲುವಿಗೆ ಬೆಂಬಲವಾಗಿ ಏಕೆ ಸುಳ್ಳು ತರ್ಕಗಳನ್ನು ಹೆಣೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

ಯುಪಿಎ ಸರಕಾರ ಅಲ್ಪಸಂಖ್ಯಾತರನ್ನು ಓಲೈಸಲಿಕ್ಕಾಗಿ ಭಯೋತ್ಪಾದನೆಯ ಬಗ್ಗೆ ಮೆದು ಧೋರಣೆ ತಳೆದಿದೆ ಎಂಬ ಆಪಾದನೆಯ ಆಧಾರದಲ್ಲಿ ತನ್ನ "ಭಯೋತ್ಪಾದನೆ ವಿರುದ್ಧ ಪ್ರಚಾರ"ವನ್ನು ಬಿಜೆಪಿ ಅವಿಶ್ರಾಂತವಾಗಿ ನಡೆಸಿಕೊಂಡು ಬಂದಿದೆ. ಜಾತ್ಯಾತೀತ ಪಕ್ಷಗಳು ತಮ್ಮ ಮುಸ್ಲಿಂ ವೋಟ್ ಬ್ಯಾಂಕುಗಳನ್ನು ರಕ್ಷಿಸಿಕೊಳ್ಳ ಬಯಸುವುದರಿಂದ ಭಯೋತ್ಪಾದನೆಯ ವಿರುದ್ಧ ದೃಢ ಕ್ರಮಗಳನ್ನು ತೆಗೆದು ಕೊಳ್ಳಲು ಸಿದ್ಧವಾಗಿಲ್ಲ ಎಂಬುದು ಅದರ ಆರೋಪವಾಗಿತ್ತು. ಬಿಜೆಪಿ ಮತ್ತು ಹಿಂದುತ್ವ ಸಂಘಟನೆಗಳ "ಭಯೋತ್ಪಾದನೆ-ವಿರೋಧಿ ಪ್ರಚಾರ"ಮುಸ್ಲಿಂ ಸಮುದಾಯವನ್ನೇ ಗುರಿ ಮಾಡಿದೆ. ಬಿಜೆಪಿ ಕೂಡಾ ಭಯೋತ್ಪಾದನೆಯ ಪ್ರಶ್ನೆಯನ್ನು ತನ್ನ ಹಿಂದೂ ಕೋಮುವಾದಿ ಪ್ರಚಾರದೊಂದಿಗೆ ಬೆಸೆದು ಭಾರತದಲ್ಲಿ ನಡೆಯುತ್ತಿರುವ ಎಲ್ಲಾ ಭಯೋತ್ಪಾದಕ ಧಾಳಿಗಳಿಗೆ ಮುಸ್ಲಿಂ ಸಮುದಾಯವನ್ನು ಗುರಿಮಾಡಿದೆ. ಬಹಳ ಜಾಗರೂಕತೆಯಿಂದ ಬೆಸೆದ ಈ ಕೋಮುವಾದಿ ವೇದಿಕೆಯನ್ನು ಮಾಲೆಗಾಂವ್ ಸ್ಫೋಟದ ಎಟಿಎಸ್ ತನಿಖೆ ಸ್ಫೋಟಿಸಿ ಬಿಡಬಹುದೆಂಬ ಭೀತಿ ಅವರಿಗೆ ಉಂಟಾಗಿದೆ.



ಪ್ರಮುಖ ಆರೋಪಿ ಪುರೋಹಿತ್

ಆದ್ದರಿಂದಲೇ ಸಂಘ ಪರಿವಾರದ ಸಂಘಟನೆಗಳ ಯಾರ ಮೇಲಾದರೂ ಪುರಾವೆಗಳಿದ್ದರೆ ಅವರನ್ನು ಶಿಕ್ಷಿಸಬೇಕು ಎಂಬ ಎಲ್ .ಕೆ. ಅಡ್ವಾಣಿಯವರ ಹಿಂದಿನ ತರ್ಕಬದ್ಧ ನಿಲುವು ಹಿಂದುತ್ವ ಸಂಘಟನೆಯ ಯಾರನ್ನೂ ಭಯೋತ್ಪಾದಕ ಅಪರಾಧಗಳಿಗಾಗಿ ತನಿಖೆ ಮಾಡಬಾರದು ಎಂಬ ನಿಲುವಾಗಿ ಪರಿವರ್ತನೆಗೊಂಡಿದೆ.

ಯಾವ ಹಿಂದುತ್ವ-ಪರ ವ್ಯಕ್ತಿಯ ಮೇಲೂ ಭಯೋತ್ಪಾದಕ ಚಟುವಟಿಕೆಗಳ ಆರೋಪ ಹೊರಿಸಲು ಸಾಧ್ಯವಿಲ್ಲ ಎಂಬ ನಿಲುವು ಅಂಗೀಕರಿಸಿ ಬಿಜೆಪಿ ದಯಾನಂದ ಪಾಂಡೆಯಂತಹ ಒಬ್ಬ ಖೋಟಾ 'ಶಂಕರಾಚಾರ್ಯ'ರನ್ನು ಸಮರ್ಥಿಸಿಕೊಳ್ಳುವ ಸ್ಥಿತಿಗೆ ಬಂದಿದೆ. ಅದು ಮಾಲೆಗಾಂವ್ ಸ್ಫೋಟ ಮತ್ತು ಇತರ ಸಂಬಂಧಿತ ಭಯೋತ್ಪಾದಕ ಘಟನೆಗಳ ಬಗ್ಗೆ ತನಿಖೆಗಳು ಮುಗಿಯುವ ವರೆಗೆ ಕಾಯಲು ಏಕೆ ಸಿದ್ಧವಿಲ್ಲ?



ಆರೋಪಿ ಪ್ರಗ್ಯಾ ಮತ್ತು
ಸ್ವಘೋಷಿತ ಶಂಕರಚಾರ್ಯ ಪಾಂಡೆ

ಮುಸ್ಲಿಂ ಭಯೋತ್ಪಾದನೆ ಎಂದಿಲ್ಲವೇ?

ಬಿಜೆಪಿಯ ಪ್ರಧಾನ ಮಂತ್ರಿ ಅಭ್ಯರ್ಥಿ ಮುಸ್ಲಿಂ ಭಯೋತ್ಪಾದನೆ ಎಂಬ ಪದವನ್ನು ಬಳಸಿಲ್ಲ ಎಂದು ಹೇಳಿ ಆಚಾತುರ್ಯ ಎಸಗಿದ್ದಾರೆ. ಚಂಡೀಗಢದಲ್ಲಿ ಅವರು " ನಾವೆಂದೂ ಸಿಖ್ ಭಯೋತ್ಪಾದನೆ ಮತ್ತು ಮುಸ್ಲಿಂ ಭಯೋತ್ಪಾದನೆ ಎಂಬ ಪದಗಳನ್ನು ಬಳಸಿಲ್ಲ" ಎಂದು ಸಾರಿದರು. ಆದರೆ ಆರೆಸ್ಸೆಸ್‌ನ ಇತ್ತೀಚೆಗೆ ನಡೆದ ಅಖಿಲ ಭಾರತ ಕಾರ್ಯಕಾರಿಣಿ ಸಭೆ ಅಂಗೀಕರಿಸಿದ ಒಂದು ನಿರ್ಣಯದ ಶಿರೋನಾಮೆ-"ಇಸ್ಲಾಮೀ ಭಯೋತ್ಪಾದನೆಯನ್ನು ಬಲವಾಗಿ ಹತ್ತಿಕ್ಕಿ" ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಇನ್ನೊಬ್ಬ ಬಿಜೆಪಿ ಮುಖಂಡ, ಕಲ್ಯಾಣ್ ಸಿಂಗ್ ಕೆಲವು ಸಮಯದ ಹಿಂದೆ "ಎಲ್ಲಾ ಭಯೋತ್ಪಾದಕರು ಮುಸ್ಲಿಮರು ಎಂದು ಹೇಳಲು ನಾವು ನಾಚಿಕೊಳ್ಳುವ ಅಗತ್ಯವಿಲ್ಲ" ಎಂಬ ಕುಖ್ಯಾತ ಹೇಳಿಕೆ ನೀಡಿಡಿದ್ದರು. ಒಟ್ಟಿನಲ್ಲಿ, ಸಂಘ ಪರಿವಾರ ಇದುವರೆಗೂ ಭಯೋತ್ಪಾದನೆಯ ಆಪಾದನೆಗಳನ್ನೆಲ್ಲಾ ಮುಸ್ಲಿಂ ಸಮುದಾಯದ ಮೇಲೆಯೆ ಹಾಕಿದೆ.

ಇಸ್ಲಾಮೀ ಭಯೋತ್ಪಾದನೆ ಅಥವಾ ಹಿಂದೂ ಭಯೋತ್ಪಾದನೆ ಎಂಬುದೇನೂ ಇಲ್ಲ. ನಿಜ, ಮುಸ್ಲಿಂ ಸಮುದಾಯದ ಕೆಲವು ಉಗ್ರಗಾಮಿಗಳು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಿರುವ ವಿದ್ಯಮಾನ ಖಂಡಿತ ಇದೆ. ಅದೇ ರೀತಿ ಹಿಂದೂ ಸಮುದಾಯದ ಕೆಲವು ಉಗ್ರಗಾಮಿಗಳು ಭಯೋತ್ಪಾದನೆ ಆಚರಣೆಗಿಳಿದಿರುವುದೂ ಇದೆ. ಯಾವ ಹಿಂದುವೂ ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿಲ್ಲ ಎನ್ನುವುದು ಯಾವ ಮುಸ್ಲಿಮನೂ ಭಯೋತ್ಪಾದಕ ಧಾಳಿಗಳಲ್ಲಿ ತನ್ನನ್ನು ತೊಡಗಿಸಿಕೊಂಡಿಲ್ಲ ಎಂಬಷ್ಟೆ ಬುಡವಿಲ್ಲದ ಹೇಳಿಕೆ. ಭಾರತದಲ್ಲಿ ಒಂದು ವಿಧದ ಭಯೋತ್ಪಾದನೆಗೂ ಕೋಮುವಾದದ ಮಾರಕ ಪರಿಣಾಮಗಳಿಗೂ ನೇರ ಸಂಬಂಧವಿದೆ. ಭಾರತದಲ್ಲಿ ಭಯೋತ್ಪಾದನೆಯ ರಾಜಕಾರಣದ

ಪುಟ 10ಕ್ಕೆ

ಭಯೋತ್ಪಾದನೆ ಸಮರ್ಥಿಸುತ್ತಿದೆ ಬಿಜೆಪಿ

ಪುಟ 9 ರಿಂದ

ಬೀಜಗಳನ್ನು ಬಿತ್ತುವಲ್ಲಿ ಕೋಮುವಾದದ ಒಂದು ನಿರ್ದಿಷ್ಟ ವಿಷಕಾರೀ ಸ್ವರೂಪವನ್ನು ಪ್ರತಿನಿಧಿಸುವ ಆರೆಸ್ಸೆಸ್, ಅಲ್ಪಸಂಖ್ಯಾತ ಸಮುದಾಯದ ಒಂದು ಉಗ್ರಗಾಮಿ ಸಂಘಟನೆಯಷ್ಟೇ ಹೊಣೆಯಾಗಿದೆ. ಭಾರತ ಜನಾಂಗೀಯ ಮತ್ತು ಪ್ರಾದೇಶಿಕ ಸಂಕುಚಿತತೆಯಿಂದಲೂ ಭಯೋತ್ಪಾದನೆಯನ್ನು ಕಂಡಿದೆ. ಈಶಾನ್ಯ ಭಾಗದಲ್ಲಿ ಉಲ್ಫಾ ಇಂತಹ ಒಂದು ಸಂಘಟನೆ. ಅದು ಅಸ್ಸಾಂನಲ್ಲಿ ಭಯೋತ್ಪಾದಕ ಸ್ಫೋಟಗಳನ್ನು ನಡೆಸಿದೆ.

ಸಂಘ ಪರಿವಾರದ ಪ್ರಚಾರಕ್ಕೆ ಮರಣಾಂತಿಕ ಏಟು

ಹಿಂದುತ್ವ ಸಿದ್ಧಾಂತದಿಂದ ಪ್ರೇರಿತವಾದ ಬಿಜೆಪಿ ಎಲ್ಲಾ ವಿಧಗಳ ಭಯೋತ್ಪಾದಕ ಹಿಂಸಾಚಾರಗಳನ್ನು "ಇಸ್ಲಾಮೀ ಭಯೋತ್ಪಾದನೆ" ಎಂಬ ನಾಮಧೇಯದ ಅಡಿಯಲ್ಲಿ ಪೇರಿಸಲು ಪ್ರಯತ್ನಿಸುತ್ತ ಬಂದಿದೆ. ಈಗ ಸಪ್ಟಂಬರ್ 2008ರ ಮಾಲೆಗಾಂವ್ ಸ್ಫೋಟಕ್ಕೂ ನಾಂದೇಡ್‌ನಲ್ಲಿ 2006ರಲ್ಲಿ ಬಾಂಬ್ ತಯಾರಿಸುವಾಗ ಸ್ಫೋಟದಲ್ಲಿ ಇಬ್ಬರು ಭಜರಂಗ ದಳದ ಮಂದಿ ಸತ್ತ ಘಟನೆಗೂ ಸಂಬಂಧವಿದೆಯೆಂದು ಸಾಕ್ಷಿ ದೊರೆತಿರುವಾಗ ಬಿಜೆಪಿ-ಆರೆಸ್ಸೆಸ್ ಕೂಟದ ಭಯೋತ್ಪಾದನಾ-ವಿರೋಧಿ ನಿಲುವು ಮರಣಾಂತಿಕ ಏಟು ತಿಂದಿದೆ. "ಅಭಿನವ ಭಾರತ" ಸಂಘಟನೆಯನ್ನು ರಚಿಸಿದವರ ಹಿಂದುತ್ವ ಪೂರ್ವಾಪರವನ್ನಾಗಲೀ, ಆರೆಸ್ಸೆಸ್ ಪ್ರಾಯೋಜಿತ ಭೋಂಸಾಲಾ ಮಿಲಿಟರಿ ಶಾಲೆ ವಹಿಸಿದ ಪಾತ್ರವನ್ನಾಗಲೀ ನಿರಾಕರಿಸುವುದು ಇನ್ನು ಮುಂದೆ ಸಾಧ್ಯವಿಲ್ಲ.

ಇಸ್ಲಾಮೀ ಭಯೋತ್ಪಾದನೆ ಎಂಬ ಒಂದು ಸಿದ್ಧ ಮಾದರಿಯನ್ನು ಸೃಷ್ಟಿಸುವಲ್ಲಿ ಪ್ರಭುತ್ವ ಯಂತ್ರ ಮತ್ತು ತನಿಖಾ ಏಜೆಂಸಿಗಳೂ ನೆರವಾಗಿವೆ. 2006ರ ನಾಂದೇಡ್ ಸ್ಫೋಟಗಳನ್ನು ಸರಿಯಾಗಿ ತನಿಖೆ ಮಾಡಿದ್ದರೆ, ಅದರ ಸಂಪರ್ಕಗಳನ್ನು ಬಯಲುಗೊಳಿಸಿದ್ದರೆ, ನಂತರದ ಕೆಲವು ಧಾಳಿಗಳನ್ನು ಹತ್ತಿಕ್ಕಬಹುದಾಗಿತ್ತು ಹಾಗೂ ಅನಗತ್ಯವಾಗಿ ಅಮಾಯಕ ಮುಸ್ಲಿಮರಿಗೆ (ಮಕ್ಕಾ ಮಸೀದಿ ಪ್ರಕರಣದಲ್ಲಿ ಮಾಡಿದಂತೆ) ಕಿರುಕುಳ ಕೊಡುವುದನ್ನು ತಪ್ಪಿಸಬಹುದಿತ್ತು. **ಬಿಜೆಪಿ ಮತ್ತು ಆರೆಸ್ಸೆಸ್ ಈಗ ತನಿಖೆಗೊಳಗಾಗುತ್ತಿರುವ ಹಿಂದುತ್ವ- ಸಂಪರ್ಕದ ವ್ಯಕ್ತಿಗಳ ವಲಯ ವಿಸ್ತರಿಸುತ್ತಿರುವುದನ್ನು ಕಂಡು ತನಿಖೆಗಳನ್ನೇ ನಿಲ್ಲಿಸುವಂತೆ ಒತ್ತಡ ಹೇರಲಾರಂಭಿಸಿದೆ.** ಇದನ್ನು ದೃಢವಾಗಿ ಧಿಕ್ಕರಿಸಬೇಕಾಗಿದೆ. ಇದರಿಂದಾಗಿಯೇ ಉಗ್ರಗಾಮಿ ಹಿಂದುತ್ವ ಜಾಲದ ಹಿಂದಿರುವ ಇಡೀ ಸತ್ಯವನ್ನು ದಕ್ಷ ತನಿಖೆಯ ಮೂಲಕ ಹೊರಗೆಳೆಯುವುದು, ತಪ್ಪಿತಸ್ಥರನ್ನೆಲ್ಲಾ ವಿಚಾರಣೆ ಗೊಳಪಡಿಸುವುದು ಇನ್ನಷ್ಟು ಮಹತ್ವದ್ದಾಗುತ್ತದೆ.

ಆರೆಸ್ಸೆಸ್ ಬಿಡದು:

ಬಿಜೆಪಿ ಈಗ ಆರೆಸ್ಸೆಸ್ ನಿಲುವನ್ನು ಸಾರಾಸಗಟಾಗಿ ಅಂಗೀಕರಿಸಿ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ಬುಡಮೇಲು ಮಾಡುತ್ತಿದೆ ಎಂಬ ಆರೋಪಕ್ಕೆ ಒಳಗಾಗುತ್ತಿದೆ. ತನ್ನ ಹಿಂದುತ್ವ ಗುರುಗಳನ್ನು ರಕ್ಷಿಸಲಿಕ್ಕಾಗಿಯೇ ಅದು ಭಯೋತ್ಪಾದನೆಯ ಬಗ್ಗೆ ಮೆದು ಧೋರಣೆ ತಳೆಯುತ್ತಿದೆ ಮತ್ತು ಭಯೋತ್ಪಾದನೆ ಯಾವ ಮೂಲದಿಂದ ನಡೆದರೂ ಅದನ್ನು ನಿಷ್ಪಕ್ಷಪಾತದಿಮದ ತನಿಖೆ ಮಾಡಬೇಕಾದ ಪ್ರಭುತ್ವದ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ ಎಂಬ ಆರೋಪ ಅದರ ಮೇಲೆ ಬರುವಂತಾಗಿದೆ.

ಒಂದು ವಿಚಾರವಂತ ರಾಜಕೀಯ ಪಕ್ಷ ಹಿಂದುತ್ವ ಬಳಗದೊಳಗಿನ ಕೆಲವು ತಲೆಹೋಕರು ಇಂತಹ ಭಯೋತ್ಪಾದಕ ಹಿಂಸಾಚಾರಕ್ಕೆ ಇಳಿದಿರ ಬಹುದು, ಅವರಿಗೂ ತಮಗೂ ಸಂಬಂಧವಿಲ್ಲ ಎಂಬ ನಿಲುವನ್ನು ತಳೆಯ ಬಹುದಿತ್ತು. ಆದರೆ ಬಿಜೆಪಿ ಹಾಗೆ ಮಾಡಲು ಆರೆಸ್ಸೆಸ್ ಬಿಡಲು ಸಾಧ್ಯವಿಲ್ಲ. ಅದು ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಹರಡಲು ಕಟಿಬದ್ಧವಾದ ಒಂದು ಸಂಘಟನೆಯಷ್ಟೇ ಅಲ್ಲ, ಬಾಂಬ್ ಪಂಥದಲ್ಲಿ ನಂಬಿಕೆಯಿರುವ ಸಂಘಟನೆ ಕೂಡಾ. ಕೆಲವೇ ದಿನಗಳ ಹಿಂದೆ ಕೇರಳದಲ್ಲಿ ಕಣ್ಣೂರು ಜಿಲ್ಲೆಯಲ್ಲಿ ಆರೆಸ್ಸೆಸ್ ಅಡಗುತಾಣಗಳಿಂದ 125 ಬಾಂಬುಗಳನ್ನು ಪೋಲೀಸರು ಪತ್ತೆ ಹಚ್ಚಿದ್ದಾರೆ. ಕಂಧಮಲ್‌ನಂತಹ ಕಡೆಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ಭಜರಂಗ ದಳ ನಡೆಸಿರುವ ಹಿಂಸಾಕಾಂಡಗಳನ್ನು ಬಹಿರಂಗವಾಗಿಯೇ ಸಮರ್ಥಿಸಿ ಕೊಳ್ಳಲಾಗುತ್ತಿದೆ. ಆರೆಸ್ಸೆಸ್-ವಿಹೆಚ್‌ಪಿ ವೇದಿಕೆಗಳಲ್ಲಿ ಬಿಜೆಪಿ ಮುಖ್ಯ ಮಂತ್ರಿಗಳೆದುರೇ ಮುಸ್ಲಿಂ ಭಯೋತ್ಪಾದನೆಯ ವಿರುದ್ಧ ಪ್ರತೀಕಾರ ಧಾಳಿಗಳನ್ನು ಸಮರ್ಥಿಸಿಕೊಳ್ಳುವ ಭಾಷಣಗಳನ್ನು ಮಾಡಲಾಗುತ್ತದೆ.

ಬಿಜೆಪಿ ಈಗ ಆರೆಸ್ಸೆಸ್ ನಿಲುವನ್ನು ಸಾರಾಸಗಟಾಗಿ ಅಂಗೀಕರಿಸಿ ಭಯೋತ್ಪಾದನೆಯ ವಿರುದ್ಧ ಹೋರಾಟವನ್ನು ಬುಡಮೇಲು ಮಾಡುತ್ತಿದೆ ಎಂಬ ಆರೋಪಕ್ಕೆ ಒಳಗಾಗುತ್ತಿದೆ. ತನ್ನ ಹಿಂದುತ್ವ ಗುರುಗಳನ್ನು ರಕ್ಷಿಸಲಿಕ್ಕಾಗಿಯೇ ಅದು ಭಯೋತ್ಪಾದನೆಯ ಬಗ್ಗೆ ಮೆದು ಧೋರಣೆ ತಳೆಯುತ್ತಿದೆ ಮತ್ತು ಭಯೋತ್ಪಾದನೆ ಯಾವ ಮೂಲದಿಂದ ನಡೆದರೂ ಅದನ್ನು ನಿಷ್ಪಕ್ಷಪಾತದಿಂದ ತನಿಖೆ ಮಾಡಬೇಕಾದ ಪ್ರಭುತ್ವದ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ ಎಂಬ ಆರೋಪ ಅದರ ಮೇಲೆ ಬರುವಂತಾಗಿದೆ.

......ನಲುಗಿದ ಬಳ್ಳಾರಿ

ಪುಟ 9 ರಿಂದ

ಬೀದಿ ಪಾಲಾಗಿದ್ದಾರೆ.

ಜಿಲ್ಲೆಯ ಪ್ರತಿಷ್ಠಿತ ಕೈಗಾರಿಕೆ, ಭಾರಿ ಲಾಭದಾಯಕವಾಗಿ ನಡೆಯುತ್ತಿದ್ದ ಭಾರಿ ಉದ್ಯಮ ಜಿಂದಾಲ್ ಕಂಪನಿ ಬೆಲೆ ಕುಸಿತದಿಂದ ಹಿನ್ನಡೆ ಅನುಭವಿಸಿದೆ. ಸುಮಾರು 25 ಸಾವಿರದಷ್ಟು ಗುತ್ತಿಗೆ ಕಾರ್ಮಿಕರು ಹೊರ ನಡೆದಿದ್ದಾರೆ. ಇವರನ್ನು ಒದಗಿಸುತ್ತಿದ್ದ ಸುಮಾರು 200 ಕ್ಕೂ ಹೆಚ್ಚು ಸಣ್ಣ ಗುತ್ತಿಗೆದಾರರು ಹೊರದೂಡಲ್ಪಟ್ಟಿದ್ದಾರೆ.

ಬೆಟ್ಟಗಳಲ್ಲಿ ಗಣಿಗಾರಿಕೆಯಲ್ಲಿ ತೊಡಗಿದ್ದ ಅಧಿಕೃತ ಕಂಪನಿಗಳು ತಾತ್ಕಾಲಿಕವಾಗಿ ಈಗ ಪೂರ್ಣ ಪ್ರಮಾಣದಲ್ಲಿ ಉತ್ಪಾದನೆಯನ್ನು ಸ್ಥಗಿತಗೊಳಿಸಿವೆ. ಇಲ್ಲಿಯೂ ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಇನ್ನೂ ಅದಿರನ್ನು ಸಾಗಿಸುವ ಟ್ರಾನ್ಸ್‌ಪೋರ್ಟ್ ವ್ಯವಹಾರವು ಉಳಿದೀತೇ/ ತಲಾ ಲಾರಿಗೆ 4 ಜನ ಸಿಬ್ಬಂದಿ ಎಂದರೂ 50-80 ಸಾವಿರ ಡ್ರೈವರ್, ಕ್ಲೀನರ್‌ಗಳು! ಅದೇ ರೀತಿ ರಿಪೇರಿ ಕೆಲಸಗಳಲ್ಲಿ ತೊಡಗಿದವರು ಬರಿಗೈಯಾಗಿದ್ದಾರೆ!....

ಈ ಎಲ್ಲದರಿಂದಾಗಿ, ಬಳ್ಳಾರಿ, ಹೊಸಪೇಟೆ, ಸಂಡೂರು ನಗರ; ಪಟ್ಟಣಗಳಲ್ಲದೇ ರಾಷ್ಟ್ರೀಯ ಹೆದ್ದಾರಿ 63 ಇಕ್ಕೆಲಗಳಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ಬೆಳೆದಿದ್ದ ಬಾಡಿಗೆ ಮನೆಗಳ ಉದ್ಯಮವು ಹಾಗೂ ರಿಯಲ್ ಎಸ್ಟೇಟ್ ವ್ಯಾಪಾರವು ಮತ್ತು ವ್ಯಾಪಾರಿ, ವಹಿವಾಟಿನ ಅಪ್ರತ್ಯಕ್ಷ ಸಾಮಾನ್ಯ ಉದ್ಯೋಗವು ಅದೆಷ್ಟು? ಅನೇಕಾನೇಕ! ಇದೂ ಬಿಕ್ಕಟ್ಟಿಗೆ ಸಿಲುಕಿದೆ. ರಿಯಲ್ ಎಸ್ಟೇಟ್ ವ್ಯವಹಾರವು ಬಳ್ಳಾರಿ-ಹೊಸಪೇಟೆಯ ನಡುವೆ ಬರುವ ತಲಾ ಎಕರೆಯನ್ನು ಕನಿಷ್ಠ 15 ಲಕ್ಷದಿಂದ 1 ಕೋಟಿ ರೂ.ಗಳವರೆಗೆ ಬೆಳೆಸಿಬಿಟ್ಟಿತು. ಪ್ರತಿ ಸಾಮಾನ್ಯ ನಿವೇಶನದ ಬೆಲೆಯು ಇಲ್ಲಿ 5 ರಿಂದ 10 ಲಕ್ಷಕ್ಕೇರಿಸಿತ್ತು. ಬಿಕ್ಕಟ್ಟಿನ ಪರಿಣಾಮವಾಗಿ ಬೆಲೆಯು ಶೇ.50 ರಿಂದ 60 ರಷ್ಟು ತಾತ್ಕಾಲಿಕವಾಗಿ ಕುಸಿದಿದೆ. ಗಣಿಗಾರಿಕೆ ಹಾಗೂ ರಿಯಲ್ ಎಸ್ಟೇಟ್ ಬೆಳವಣಿಗೆಯಿಂದ ಬೆರಗಾಗಿ ಲಾಭ ಮಾಡಲು ಹೊರಟ ಸಾವಿರಾರು ರೈತ ಯುವಕರು ಲಕ್ಷಾಂತರ ಹಣ ಸುರಿದು ನಷ್ಟ ಅನುಭವಿಸುತ್ತಿದ್ದಾರೆ. ಗಣನೀಯ ವಾಗಿ ಬೆಳೆದಿದ್ದ ಬಾಡಿಗೆ ಮನೆಗಳ ವ್ಯವಹಾರದಲ್ಲಿ ಅನೇಕ ರೈತರು ಸಣ್ಣ ವ್ಯಾಪಾರಿಗಳು ಇದರಲ್ಲಿ ತೊಡಗಿಸಿಕೊಂಡಿದ್ದರು. ಉದ್ಯೋಗ ಕಳೆದು ಕೊಂಡವರು ಮನೆ ಬಿಟ್ಟು ಹೊರಡುವಾಗ, ಇವರು ಹೂಡಿದ ಬಂಡವಾಳಕ್ಕೆ ತೊಂದರೆ ಬಂದಿದೆ. ಈಗ ಖಾಲಿಯಾಗಿರುವ ಮನೆಗಳು, ಈ ಮುಂಚೆ ಪ್ರತಿ ಮನೆ ಬಾಡಿಗೆ ಪಡೆದದ್ದು ಕನಿಷ್ಠ 2000 ರೂ. ಆಗಿತ್ತು.

ಕೈ ಕೊಟ್ಟ ಹೂ ರಫ್ತು

ಸರ್ಕಾರದ ಹಲವು ಕೋಟಿ ಸಹಾಯಧನದ ಆಧಾರದಲ್ಲಿ ಬೆಳೆದಿದ್ದ, ವಿದೇಶಗಳಿಗಾಗಿಯೇ ಹೂ ರಫ್ತು ಉದ್ಯಮ ನಷ್ಟಕ್ಕೀಡಾಗಿದೆ. ಅನಿಲ್ ಲಾಡ್‌ರವರ ನೂರಾರು ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ರೀತಿಯಲ್ಲಿ ಬೆಳೆಯುತ್ತಿದ್ದ ಹೂ ಬೆಳೆಯಲ್ಲಿ ತೊಡಗಿಕೊಂಡ ಕುಟುಂಬಗಳು ಸಾವಿರಾರು. ಕಡಿಮೆಯೇನಲ್ಲಾ... ಈಗ ಬಿಕ್ಕಟ್ಟಿನಿಂದಾಗಿ ವಿದೇಶಿ ಮಾರುಕಟ್ಟೆಯಿಂದ ಹೂ ವಾಪಸಾಗುತ್ತಿವೆ. ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆಲ್ಲಿ ಮಲ್ಲಿಗೆ ಹೂ?! ಈ ಕೂಲಿ ಕುಟುಂಬಗಳು ಮನೆಗೆ!

ಜೀನ್ಸ್ ಉದ್ಯಮ ಆತಂಕದಲ್ಲಿ

ಏಷಿಯಾ ದೇಶಗಳಲ್ಲಿ, ಯುರೋಪ್ ರಾಷ್ಟ್ರಗಳಲ್ಲಿ ಸಾಕಷ್ಟು ಸ್ಥಾನ ಪಡೆದಿರುವ ಹತ್ತು ಸಾವಿರದಷ್ಟು ಕಾರ್ಮಿಕರು ತೊಡಗಿಸಿಕೊಂಡಿರುವ ಜೀನ್ಸ್ ಉದ್ಯಮವು ಹಿನ್ನಡೆ ಅನುಭವಿಸುತ್ತಿದೆ. ಆ ದೇಶಗಳ ಬಿಕ್ಕಟ್ಟು ಇವರ ಮೇಲೆ ತನ್ನ ಕರಿನೆರಳು ಚಾಚುವ ಅಪಾಯವನ್ನು ಹೊಂದಿದೆ. ಅದೇ ರೀತಿ ಪ್ರವಾಸೋದ್ಯಮವು ಬಿಕ್ಕಟ್ಟಿಗೆ ಸಿಲುಕುತ್ತಿದೆ. ಜಿಲ್ಲೆಯ ಪ್ರಮುಖ ಆಕರ್ಷಣೆಯ ಕೇಂದ್ರ ಹಂಪಿಗೆ ಬರಬೇಕಾದ ವಿದೇಶಿ ಪ್ರವಾಸಿಗರಿಗೆ ಹಾಗೂ ಗಣಿ ವ್ಯವಹಾರಿಗಳೂ ರಿಯಲ್ ಎಸ್ಟೇಟ್ ಹಾಗೂ ಸಣ್ಣ-ಪುಟ್ಟ ಕೈಗಾರಿಕೋದ್ಯಮಿ ಗಳಿಗೆಂದೇ ನಿರ್ಮಿಸಲಾಗಿರುವ ಭಾರಿ ಲಾಡ್ಜ್‌ಗಳು ಬಿಕೋ ಎನ್ನುತ್ತಿವೆ. ಜಾಗತಿಕ ಬಿಕ್ಕಟ್ಟಿನಿಂದ ಪ್ರವಾಸಿಗರಿಲ್ಲ. ಉದ್ಯಮಿಗಳಿಲ್ಲ ಸಾವಿರಾರು ಕೆಲಸಗಾರರು ಬೀದಿಪಾಲಾಗುವ ಪರಿಸ್ಥಿತಿ ಬಂದಿದೆ.

ಸಾಲ ನೀಡದ ಹಣಕಾಸು ಸಂಸ್ಥೆಗಳು:

ಟ್ರಾನ್ಸ್‌ಪೋರ್ಟ್ ವ್ಯವಹಾರಕ್ಕಾಗಿ ಬ್ಯಾಂಕುಗಳು, ಫೈನಾನ್ಸ್ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ಬಂಡವಾಳ ತೊಡಗಿಸಿವೆ. ಹಲವು ಲಕ್ಷ ಹಾಗೂ ಕೋಟಿ ಬೆಲೆ ಬಾಳಿ ಮೆಷೀನುಗಳಿಗೆ ಬೊಲೆರೋ ಕಾರ್‌ಗಳಿಗೆ, ಲಾರಿಗಳಿಗೆ ಹೂಡಿದ ಭಾರೀ ಬಂಡವಾಳ ವಾಪಸ್ಸು ಬರುತ್ತದೆಯೇ. ಅದೇ ರೀತಿ ಬಿಲ್ಡಿಂಗ್‌ಗಳಿಗೆ, ಕಟ್ಟಡಗಳಿಗೆ, ಸಣ್ಣ ಕೈಗಾರಿಕೆಗಳಿಗೆ, ಹೋಟೆಲ್ ಉದ್ಯಮಕ್ಕೆ ತೊಡಗಿಸಿದ ಬಂಡವಾಳದ ವಾಪಸಾತಿಯ ಪರಿಸ್ಥಿತಿ ಏನು? ಎಲ್ಲಾ ವಾಹನ ಗಳು ಹಣಕಾಸು ಸಂಸ್ಥೆಗಳ ಮುಂದೆ ನಿಂತರೆ ಸಂಸ್ಥೆಗಳು ಹೇಗೆ ಉಳಿದಾವು ಈ ಪ್ರಶ್ನೆಗಳು ಗಂಭೀರವಾಗಿವೆ.

ಸರ್ಕಾರದ ಪ್ರತಿಕ್ರಿಯೆ?!

ಲವಲವಿಕೆಯಲ್ಲಿದ್ದ ಜಿಲ್ಲೆಯೀಗ ಅಸಹನೀಯ ಮೌನ ಆಧರಿಸಿ ಕೊಂಡು ಬಿಟ್ಟಿದೆ. ಭಾರಿ ದೊಡ್ಡ ಪ್ರಮಾಣದ ಆತಂತ್ರದ ಬದುಕು ಉಂಟಾಗಿದೆ. ಗಂಭೀರವಾಗಿ ದುಡಿಯುವಾಗ, ದುಡಿಯುವ/ ಧೈರ್ಯಮಾಡಿದ ಸಾಲವನ್ನು ಪಡೆಯುವುದು, ತೀರಿಸುವುದು ಹೇಗೆ? ದುಡಿಮೆಯ ಬೆಳವಣಿಗೆಯಿಂದ ಬದಲಾಯಿಸಿಕೊಂಡ ಬದುಕನ್ನು ಕಾಪಾಡುವುದು ಹೇಗೆ?! ಈಗಾಗಲೇ ಮೊದಲ ಬಲಿಯಾಗಿ ಸಂಡೂರಿನ ಡ್ರೈವರ್‌ನೊಬ್ಬ ಆತ್ಮಹತ್ಯೆ ಮಾಡಿಕೊಂಡ ವಿಷಾದಕರ ಘಟನೆ ಬಯಲಿಗೆ ಬಂದಿದೆ. ಈ ಹಾದಿಯಲ್ಲಿ ಇನ್ನೆಷ್ಟು ಜನರೋ! ಇವರ ರಾಜ್ಯ ಸರ್ಕಾರವಾಗಲೀ, ಜಿಲ್ಲೆಯ ಮೂವರು ಮಂತ್ರಿಗಳಾಗಲೀ ಇಷ್ಟೊಂದು ಗಂಭೀರ ಪರಿಣಾಮ ಬೀರಿದ ಬಿಕ್ಕಟ್ಟು ನಮಗೇನು ಸಂಬಂಧವಿಲ್ಲವೆನ್ನುವ ಹಾಗೆ ದಿನನಿತ್ಯದ ಪ್ರಚಾರದ ಭರಾಟೆಯಲ್ಲಿದ್ದಾರೆ! ಹಾಗೆಯೇ ಕಾರ್ಮಿಕ ಸಚಿವ ಬಚ್ಚೇಗೌಡ ದೇವೇಗೌಡರ ಬಗ್ಗೆ ಬಾಯಿಗೆ ಬಂದಂತೆ ಆಡುತ್ತಾ ತಿರುಗುತ್ತಿದ್ದಾರೆ, ಕಾರ್ಮಿಕರನ್ನು ಕಣ್ಣೆತ್ತಿಯೂ ನೋಡುತ್ತಿಲ್ಲ.

ಜಿಲ್ಲೆಯ ಶಾಸಕರು, ಮಂತ್ರಿಗಳು, ಸರ್ಕಾರ ಇತ್ತಕಡೆ ಗಮನ ಹರಿಸಬೇಕಿದೆ. ಒಟ್ಟು ಪರಿಸ್ಥಿತಿಯನ್ನು ಗಂಭೀರವಾಗಿ ಅಭ್ಯಸಿಸಿ ಕಾರ್ಮಿಕ ಕುಟುಂಬಗಳಿಗೆ ಆದ್ಯತೆಯ ಮೇರೆಗೆ ಹಾಗೂ ತೊಂದರೆಗೊಳಗಾದ ಇತರೇ ಸಂಸ್ಥೆಗಳಿಗೆ ಪ್ಯಾಕೇಜ್‌ನ ಸಹಾಯಹಸ್ತವನ್ನು ಚಾಚಬೇಕಾಗಿದೆ. ರಾಜ್ಯ ಮತ್ತು ಕೇಂದ್ರಗಳು ಈ ಬಗ್ಗೆ ಸೂಕ್ತ ಕ್ರಮವಹಿಸಬೇಕು. ಇದೀಗ ಜಿಲ್ಲೆಯ ಎಲ್ಲೆಲ್ಲೂ ಬಿಕ್ಕಟ್ಟು ಹಾಗೂ ಉದ್ಯೋಗ ಕಳೆದುಕೊಂಡ ವಿಚಾರವೇ ಚರ್ಚೆಯಾಗುವಾಗ ಜವಾಬ್ದಾರಿಯುತ ರಾಜಕೀಯ ಪಕ್ಷಗಳು, ಈ ಕುರಿತು ಒತ್ತಾಯ ಮಾಡಬೇಕಾಗಿದೆ.

ವಿಮಾ ಉದ್ದಿಮೆ: ಹಾನಿಕಾರಕ ವಿದೇಶಿ ಬಂಡವಾಳ

LIC
ಭಾರತೀಯ ಜೀವನ ಬೀಮಾ ನಿಗಮ
LIFE INSURANCE CORPORATION OF INDIA

ಅತ್ಯಂತ ದಕ್ಷತೆಯಿಂದ ಕೆಲಸ ಮಾಡುತ್ತಾ, ಅತ್ಯಂತ ಲಾಭದಾಯಕವಾಗಿರುವ ದೇಶದ ಹೆಮ್ಮೆಯ ಸಾರ್ವಜನಿಕ ವಿಮಾ ಕಂಪನಿಗಳೇ ಪ್ರಧಾನವಾಗಿರುವ ವಿಮಾ ರಂಗದಲ್ಲಿ ವಿದೇಶಿ ನೇರ ಬಂಡವಾಳ ಹೆಚ್ಚಳಕ್ಕೆ ಅವಕಾಶ ನೀಡುವ ಸರ್ಕಾರದ ಯತ್ನ ಏನನ್ನು ಹೇಳುತ್ತದೆ.

ಅಮಾನುಲ್ಲಾ ಖಾನ್

ವಿಮಾ ಉದ್ದಿಮೆಯಲ್ಲಿ ವಿದೇಶಿ ನೇರ ಬಂಡವಾಳವನ್ನು ಶೇ.26 ರಿಂದ ಶೇ.49ಕ್ಕೆ ಹೆಚ್ಚಿಸುವ ಕೇಂದ್ರ ಮಂತ್ರಿ ಮಂಡಳಿಯ ನಿರ್ಧಾರ ಆಶ್ಚರ್ಯಕರವೂ, ಆಘಾತಕರವೂ ಆಗಿದೆ. ಪ್ರಪಂಚದಾದ್ಯಂತ ಹಲವು ಸರ್ಕಾರಗಳು ಜಾಗತಿಕ ಆರ್ಥಿಕ ಮುಗ್ಗಟ್ಟಿನ ಪರಿಣಾಮಗಳನ್ನು ತಪ್ಪಿಸಿಕೊಳ್ಳಲು ಕ್ರಮ ತೆಗೆದುಕೊಳ್ಳುತ್ತಿರುವಾಗ ನಮ್ಮ ಸರ್ಕಾರ ಆರ್ಥಿಕ ರಂಗದ ಇನ್ನಷ್ಟು ಉದಾರೀಕರಣಕ್ಕೆ ಸಜ್ಜಾಗುತ್ತಿರುವುದು ಎಲ್ಲ ತರ್ಕಗಳನ್ನೂ ಹುಸಿಗೊಳಿಸುತ್ತದೆ. ನವ ಉದಾರೀಕರಣ ನೀತಿಗಳಿಗೆ ಉಂಟಾಗಿರುವ ಸೋಲು ಯುಪಿಎ ಸರ್ಕಾರದ ವಿಶ್ವಾಸವನ್ನು ಕುಂದಿಸಿರುವಂತಿದೆ. ವಿದೇಶಿ ನೇರ ಬಂಡವಾಳ ಹೆಚ್ಚಳದ ಈ ಕ್ರಮದ ಮೂಲಕ ಅದು ಅಂತರರಾಷ್ಟ್ರೀಯ ಬಂಡವಾಳಕ್ಕೆ ತಾನು ಉದಾರೀಕರಣ ನೀತಿಗಳಿಗೆ ಬದ್ಧವಾಗಿದ್ದೇನೆಂದು ಪ್ರತಿಪಾದಿಸ ಹೊರಟಿದೆ. ಸರ್ಕಾರದ ಈ ಕ್ರಮವೇನಾದರೂ ಯಶಸ್ವಿಯಾದರೆ ಅದು ದೇಶದ ಅಭಿವೃದ್ಧಿಗೆ ದೀರ್ಘಾವಧಿಯ ಸಂಪನ್ಮೂಲ ಕ್ರೋಢೀಕರಿಸುವ ಬಹುಮುಖ್ಯ ಉದ್ದಿಮೆಯ ಬೆಳವಣಿಗೆಗೆ ಅಡ್ಡಿಮಾಡುತ್ತದೆ ಮತ್ತು ದೀರ್ಘಾಂತರದಲ್ಲಿ ದೇಶದ ಆರ್ಥಿಕತೆಗೆ ಹಾನಿಕರವಾಗುತ್ತದೆ.

ನಿಜವಾದ ಉದ್ದೇಶವೇನು?

ವಿಮಾ ವಲಯದಲ್ಲಿ ಎರಡನೇ ಪೀಳಿಗೆಯ ಸುಧಾರಣೆ ಸಾಧ್ಯವಾಗುವಂತೆ ಮುಂಬರುವ ಲೋಕಸಭಾ ಅಧಿವೇಶನದಲ್ಲಿ ಎರಡು ಪ್ರತ್ಯೇಕ ಮಸೂದೆಗಳನ್ನು ಮಂಡಿಸುವುದಾಗಿ ವಿತ್ತ ಸಚಿವರು ತಿಳಿಸಿದ್ದಾರೆ. ಒಂದು ಮಸೂದೆ ವಿಮಾ ನಿಯಂತ್ರಣ ಮತ್ತು ಪ್ರಾಧಿಕಾರ ಮಸೂದೆಗೆ ತಿದ್ದುಪಡಿ ತಂದರೆ ಇನ್ನೊಂದು ಸಾಮಾನ್ಯ ವಿಮಾ ವ್ಯವಹಾರ ರಾಷ್ಟ್ರೀಕರಣ ಮಸೂದೆಯಲ್ಲಿ ತಿದ್ದುಪಡಿ ತರಲಿದೆ. ಈ ಮಸೂದೆಯನ್ನು ರಾಜ್ಯ ಸಭೆಯಲ್ಲಿ ಮಂಡಿಸಲಾಗುವುದು. ಭಾರತೀಯ ಜೀವ ವಿಮಾ ಕಾಯ್ದೆ 1956ರಲ್ಲಿ ತಿದ್ದುಪಡಿ ತರುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗುವುದು. ಈ ತಿದ್ದುಪಡಿಯು ಎಲ್‌ಐಸಿಯ ಬಂಡವಾಳವನ್ನು 5 ಕೋಟಿ ರೂ.ಗಳಿಂದ 100 ಕೋಟಿ ರೂ.ಗಳಿಗೆ ಏರಿಸುವ ಗುರಿ ಹೊಂದಿದೆ. ವಿಮಾ ಮಸೂದೆಗಳಲ್ಲಿರುವ ಹಲವು ಹಳೆಯ ಕಟ್ಟುಪಾಡುಗಳನ್ನು ನಿರ್ಮೂಲ ಮಾಡಲು ಮತ್ತು ಪ್ರಸಕ್ತ ಸಮಯಕ್ಕೆ ಅನುಸಾರವಾಗಿ ಮಸೂದೆಗಳನ್ನು ಮಾರ್ಪಾಡು ಮಾಡಲು ಈ ತಿದ್ದುಪಡಿಗಳು ಅನಿವಾರ್ಯವೆಂದು ಅರ್ಥ ಸಚಿವರು ಹೇಳುತ್ತಿದ್ದಾರೆ. ಆದರೆ ಸರ್ಕಾರ ತಿದ್ದುಪಡಿ ಮಾಡಹೊರಟಿರುವ ಈ ಕಟ್ಟುಪಾಡುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸರ್ಕಾರದ ಉದ್ದೇಶ ಮತ್ತು ಕ್ರಿಯೆಗಳ ಕುರಿತು ಅನುಮಾನವುಂಟಾಗುತ್ತದೆ.



ಸರ್ಕಾರದ ನಿಜವಾದ ಉದ್ದೇಶ ಸಾರ್ವಜನಿಕ ವಲಯದ ವಿಮಾ ಉದ್ದಿಮೆಯ ಖಾಸಗೀಕರಣ ಮತ್ತು ತನ್ಮೂಲಕ ವಿದೇಶಿ ಕಂಪನಿಗಳಿಗೆ ದೇಶದ ಜನತೆಯ ಉಳಿತಾಯದ ಮೇಲೆ ನಿಯಂತ್ರಣ ಸಾಧಿಸಿ ತಮ್ಮ ವ್ಯವಹಾರ ವಿಸ್ತರಣೆಗೆ ಅವಕಾಶ ನೀಡುವುದಾಗಿದೆ.

ಖಾಸಗಿ, ವಿದೇಶಿ ಕಂಪನಿಗಳಿಗೆ ತೆರೆದಿಡುವುದು

1999ರಲ್ಲಿ ವಿಮಾ ಪ್ರಾಧಿಕಾರ ಮತ್ತು ಅಭಿವೃದ್ಧಿ ಮಸೂದೆ ಸ್ವೀಕೃತವಾದ ನಂತರ ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆಯಲಾಯ್ತು. ಮಲ್ಹೋತ್ರ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಈ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆದಿಡಲಾಯ್ತು. ಈ ಸಮಿತಿಯು ದಾಖಲೆಯ ಅವಧಿಯಲ್ಲಿ ತನ್ನ ಕಾರ್ಯ ಪೂರೈಸಿ 1994 ರಲ್ಲಿ ಅಂದಿನ ವಿತ್ತ ಸಚಿವರಾಗಿದ್ದ ಮನಮೋಹನ್‌ಸಿಂಗ್ ರಿಗೆ ತನ್ನ ವರದಿ ಸಲ್ಲಿಸಿತು. ಈ ವರದಿ ಭಾರತೀಯ ಮತ್ತು ಅಂತರರಾಷ್ಟ್ರೀಯ ಖಾಸಗಿ ಬಂಡವಾಳದಾರರ ಹಿತಾಸಕ್ತಿಗೆ ಅನುಗುಣವಾಗಿ ಸಿದ್ದಪಡಿಸಲ್ಪಟ್ಟಿತ್ತು. ಈ ಸಮಿತಿಯ ಮುಖ್ಯ ಶಿಫಾರಸ್ಸುಗಳೆಂದರೆ ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆದಿಡುವುದು, ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳು ದೇಶೀಯ ಕಂಪನಿಗಳ ಪಾಲುದಾರಿಕೆಯೊಂದಿಗೆ ವಿಮಾ ವ್ಯವಹಾರ ನಡೆಸಲು ಅವಕಾಶ ನೀಡುವುದು ಮತ್ತು ಎಲ್‌ಐಸಿಯ ಮತ್ತು ನಾಲ್ಕು ಸಾಮಾನ್ಯ ವಿಮಾ ಕಂಪನಿಗಳ ಬಂಡವಾಳವನ್ನು ನೂರು ಕೋಟಿಗೆ ಏರಿಸುವುದು ಮತ್ತು ಇದರ ಶೇ.50ರಷ್ಟನ್ನು ಖಾಸಗಿ ಹೂಡಿಕೆಗೆ (disinvest) ಅವಕಾಶ ನೀಡುವುದು.

ವಿಮಾ ರಂಗದ ನಾಯಕ

ಈ ಎಲ್ಲಾ ಶಿಫಾರಸ್ಸುಗಳನ್ನು ಬಹುತೇಕ ಜನತೆ ಕಟುವಾಗಿ ಟೀಕಿಸಿತಲ್ಲದೆ ತೀವ್ರವಾಗಿ ವಿರೋಧಿಸಿತು. ಅಖಿಲ ಭಾರತ ವಿಮಾ ನೌಕರರ ಸಂಘದ ಮುಂದಾಳತ್ವದಲ್ಲಿ 1.54 ಕೋಟಿ ಜನತೆ ವಿಮಾ ಖಾಸಗೀಕರಣದ ವಿರುದ್ಧ ಲೋಕಸಭೆಗೆ ಮನವಿ ಸಲ್ಲಿಸಿತು. ಈ ಬೃಹತ್ ಜನಾಭಿಪ್ರಾಯಕ್ಕೆ ಮನ್ನಣೆ ನೀಡದ ಅಂದಿನ ಎನ್‌ಡಿಎ ಸರ್ಕಾರ ವಿಮಾ ಖಾಸಗೀಕರಣ ಮಸೂದೆಯನ್ನು ಅಂಗೀಕರಿಸಿತು. ಆದರೆ ಬೃಹತ್ ಜನಾಭಿಪ್ರಾಯದಿಂದಾಗಿ ಸರ್ಕಾರ ವಿದೇಶಿ ನೇರ ಬಂಡವಾಳದ ಮೇಲೆ ಶೇ.26ರ ಮಿತಿಯನ್ನು ಹೇರಬೇಕಾಯ್ತು ಮತ್ತು ಎಲ್‌ಐಸಿ ಹಾಗೂ ಜಿಐಸಿಯ ಬಂಡವಾಳದ ಸ್ವರೂಪದಲ್ಲಿ ಯಾವುದೇ ಬದಲಾವಣೆ ತರಲು ಸಾಧ್ಯವಾಗಲಿಲ್ಲ. ಇದಲ್ಲದೆ ಮಲ್ಹೋತ್ರ ಸಮಿತಿಯ ಶಿಫಾರಸ್ಸಿಗೆ ವಿರುದ್ಧವಾಗಿ ರಾಷ್ಟ್ರೀಕೃತ ಎಲ್‌ಐಸಿ ಮತ್ತು ಜಿಐಸಿಯನ್ನು ಸಾರ್ವಜನಿಕ ವಲಯದಲ್ಲೇ ಉಳಿಸಿಕೊಳ್ಳುವೆನೆಂದು ಭರವಸೆ ನೀಡಬೇಕಾಯ್ತು. ಕಳೆದ 8 ವರ್ಷಗಳಲ್ಲಿ ಹಲವಾರು ಖಾಸಗಿ ವಿಮಾ ಸಂಸ್ಥೆಗಳು ವಿಮಾ ಉದ್ದಿಮೆಯನ್ನು ಪ್ರವೇಶಿಸಿವೆ.

ಕೆಲವು ಸಂಸ್ಥೆಗಳ ವಿನಃ ಹಲವು ಸಂಸ್ಥೆಗಳು ದೊಡ್ಡ ಜಾಗತಿಕ ವಿಮಾ ಸಂಸ್ಥೆಗಳ ಪಾಲುದಾರರಾಗಿ ವ್ಯವಹಾರ ನಡೆಸುತ್ತಿವೆ. ಹಾಗಿದ್ದಾಗ್ಯೂ ಸಾರ್ವಜನಿಕ ವಿಮಾರಂಗದ ಪ್ರಾಬಲ್ಯಮುರಿಯುವುದು ಸಾಧ್ಯವಾಗಿಲ್ಲ. ಹೊಸ ಪ್ರೀಮಿಯಂ ಸಂಗ್ರಹದಲ್ಲಿ ಶೇ.65 ಮತ್ತು ಒಟ್ಟು ಪ್ರೀಮಿಯಂ ಸಂಗ್ರಹದಲ್ಲಿ ಶೇ.65 ಮಾರುಕಟ್ಟೆ ಪಾಲನ್ನು ಹೊಂದಿರುವ ಎಲ್‌ಐಸಿ ದೇಶದ ವಿಮಾ ವಲಯದ ನಾಯಕನಾಗಿದೆ. ಸಾರ್ವಜನಿಕ ವಲಯದ ನಾಲ್ಕೂ ಸಾಮಾನ್ಯ ವಿಮಾ ಸಂಸ್ಥೆಗಳೂ ವ್ಯವಹಾರದಲ್ಲಿ ತಮ್ಮ ಹಿರಿತನವನ್ನು ಕಾಯ್ದಿರಿಸಿಕೊಂಡಿವೆ.

ವಿದೇಶಿ ನೇರಬಂಡವಾಳದ ಮೇಲಿನ ನಿರ್ಬಂಧದಿಂದಾಗಿ ವಿದೇಶಿ ವಿಮಾ ಸಂಸ್ಥೆಗಳು ಅಸಂತುಷ್ಟವಾಗಿದ್ದವು. ಈ ನಿರ್ಬಂಧವನ್ನು ತೆಗೆದು ತಮ್ಮ ವ್ಯವಹಾರ ನಡೆಸುವ ಸಂಪೂರ್ಣ ವ್ಯವಹಾರ ನಡೆಸಲು ಸ್ವಾತಂತ್ರ್ಯ ನೀಡಬೇಕೆಂದು ಅವುಗಳು ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಬಂದಿವೆ. 2004ರಲ್ಲಿ ಬಜೆಟ್‌ಮಂಡಿಸಿದಾಗ ವಿತ್ತ ಸಚಿವರು ವಿಮಾ ಉದ್ದಿಮೆಯಲ್ಲಿ ವಿದೇಶಿ ನೇರ ಬಂಡವಾಳದ ಮಿತಿಯನ್ನು ಶೇ.49ಕ್ಕೇರಿಸುವ ಪ್ರಸ್ತಾಪ ಮಾಡಿದ್ದರು. ಆದರೆ ಎಡಪಕ್ಷಗಳ ತೀವ್ರ ವಿರೋಧ ಮತ್ತು ಎಐಐಇಎ ಯ ನಿರಂತರ ಪ್ರಚಾರಾಂದೋಲನ ಮತ್ತು ಹೋರಾಟಗಳಿಂದಾಗಿ ಈ ಹೆಚ್ಚಳ ಮಾಡುವುದು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ತನ್ನ ಉಳಿವಿಗೆ ಈಗ ಎಡಪಕ್ಷದ ಮೇಲಿನ ಅವಲಂಬನೆಯಿಲ್ಲದಿರುವ ಕಾರಣ ಸರ್ಕಾರ ಇದೀಗ ಎರಡನೇ ಪೀಳಿಗೆಯ ಸುಧಾರಣೆಯ ಪ್ರಸ್ತಾಪವನ್ನೆತ್ತುತ್ತಿದೆ. ಬ್ಯಾಂಕಿಂಗ್ ತಿದ್ದುಪಡಿ ಮಸೂದೆ ಪಿಂಚಣಿ ನಿಧಿಯ ನಿಯಂತ್ರಣ ಮತ್ತು ಅಭಿವೃದ್ಧಿ ಮಸೂದೆಗಳ ಲೋಕಸಭೆಯಲ್ಲಿ ಅಂಗೀಕಾರಕ್ಕೆ ಬಾಕಿಯಿವೆ. ದೇಶದ ದುಡಿಯುವ ವರ್ಗದ ಭವಿಷ್ಯನಿಧಿಯ ಒಂದು ಭಾಗವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲು ಸರ್ಕಾರ ಏಕಪಕ್ಷೀಯವಾಗಿ ನಿರ್ಧರಿಸಿದೆ. ದೇಶೀಯ ಮತ್ತು ಅಂತರರಾಷ್ಟ್ರೀಯ ಖಾಸಗಿ ಬಂಡವಾಳಗಾರರಿಗೆ ಸಹಕಾರಿಯಾಗುವಂತೆ ಮಾಡಲು ಇದೀಗ ವಿಮಾ ಉದ್ದಿಮೆಯಲ್ಲಿ ಸುಧಾರಣೆ ತರಲು ಸರ್ಕಾರ ಸನ್ನದ್ಧವಾಗಿದೆ.

ಉದಾರೀಕರಣಕ್ಕೆ ಬದ್ಧವಾದ ಅಧ್ಯಯನ ಸಮಿತಿ

ಖಚಿತ ಮೂಲಗಳ ಪ್ರಕಾರ ವಿಮಾ ಸಮಗ್ರ ಮಸೂದೆಯ ಮೂಲಕ ಇದೀಗ ಚಾಲ್ತಿಯಲ್ಲಿರುವ ಮೂರು ವಿಮಾ ಮಸೂದೆಗಳಲ್ಲಿ ತಿದ್ದುಪಡಿ ತರಲು ಸರ್ಕಾರ ಉದ್ದೇಶಿಸಿದೆ. ಐಆರ್‌ಡಿಎ ಮಸೂದೆಗೆ ತಿದ್ದುಪಡಿ ತರುವ ಮೂಲಕ ವಿದೇಶಿ ನೇರ ಬಂಡವಾಳವನ್ನು ಶೇ.49ಕ್ಕೇರಿಸುವುದು ಸಾಧ್ಯವಾಗುತ್ತದೆ. ವಿಮಾ ವ್ಯವಹಾರಕ್ಕೆ ಅಗಾಧ ಬಂಡವಾಳದ ಅಗತ್ಯವಿದ್ದು ಭಾರತ ಖಾಸಗಿ ವಿಮಾ ಬಂಡವಾಳದಾರರು ಆ ಬಂಡವಾಳ ತರುವುದು ಸಾಧ್ಯವಿರದ ಕಾರಣ ವಿದೇಶಿ ನೇರ ಬಂಡವಾಳವನ್ನು ಹೆಚ್ಚಿಸುವ ಅಗತ್ಯವಿದೆಯೆಂಬ ವಾದವನ್ನು ಸರ್ಕಾರ ಮುಂದಿಟ್ಟಿದೆ. ಭಾರತದ ಖಾಸಗಿ ವಿಮಾ ಪಾಲುದಾರರು ದೊಡ್ಡ ಉದ್ದಿಮೆಪತಿಗಳಾಗಿದ್ದು ಜಾಗತಿಕವಾಗಿಯೂ ತಮ್ಮ ವ್ಯವಹಾರ ಹೆಚ್ಚಿಸುತ್ತಿರುವ ಹಿನ್ನೆಲೆಯಲ್ಲಿ ಈ ವಾದವನ್ನು ಒಪ್ಪಲಾಗದು. ವಿಮಾ ಉದ್ದಿಮೆಯ ಖಾಸಗೀಕರಣದ ಸಮಯದಲ್ಲಿ ಸರ್ಕಾರ ವಿದೇಶಿ ವಿಮಾ ಸಂಸ್ಥೆಗಳು ತಮ್ಮ ಜಾಗತಿಕ ಪ್ರೀಮಿಯಂನ ಬಹುದೊಡ್ಡ ಮೊತ್ತವನ್ನು ದೇಶದ ಅಭಿವೃದ್ಧಿಯೋಜನೆಗಳಿಗಾಗಿ ತರುತ್ತಾರೆಂದು ಪ್ರತಿಪಾದಿಸಿತ್ತು. ಕಳೆದ 8 ವರ್ಷಗಳಿಂದ ಈ ಸಂಸ್ಥೆಗಳು ಯಾವುದೇ ಜಾಗತಿಕ ಪ್ರೀಮಿಯಂ ನಿಧಿಯನ್ನು ದೇಶದೊಳಕ್ಕೆ ತಂದಿಲ್ಲವೆಂಬುದು ಅನುಭವ ವೇದ್ಯವಾಗಿದೆ. ವಿದೇಶಿ ನೇರ ಬಂಡವಾಳದ ಕುರಿತು ಸರ್ಕಾರದ ದೃಷ್ಟಿಕೋನದಲ್ಲಿ ಬದಲಾವಣೆಯುಂಟಾಗಿದೆ. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ವಿದೇಶೀ ನೇರ ಬಂಡವಾಳ ಬಹುಮುಖ್ಯ ಪಾತ್ರ ವಹಿಸುತ್ತದೆಂಬ 'ವಾಷಿಂಗ್ಟನ್ ಕನ್ಸೆನ್ಸಸ್'(ವಾಷಿಂಗ್ಟನ್ ಸರ್ವಸಮ್ಮತಿ)ನ ಅಭಿಪ್ರಾಯವನ್ನು ಕುರುಡಾಗಿ ಸ್ವೀಕರಿಸಿದ ಅದು ವಿದೇಶಿ ನೇರಬಂಡವಾಳವನ್ನು ತನ್ನತ್ತ ಸೆಳೆಯಲು ಹಲವಾರು ಕ್ರಮಗಳನ್ನು ಕೈಗೊಂಡು, ವಿಶ್ವಬ್ಯಾಂಕ್ ಮತ್ತು ಹಲವು ಸರ್ಕಾರಗಳು ಪ್ರಪಂಚದ ಹಲವು ದೇಶಗಳ ಮೇಲೆ ಜಾಗತೀಕರಣದ ಪರಿಣಾಮಗಳನ್ನು ಅಧ್ಯಯನ ಮಾಡಲು ಆಯೋಗವೊಂದನ್ನು ರಚಿಸಬೇಕೆಂದು ಒಮ್ಮತದಿಂದ ನಿರ್ಧರಿಸಿದ ಫಲವಾಗಿ ನೋಬೆಲ್ ಪ್ರಶಸ್ತಿ ವಿಜೇತ ಮೈಕೆಲ್ ಸ್ಪೆನ್ಸ್ ಅಧ್ಯಕ್ಷರಾಗಿದ್ದ, ಮಾಂಟೆಕ್‌ಸಿಂಗ್ ಆಹ್ಲುವಾಲಿಯ ಸದಸ್ಯರಾಗಿದ್ದ ಬೆಳವಣಿಗೆ ಮತ್ತು ಅಭಿವೃದ್ಧಿ ಆಯೋಗ ತನ್ನ ವಿಸ್ತೃತ ವರದಿ ನೀಡಿತು. ಸ್ಥಳಾವಕಾಶದ ಕಾರಣದಿಂದ ಸಮಿತಿಯ ಅಧ್ಯಯನ ಹೊರತಂದ ಎಲ್ಲಾ ಅಂಶಗಳ ಬಗ್ಗೆ ಬರೆಯುವುದು ಸಾಧ್ಯವಿಲ್ಲ. ಸಮಿತಿ ನವಉದಾರೀಕರಣ ನೀತಿಗಳಿಗೆ ಬದ್ಧವಾಗಿದೆ. ಆದರೆ ಈ ನೀತಿಗಳ ವಿರುದ್ಧ ತೀವ್ರಗೊಳ್ಳುತ್ತಿರುವ ಜನತೆಯ ಕ್ರೋಧ ಮತ್ತು ವಿರೋಧಗಳನ್ನು ಗಮನಿಸಿ ಹಲವು ಮಾರ್ಪಾಡುಗಳನ್ನು ಸೂಚಿಸಿದೆ.

ದೇಶೀಯ ಉಳಿತಾಯದ ಮೇಲೆ ಸರ್ಕಾರದ ನಿಯಂತ್ರಣ ಬೇಕು


ಜನಶಕ್ತಿ ಕನ್ನಡ ವಾರಪತ್ರಿಕೆ

ವಿಮಾ ಉದ್ದಿಮೆ: ಹಾನಿಕಾರಕ ವಿದೇಶಿ ಬಂಡವಾಳ.

ಪುಟ 11 ರಿಂದ

‘ಉತ್ಕರ್ಷದಲ್ಲಿರುವ ಆರ್ಥಿಕತೆಗೆ ಅಗತ್ಯವಾದ ಸಾರ್ವಜನಿಕ ಹಣ ಹೂಡಿಕೆಯೂ ಸೇರಿದಂತೆ ದೇಶೀಯ ಉಳಿತಾಯಕ್ಕೆ ವಿದೇಶಿ ಉಳಿತಾಯದ ಹಣ ತಕ್ಕ ಬದಲಿಯಾಗಲಾರದೆಂದು’ ಈ ಸಮಿತಿ ತನ್ನ ಅಭಿಪ್ರಾಯ ಪಟ್ಟಿದೆ. ಇದು ‘ವಾಷಿಂಗ್ಟನ್ ಕನ್ಸೆನ್ಸಸ್’ನಲ್ಲಿ ಮೂಡಿಬಂದ ಅಭಿಪ್ರಾಯಕ್ಕೆ ವ್ಯತಿರಿಕ್ತವಾದುದು. ಆರ್ಥಿಕ ವಲಯದಲ್ಲಿ ಜಾಗತಿಕವಾಗಿ ಉಂಟಾಗಿರುವ ಅಲ್ಲೋಲಕಲ್ಲೋಲದ ಹಿನ್ನೆಲೆಯಲ್ಲಿ ಸರ್ಕಾರಗಳು ಹೆಚ್ಚು ಹೆಚ್ಚು ಹಣ ಹೂಡುವ ಮೂಲಕ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಬೇಕೆಂದು ಅಭಿಪ್ರಾಯ ಹೊರಬರುತ್ತಿದೆ. ಹೀಗಾಗಬೇಕಾದರೆ ದೇಶೀಯ ಉಳಿತಾಯದ ಮೇಲೆ ಸರ್ಕಾರದ ನಿಯಂತ್ರಣವಿರಬೇಕು. ವಿಮಾ ಉದ್ದಿಮೆಯಲ್ಲಿ ವಿದೇಶೀ ನೇರ ಬಂಡವಾಳ ಹೆಚ್ಚಳ ಇದಕ್ಕೆ ವಿರುದ್ಧವಾಗಿ ಕೆಲಸ ಮಾಡುತ್ತದೆ. ಅತಿ ಸಣ್ಣ ಮೊತ್ತದ ಹೂಡಿಕೆಯಿಂದ ವಿದೇಶೀ ಸಂಸ್ಥೆಗಳಿಗೆ ಅಗಾಧಮೊತ್ತದ ದೇಶೀಯ ಉಳಿತಾಯದ ಮೇಲೆ ನಿಯಂತ್ರಣ ಮತ್ತು ಸಾಮಿಪ್ಯ ದೊರೆಯುವಂತಾಗುತ್ತದೆ. ಇಂತಹ ಕ್ರಮ ಭಾರತದ ಆರ್ಥಿಕತೆಗೆ ವಿನಾಶಕಾರಿಯಾಗಲಿದೆ.

ಕಳೆದ ಕೆಲವು ವರ್ಷಗಳಿಂದ ಸಾಮಾನ್ಯ ವಿಮಾ ವಲಯದಲ್ಲಿ ಮಲ್ಹೋತ್ರ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಸರ್ಕಾರ ಹಲವು ಕ್ರಮ ಕೈಗೊಂಡಿದೆ. ಅದು ಸಾಮಾನ್ಯ ವಿಮಾ ನಿಗಮದಿಂದ ನಾಲ್ಕು ಸಾಮಾನ್ಯ ವಿಮಾ ಕಂಪನಿಗಳು ಅತ್ಯುತ್ತಮ ವ್ಯವಹಾರ ನಡೆಸಿವೆ. 2007-08 ಕ್ಕೆ ಈ ಕಂಪನಿಗಳು ಒಟ್ಟು 2794 ಕೋಟಿ ರೂ.ಗಳ ಲಾಭಗಳಿಸಿ ಸರ್ಕಾರಕ್ಕೆ 449.49 ಕೋಟಿ ರೂ.ಗಳ ಲಾಭಾಂಶ ನೀಡಿವೆ. ಈ ನಾಲ್ಕು ಕಂಪನಿಗಳ ಆಸ್ತಿಯ ಮೊತ್ತ 78.198 ಕೋಟಿ ರೂ.ಗಳಾಗಿದ್ದು, ಒಟ್ಟು 13253.51 ಕೋಟಿ ರೂ.ಗಳ ಮಿಗುತಾಯ(Surplus) ಹೊಂದಿವೆ. ಇಂತಹ ಆರ್ಥಿಕ ದಾರ್ಢ್ಯತೆ ಹೊಂದಿರುವ ಅವು ಬಂಡವಾಳಕ್ಕಾಗಿ ಷೇರು ಮಾರುಕಟ್ಟೆಯನ್ನು ಅವಲಂಬಿಸಬೇಕಿಲ್ಲ. ಆಂತರಿಕವಾಗಿಯೇ ಅವು ಈ ಬಂಡವಾಳ ಸೃಷ್ಟಿಸಬಲ್ಲವು. ದೇಶ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡಿರುವ ಈ ಕಂಪನಿಗಳ ಖಾಸಗೀಕರಣ ದೇಶದ ಪಾಲಿಗೆ ವಿನಾಶಕಾರಿಯಾದುದು.



ಭಾರತೀಯ ಮಾರುಕಟ್ಟೆಯಲ್ಲಿ ವಿಮೆಯ ದೀರ್ಘಾವಧಿ ವ್ಯವಹಾರಕ್ಕೆ ಅನುಕೂಲಕರ ಹಣಕಾಸಿನ ಪತ್ರಗಳು (Instruments) ಲಭ್ಯವಿಲ್ಲವೆಂದು ಹಲವು ಖಾಸಗಿ ವಿಮಾ ನಿಧಿಯ ಒಂದು ಭಾಗವನ್ನು ದೇಶದಿಂದ ಹೊರಗೆ ಹೂಡಿಕೆಗೆ ಅವಕಾಶ ನೀಡಬೇಕೆಂದು ಅವು ಒತ್ತಾಯಿಸುತ್ತಿವೆ. ಈ ವಾದವನ್ನು ಒಪ್ಪಿಕೊಂಡಿರುವ ಸರ್ಕಾರ ವಿಮಾ ಮಸೂದೆಗೆ ತಿದ್ದುಪಡಿ ತರುವ ಮೂಲಕ ವಿಮಾ ನಿಧಿಯ ಹೂಡಿಕೆಯ ಮೇಲಿನ ನಿರ್ಬಂಧಗಳನ್ನು ಸಡಲಿಸ ಹೊರಟಿದೆ. ಹಾಗಾದಲ್ಲಿ ದೇಶದ ಅಭಿವೃದ್ಧಿಯೋಜನೆಗೆ ಅತ್ಯಗತ್ಯವಾದ ಹಣ ದೇಶದಿಂದ ಹೊರಗೆ ಹರಿದು ಹೋಗಲು ಅವಕಾಶ ನೀಡಿದಂತಾಗುತ್ತದೆ. ಪಾಲಿಸಿದಾರರ ಉಳಿತಾಯದ ಹಣವನ್ನು ಸಟ್ಟಾ ಚಟುವಟಿಕೆಗಳಲ್ಲಿ ತೊಡಗಿಸಲು ಅವಕಾಶ ಕಲ್ಪಿಸಿದಂತಾಗುತ್ತದೆ. ಇದು ಪಾಲಿಸಿದಾರರ ಮತ್ತು ದೇಶದ ಹಿತಾಸಕ್ತಿಗೆ ಧಕ್ಕೆ ತರಲಿದೆ.

ಲೋಕಸಭೆಯಲ್ಲಿ ಸರ್ಕಾರ ಮಂಡಿಸ ಹೊರಟಿರುವ ಎಲ್‌ಐಸಿ ಮಸೂದೆ 1956 ರ ತಿದ್ದುಪಡಿ ಮಸೂದೆ ಎಲ್‌ಐಸಿಯ ಬಂಡವಾಳವನ್ನು ರೂ.5 ಕೋಟಿಯಿಂದ ರೂ.100 ಕೋಟಿಗೆ ಏರಿಸಲಿದೆ. ಐ.ಆರ್.ಡಿ.ಎ. ಮಸೂದೆಯ ಪ್ರಕಾರ ವಿಮಾ ಸಂಸ್ಥೆಯ ಕನಿಷ್ಠ ಬಂಡವಾಳ ನೂರು ಕೋಟಿಯಿರಬೇಕು. ಇದರನ್ವಯ ಎಲ್‌ಐಸಿಯ ಬಂಡವಾಳವನ್ನೂ ಏರಿಸಬೇಕೆಂಬುದು ಸರ್ಕಾರದ ವಾದ. ಮೇಲ್ನೋಟಕ್ಕೆ ಇದು ಎಲ್‌ಐಸಿಯ ಬಂಡವಾಳದ ಹೆಚ್ಚಳದ ಪ್ರಯತ್ನ ಎಂದಷ್ಟೇ ಎನಿಸಿದರೂ ಮಲ್ಹೋತ್ರ ಸಮಿತಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ ಇದನ್ನು ನೋಡಿದರೆ ಸರ್ಕಾರದ ನಿಜವಾದ ಉದ್ದೇಶ ಅರ್ಥವಾಗುತ್ತದೆ. ಈ ಸಮಿತಿ ಎಲ್‌ಐಸಿಯ ಬಂಡವಾಳವನ್ನು 100 ಕೋಟಿಗೆ ಏರಿಸುವ ಮತ್ತು ಅದರಲ್ಲಿ ಶೇ.50 ರಷ್ಟನ್ನು ಸರ್ಕಾರ ಖಾಸಗಿ ಬಂಡವಾಳಕ್ಕೆ ಅನುವು ಮಾಡಿಕೊಡುವ ಶಿಫಾರಸ್ಸು ಮಾಡಿತ್ತು. ಹಾಗಾಗಿ ಯಾವುದೇ ಅಗತ್ಯವಿಲ್ಲದಿದ್ದರೂ ಬಂಡವಾಳದ ಹೆಚ್ಚಳಕ್ಕೆ ಸರ್ಕಾರದ ಯತ್ನ ಅನುಮಾನಾಸ್ಪದವಾಗಿದೆ. ಇಂದು ಎಲ್‌ಐಸಿ ದೇಶದ ಅತ್ಯುನ್ನತ ಆರ್ಥಿಕ ಸಂಸ್ಥೆಯಾಗಿದೆ. ದೇಶ ನಿರ್ಮಾಣಕ್ಕೆ ಅದು ನೀಡಿರುವ ಕೊಡುಗೆ ಅಪಾರವೆಂಬುದನ್ನು ಅದರ ಪ್ರತಿಸ್ಪರ್ಧಿಗಳೂ ಒಪ್ಪುತ್ತಾರೆ. ಒಟ್ಟು 24 ಕೋಟಿ ಪಾಲಿಸಿದಾರರನ್ನು ಹೊಂದಿರುವ ಅದು ಒಟ್ಟು ಪಾಲಿಸಿಗಳ ಸಂಖ್ಯೆ ಮತ್ತು ಹಕ್ಕುದಾವೆ (ಕ್ಲೈಮ್) ಪಾವತಿಯ ದರದಲ್ಲಿ ವಿಶ್ವದಾಖಲೆ ನಿರ್ಮಿಸಿದೆ.

ಇಂದು ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲಿ ವಿಮೆಯ ವ್ಯಾಪ್ತಿ penetration ಹೆಚ್ಚಾಗಿದ್ದರೆ ಅದಕ್ಕೆ ಕಾರಣ ಎಲ್‌ಐಸಿಯ ಅದ್ಭುತ ಕಾರ್ಯವೈಖರಿ. ಒಟ್ಟು ದೇಶದ GDP ಯಲ್ಲಿ ವಿಮಾ ಪ್ರೀಮಿಯಂ ಪ್ರಮಾಣ ಶೇ. 4. ಅಮೇರಿಕಕ್ಕಿಂತ ಇದು ಹೆಚ್ಚಿನದು. ಎಲ್‌ಐಸಿಯ ಒಟ್ಟು ಆಸ್ತಿಯ ಮೊತ್ತ 8.04 ಲಕ್ಷ ಕೋಟಿ ರೂ.ಗಳು. ಇದು ಎಲ್‌ಐಸಿಯ ಒಟ್ಟು ಜವಾಬ್ದಾರಿ (liablity) ಗಿಂತ ರೂ.1.17 ಲಕ್ಷ ಕೋಟಿ ಹೆಚ್ಚಿನದು. ಇಂತಹ ಆರ್ಥಿಕ ದಾರ್ಢ್ಯ ಹೊಂದಿರುವ ಸಂಸ್ಥೆ ದೇಶದಲ್ಲಿ ಇನ್ನೊಂದಿರಲಾರದು. ಹಾಗಾಗಿ ಎಲ್‌ಐಸಿಯ ಬಂಡವಾಳವನ್ನು 100 ಕೋಟಿಗೆ ಹೆಚ್ಚಿಸುವ ಉದ್ದೇಶ ಎಲ್‌ಐಸಿಯನ್ನು ಆರ್ಥಿಕವಾಗಿ ಸಶಕ್ತಗೊಳಿಸುವುದಲ್ಲ ಬದಲಿಗೆ ಈ ಸಶಕ್ತ ಆರ್ಥಿಕ ಸಂಸ್ಥೆಯನ್ನು ಖಾಸಗೀಕರಣಗೊಳಿಸುವತ್ತ ಮೊದಲ ಹೆಜ್ಜೆ.

ಇಂತಹ ಬೃಹತ್ ರಾಷ್ಟ್ರೀಕೃತ ಸಂಸ್ಥೆಯನ್ನು ಖಾಸಗೀಕರಿಸುವುದೆಂದರೆ ಅದೊಂದು ರಾಷ್ಟ್ರದ್ರೋಹಿ ಕ್ರಮ.

ಅಂತರಗಂಗೆ...

ಪುಟ 5 ರಿಂದ

ಬಸ್, ಊಟ ಏರ್ಪಡಿಸಲಾಗುತ್ತದೆ. ಆ ಸಂದರ್ಭಗಳಲ್ಲಿ ಸಮೀಪದಲ್ಲಿರುವ ದರ್ಗಾ ತೋರಿಸಿ ವ್ಯವಸ್ಥಿತವಾಗಿ ಕೋಮು ದ್ವೇಷ ಬಿತ್ತಲಾಗುತ್ತದೆ. ಕೋಲಾರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಅಂತರಗಂಗೆ ತನಕ ಭಜರಂಗಿ ಗೂಂಡಾಗಳ ಕಾವಲು ಪಡೆಯೇ ಇರುತ್ತದೆ. ಹೊಟ್ಟೆ ತುಂಬ ಮದ್ಯ ಸೇವಿಸಿ, ತಲೆಗೆ ಕೇಸರಿ ಪಟ್ಟಿ ಸುತ್ತಿಕೊಂಡು, ಹಣೆಗೆ ತಿಲಕ ಇಟ್ಟು ಎದುರಿಗೆ ಬರುವವರನ್ನು ಬಸಿದು ರಕ್ತ ಕುಡಿಯುವ ನರಭಕ್ಷಕರಂತೆ ಕಾಣುತ್ತಾರೆ.

ಅಂತರಗಂಗೆ ಯಾರಿಗೆ ಬೇಕು, ದೇವರು ಯಾರಿಗೆ ಬೇಕು. ಕೋಮು ಘರ್ಷಣೆಗಳನ್ನು ಸೃಷ್ಟಿಸುವುದಷ್ಟೇ ನಮ್ಮ ಕೆಲಸ ಎಂದು ಅವರೊಳಗೇ ಮಾತಾಡಿಕೊಳ್ಳುವುದು ಅವರ ಡೊಂಗಿ ಭಕ್ತಿಯನ್ನು ಸಾರುತ್ತದೆ. ಇನ್ನು ಕೆಲವರು ಹಣ ಕೊಡುತ್ತಾರೆ. ಮದ್ಯ ಕೊಡುತ್ತಾರೆ, ಊಟ ಕೊಡುತ್ತಾರೆ ಆದಕ್ಕೆ ಬರ್ತೀವಿ ಎನ್ನುತ್ತಾರೆ. ಅಮಾಯಕ ಯುವಕರನ್ನು ಆರ್‌ಎಸ್‌ಎಸ್ ಇಂತಹ ದುಷ್ಕೃತ್ಯಗಳಿಗೆ ಬಳಕೆ ಮಾಡಿಕೊಳ್ಳುತ್ತಿದೆ. ಮತ್ತೊಂದು ಅಪಾಯಕಾರಿ ವಿಷಯ ಎಂದರೆ ಕೋಲಾರದ ಮುಗ್ಧ ಯುವಕರನ್ನು ವ್ಯವಸ್ಥಿತವಾಗಿ ಕೋಮು ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಈ ಕೆಲಸಕ್ಕೆ ಬ್ರಾಹ್ಮಣರಲ್ಲದೆ ದಲಿತರು, ಹಿಂದುಳಿದ ಯುವಕರನ್ನು ಸೆಳೆದಿದ್ದಾರೆ. ಹಣ ಮದ್ಯ ಮತ್ತಿತರ ಆಮಿಷಗಳನ್ನು ಒಡ್ಡಿ, ಅವರ ಮೆದುಳಲ್ಲಿ ಕೋಮುವಾದಿ ಬೀಜಗಳನ್ನು ಬಿತ್ತಿ ತಮ್ಮದೇ ಜನರ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆ. ಈ ಹಿಂದೆ ಅಂಬೇಡ್ಕರ್‌ಗೆ ಜಿಂದಾಬಾದ್ ಹೇಳುತ್ತಿದ್ದ ದಲಿತ ಯುವಕರು ಈಗ ವಾಜಪೇಯಿ, ಅಡ್ವಾಣಿಗೆ ಜಿಂದಾಬಾದ್ ಹೇಳುತ್ತಿದ್ದಾರೆ. ಅಂತರಗಂಗೆ ಮತ್ತೊಂದು ಅಯೋಧ್ಯೆ, ಬಾಬಾಬುಡನ್‌ಗಿರಿಯಾಗಿ ಪರಿವರ್ತನೆ ಯಾಗುವ ಮೊದಲು ಜಿಲ್ಲಾಡಳಿತ, ಜಿಲ್ಲಾ ಪೋಲೀಸ್, ಮತ್ತು ಜನಪರ ಸಂಘಟನೆಗಳು ಎಚ್ಚೆತ್ತುಕೊಂಡು ಕೋಲಾರವನ್ನು, ಅಲ್ಲಿನ ಜನತೆಯನ್ನು ರಕ್ಷಿಸುವ ಜರೂರು ಎಂದಿಗಿಂತಲೂ ಈಗ ಹೆಚ್ಚಾಗಿದೆ.

ಆರ್ಥಿಕ ಕುಸಿತದ ಪರಿಣಾಮಕ್ಕೆ ಕುಸಿದವರು

ಯುರೋಪ್, ಅಮೇರಿಕಾ ಮತ್ತು ಜಪಾನ್‌ನ ವಿಮಾ ಸಂಸ್ಥೆಗಳು ಆರ್ಥಿಕ ಬಿಕ್ಕಟ್ಟಿನ ದಾಳಿಗೊಳಗಾಗಿವೆ. ಎಐಜಿ ಅತ್ಯಂತ ಭೀಕರವಾಗಿ ಸೋಲನ್ನನುಭವಿಸಿದೆ. ಅಮೇರಿಕಾದ ಸರ್ಕಾರ ಅಗಾಧವಾದ 150 ಬಿಲಿಯನ್ ಡಾಲರ್‌ಗಳ ಸಹಾಯ ನೀಡಿ ಅದನ್ನು ರಕ್ಷಿಸಬೇಕಾಯ್ತು. ಮೆಟ್‌ಲೈಫ್ ಮತ್ತು ನ್ಯೂಯಾರ್ಕ್ ಲೈಫ್ ಸಂಸ್ಥೆಗಳು ಫೆಡರಲ್ ರಿಸರ್ವ್‌ನ ಮುಂದೆ ಸಹಾಯಕ್ಕಾಗಿ ಕೈಯೊಡ್ಡಿವೆ. ಯು.ಕೆ. ಪ್ರುಡೆನ್ಶಿಯಲ್ ಮತ್ತು ಅವಿವ ಸಂಸ್ಥೆಗಳು ತೀವ್ರ ಬಂಡವಾಳ ಕೊರತೆಯಿಂದ ನರಳುತ್ತಿವೆ. ಪೋರ್ಟಿಸ್ ಸಂಸ್ಥೆಯನ್ನು ಬೆಲ್ಜಿಯಂ ಮತ್ತಿತರ ದೇಶಗಳು ತೆಗೆದುಕೊಳ್ಳಬೇಕಾಯ್ತು. ಐಎನ್‌ಜಿ ಮತ್ತು ಆರ್ಗೋನ್‌ಗಳು ಹಾಲೆಂಡ್ ಸರ್ಕಾರದ ನೆರವಿನಿಂದಾಗಿ ಅಪಾಯದ ಹೊರಗುಳಿದಿವೆ. ಜರ್ಮನಿಯ ಅಲಾಯನ್ಸ್ ಮತ್ತು ಇಟಲಿಯ ಜನರಲೈಟಿಸ್ ಕಂಪನಿಗಳು ಅಪಾರವಾದ ನಷ್ಟವನ್ನನುಭವಿಸಿವೆ. ಇಡೀ ಅಮೇರಿಕಾ ಯುರೋಪ್ ಮತ್ತು ಜಪಾನ್‌ನ ವಿಮಾ ಸಂಸ್ಥೆಗಳ ಬಗ್ಗೆ ಫಿಚ್‌ರೇಟಿಂಗ್ ನಕಾರಾತ್ಮಕ ನೋಟ ಹೊಂದಿದೆ. ಅಮೇರಿಕಾ ಮತ್ತು ಯುರೋಪ್‌ನ ಆರ್ಥಿಕ ಹಿಂಜರಿತದಿಂದಾಗಿ ಮುಂದಿನ 18 ರಿಂದ 24 ತಿಂಗಳುಗಳಲ್ಲಿ ಈ ದೇಶಗಳ ವಿಮಾ ವ್ಯವಹಾರದಲ್ಲಿ ಯಾವುದೇ ಬೆಳವಣಿಗೆಯ ಸಾಧ್ಯತೆಗಳು ಕಂಡುಬರುತ್ತಿಲ್ಲ. ಮೇಲ್ಕಾಣಿಸಿದ ಎಲ್ಲ ವಿಮಾ ಸಂಸ್ಥೆಗಳು ಭಾರತದಲ್ಲೂ ತಮ್ಮ ವ್ಯವಹಾರ ಹೊಂದಿವೆ. ತಮ್ಮ ತಮ್ಮ ದೇಶಗಳಲ್ಲಿ ಈ ವಿಮಾ ಸಂಸ್ಥೆಗಳು ತಮ್ಮ ವಹಿವಾಟು ಮುಂದುವರೆಸಲಾಗದೆ ತತ್ತರಿಸುತ್ತಿರುವಾಗ ಯುಪಿಎ ಸರ್ಕಾರವು ವಿದೇಶಿ ನೇರ ಬಂಡವಾಳ ಮಿತಿಯನ್ನು ಶೇ.49ಕ್ಕೇರಿಸುವ ಮೂಲಕ ಈ ಸಂಸ್ಥೆಗಳಿಗೆ ಇನ್ನಷ್ಟು ವ್ಯವಹಾರಕ್ಕೆ ಅವಕಾಶ ನೀಡಿ ದೇಶೀಯ ಉಳಿತಾಯವನ್ನು ಅವರ ಕೈಗಳಲ್ಲಿಡಲು ಪ್ರಯತ್ನಿಸುತ್ತಿದೆ. ವಿಮಾ ಉದ್ದಿಮೆಯನ್ನು ಇನ್ನಷ್ಟು ಉದಾರೀಕರಿಸಿ, ಇದನ್ನು ಇನ್ನಷ್ಟು ತೆರೆದಿಡುವುದಕ್ಕೆ ಅನುವು ಮಾಡುವ ಈ ಮಸೂದೆಗಳು ಈ ದೇಶದ ಮತ್ತು ಪಾಲಿಸಿದಾರರ ಹಿತಾಸಕ್ತಿಗೆ ವಿರುದ್ಧವಾಗಿದೆ. ಸರ್ಕಾರದ ಈ ಕ್ರಮಕ್ಕೆ ಸಾಕಷ್ಟು ವಿರೋಧವಿದೆ. ಈ ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸಲು ಎಡಪಕ್ಷಗಳು ನಿರ್ಧರಿಸಿವೆ. ತಮ್ಮ ತಮ್ಮ ಪಕ್ಷಗಳ ನಿಲುವಿಗಿಂತ ಭಿನ್ನವಾಗಿ ಹಲವಾರು ಪಾರ್ಲಿಮೆಂಟ್‌ನ ಸದಸ್ಯರು ಈ ಮಸೂದೆಗಳ ವಿಚಾರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ. ಎಐಐಇಎ ಯ ನಾಯಕತ್ವದಲ್ಲಿ ವಿಮಾ ನೌಕರರೆಲ್ಲರೂ ಸರ್ಕಾರದ ಈ ಕ್ರಮದ ವಿರುದ್ಧ ಜನತೆಯ ಅಭಿಪ್ರಾಯ ಸಂಗ್ರಹಿಸಲು ಹಲವು ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಗಳು ಮತ್ತು ಮುಷ್ಕರಗಳ ನಿರ್ಧಾರ ಮಾಡಿದ್ದಾರೆ. ಜಗತ್ತಿನಾದ್ಯಂತ ಆರ್ಥಿಕ ವಲಯ ಸಂಕಷ್ಟದಲ್ಲಿ ಸಿಲುಕಿರುವಾಗ ಸರ್ಕಾರ ತನ್ನ ತಪ್ಪನ್ನರಿತು ಆರ್ಥಿಕ ವಲಯದ ಉದಾರೀಕರಣವನ್ನು ಕೈಬಿಡುವವರೆಗೆ ಹೋರಾಟ ಮುಂದುವರಿಸುವ ಆಶಯ ಜನಪರ ಚಳುವಳಿಯದ್ದು.


ವಿಧಾನಸಭಾ ಚುನಾವಣೆಗಳು

ಬಿಜೆಪಿ ದುರಾಡಳಿತ : ಅತೃಪ್ತಿ ಸೋಲಿಸುವ ಶಕ್ತಿಯಾದೀತೆ?

ದುರಾಡಳಿತ, ಭ್ರಷ್ಟಾಚಾರ, ಕೋಮುವಾದಗಳೇ ಸಾಧನೆಯಾಗಿರುವ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಜನತೆ ಬದಲಾವಣೆ ಬಯಸಿದ್ದಾರೆ. ಆದರೆ ಅದನ್ನು ಆಗ ಮಾಡಲು ಮುಖ್ಯ ವಿರೋಧ ಪಕ್ಷ ಕಾಂಗ್ರೆಸ್ ಸಿದ್ಧವಿದೆಯೇ ಎಂಬುದು ಪ್ರಶ್ನೆಯಾಗಿದೆ.

ಆ ರಾಜಕುವರಿಯ ರಾಜ್ಯದಲ್ಲಿ :

5 ವರ್ಷಗಳಲ್ಲಿ ಈ ಸರ್ಕಾರ 47 ಬಾರಿ ಗೋಲಿಬಾರ್ ಮಾಡಿದೆ. ಸತ್ತವರು ನೂರಕ್ಕೂ ಹೆಚ್ಚು ಜನ. ಎಲ್ಲರೂ ಒಂದಲ್ಲ ಒಂದು ಜನ ಚಳುವಳಿಯಲ್ಲಿ ನಿರತರಾಗಿದ್ದವರು. ನೀರು ಕೇಳಿದ ರೈತರ ಎದೆಗೆ ಈ ಸರ್ಕಾರ ಗುಂಡಿಕ್ಕಿತ್ತು. 7 ಜನ ರೈತರು ಪ್ರಾಣ ತೆತ್ತರು. ಆ ರಾಜ್ಯದಲ್ಲಿ 5 ವರ್ಷದಲ್ಲಿ ಒಂದು ನೂರಕ್ಕೂ ಹೆಚ್ಚು ಕೋಮುಗಲಭೆಗಳು



ನಡೆದಿವೆ. ಅಲ್ಪಸಂಖ್ಯಾತರಾದ ಕ್ರಿಶ್ಚಿಯನ್ನರು, ಮುಸ್ಲಿಮರು ಮೇಲೆ ಹಾಗೂ ದಲಿತರ ಮೇಲೆ ನಿರಂತರ ದಾಳಿಗಳು ನಡೆದಿವೆ.

ಇಷ್ಟೆಲ್ಲಾ ಹೇಳಿದ ಮೇಲೆ ಇದು ಯಾವ ರಾಜ್ಯ ಅಂತ ಗೊತ್ತಾಗಿರಲೇ ಬೇಕು. ಅರೆ ಗೊತ್ತಾಗಲಿಲ್ಲವೇ? ಇನ್ನೊಂದು ಸುಳಿವು. ಆ ರಾಜ್ಯದ ಹಲವು ಮಂತ್ರಿಗಳು ಹಾಗೂ ಸ್ವತಃ ಮುಖ್ಯಮಂತ್ರಿ ಭ್ರಷ್ಟಾಚಾರ ಆರೋಪದಲ್ಲಿ ಮೊಕದ್ದಮೆ ಎದುರಿಸುತ್ತಿದ್ದಾರೆ. ಈಗ ಗೊತ್ತಾಯ್ತಲ್ಲವೇ, ಹೌದು ಇದು ರಾಜಸ್ಥಾನ, ಮುಖ್ಯಮಂತ್ರಿ ವಸುಂಧರ ರಾಜೇ ಸಿಂಧ್ಯಾ. ಇಂಥಾ ಒಂದು ಭ್ರಷ್ಟ ಸರ್ಕಾರವನ್ನು ನನ್ನ ಜೀವಮಾನದಲ್ಲೇ ನೋಡಿಲ್ಲ ಅಂತ ಮಾಜಿ ಉಪರಾಷ್ಟ್ರಪತಿ ಭೈರೋನ್‌ಸಿಂಗ್ ಶೇಖಾವತ್ ನುಡಿದರು. ಸಿಂಗ್ ಅವರು ವಿರೋಧ ಪಕ್ಷದವರೇನೂ ಅಲ್ಲ. ಬಿಜೆಪಿ ಪಕ್ಷದವರೇ. ಅಷ್ಟು ಮಾತ್ರವಲ್ಲ ಆ ರಾಜ್ಯಕ್ಕೆ ಮುಖ್ಯಮಂತ್ರಿಗಳೂ ಆಗಿದ್ದವರು. ಅಂಥ ಕೀರ್ತಿ ಈ ಸರ್ಕಾರದ್ದು.

ಅಲ್ಲೀಗ ಚುನಾವಣೆ ನಡೆಯುತ್ತಿದೆ. ಜನರ ಬವಣೆಗಳು ಚರ್ಚೆಗೆ ಬಂದಿವೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸರಿಯಾಗಿ ಜಾರಿಗೆ ಬಂದಿಲ್ಲ. ಹಣ ದುರುಪಯೋಗವಾಗಿದೆ. ಗುಜ್ಜಾರ್ ಮತ್ತು ಮೀನಾ ಸಮುದಾಯಗಳ ನಡುವೆ ಜಾತಿ ಜಗಳ ಹತ್ತಿಕೊಳ್ಳಲು ಸರ್ಕಾರದ ಧೋರಣೆಯೇ ಕಾರಣವಾಯಿತು.

ಇಂತಹದ್ದೊಂದು ರಾಜ್ಯದಲ್ಲಿ ಕಾಂಗ್ರೆಸ್ ಪ್ರಮುಖ ವಿರೋಧ ಪಕ್ಷ. ಗೋಲಿಬಾರ್‌ಗಳಲ್ಲಿ ಹೋರಾಟಗಾರರ ಸಾಲು ಸಾಲು ಹೆಣಗಳು ಉರುಳುವಾಗಲೂ ಕಾಂಗ್ರೆಸ್ ಪಕ್ಷ ಬೀದಿಗೆ ಬರಲಿಲ್ಲ. ಜನಾಂದೋಲನ ನಡೆಸಲಿಲ್ಲ. ವಿರೋಧಪಕ್ಷವಾಗಿಯೂ ದಯನೀಯವಾಗಿ ಸೋತಿತ್ತು ಕಾಂಗ್ರೆಸ್ ಪಕ್ಷ.

ಆದರೆ ಇಂಥದ್ದೊಂದು ಸನ್ನಿವೇಶದಲ್ಲಿ ಜನರ ಭಾವನೆಗೆ ಸ್ಪಂದಿಸಿದ್ದು ಕಂಬಾವುಟ. ಸಿಪಿಐ(ಎಂ) ಪಕ್ಷ ರಾಜಸ್ಥಾನದಲ್ಲಿ ಹಲವು ಗಂಭೀರವಾದ ಮತ್ತು ರಾಜ್ಯವ್ಯಾಪಿ ಬಾರಿ ಪ್ರಭಾವ ಬೀರಿದ ಹೋರಾಟಗಳಿಗೆ ನೇತೃತ್ವ ನೀಡಿತು. ಗಂಗಾನಗರ ಪ್ರದೇಶದಲ್ಲಿ ಅಣೆಕಟ್ಟಿನಿಂದ ರೈತರ ಜಮೀನಿಗೆ ಸರ್ಕಾರ ನೀರು ಬಿಡಬೇಕೆಂದು ನಡೆಸಿದ ಹೋರಾಟ ರಾಜ್ಯದ ರೈತರ, ಜನರ ಮನೆಮಾತಾಯಿತು. ಕಳಪೆ ಕಾಮಗಾರಿಯಿಂದಾಗಿ ನೀರು ಬಿಟ್ಟರೆ ನಾಲೆ ಒಡೆಯುವುದೆಂದು ಹೆದರಿದ ಸರ್ಕಾರದ ಬದಲಿಗೆ ರೈತರ ಚಳುವಳಿಕಾರರ ಎದೆಗೆ ಗುಂಡಿಕ್ಕಿತು. ಹೋರಾಟದಿಂದ ಲಕ್ಷಾಂತರ ರೈತರ ಜಮೀನಿಗೆ ನೀರು ಸಿಕ್ಕಿತು. ಬೆಳೆಗೆ ಬೆಂಬಲ ಬೆಲೆ ದೊರೆಯಿತು. ಸರ್ಕಾರದ ವಿದ್ಯುತ್ ದರ ಏರಿಕೆ ತೀರ್ಮಾನ ಜಾರಿಯಾಗಲು ಚಳುವಳಿ ಬಿಡಲಿಲ್ಲ. ಇದರಿಂದ 1700 ಕೋಟಿ ರೂಪಾಯಿಗಳ ಹೊರೆ ತಪ್ಪಿ ರೈತರಿಗೆ ಕೊಂಚ ಹಗುರಾಯಿತು.

ಉದ್ಯೋಗ ಖಾತ್ರಿ ಜಾರಿಗಾಗಿ, ಬುಡಕಟ್ಟು ಜನರ ಹಕ್ಕುಗಳಿಗಾಗಿ, ಹೀಗೆ ಕೋಮುಗಲಭೆಗಳ ಸಂದರ್ಭದಲ್ಲಿ ಮುಗ್ಧರ, ಅಲ್ಪಸಂಖ್ಯಾತರ ರಕ್ಷಣೆಗಾಗಿ ಹಾರಾಡಿತು ಕೆಂಬಾವುಟ.

ಇಂತಹ ಪರಿಸ್ಥಿತಿಯಲ್ಲಿ ಚುನಾವಣೆ ಬಂದಿದೆ. ಬೃಹತ್ ಆಂದೋಲನದ ಅಲೆ ಎಬ್ಬಿಸಿದ ಸಿಪಿಐ(ಎಂ) ಪಕ್ಷ ರಾಜ್ಯದಲ್ಲಿ ಒಟ್ಟು 34 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಇದರಲ್ಲಿ 7 ಕ್ಷೇತ್ರ ಎಸ್.ಸಿ. ಮೀಸಲು ಕ್ಷೇತ್ರಗಳಾದರೆ 1 ಕ್ಷೇತ್ರ ಎಸ್.ಟಿ. ಮೀಸಲು.

ಹಾಲಿ ವಿಧಾನ ಸಭೆಯಲ್ಲಿದ್ದ ಸಿಪಿಐ(ಎಂ) ಶಾಸಕರು ಒಬ್ಬರೇ ಆದರೂ ರಾಜ್ಯದಲ್ಲಿ ಎದ್ದು ಬಂದ ಬಹುತೇಕ ಜನಪರ ಚಳುವಳಿಯ ದನಿಯನ್ನು ಶಾಸನ ಸಭೆಯಲ್ಲಿ ಮೊಳಗಿಸಿದರು. ಜನರ ಕಷ್ಟಗಳಿಗೆ ದನಿಯಾದರು. ಈ ಚುನಾವಣೆಯಲ್ಲಿ ಸಿಪಿಐ(ಎಂ)ನ ಇನ್ನಷ್ಟು ಜನ ಗೆದ್ದಲ್ಲಿ ಶಾಸನ ಸಭೆಯ ಒಳಗಿನ ಹಾಗೂ ಹೊರಗಿನ ಹೋರಾಟಕ್ಕೆ ಇನ್ನಷ್ಟು ಬಲ ಬರಲಿದೆ.

ಸಿಪಿಐ(ಎಂ) ತಾನು ಸ್ಪರ್ಧಿಸಿಲ್ಲದಿರುವ ಕಡೆಗಳಲ್ಲಿ ಸಿಪಿಐ ಪಕ್ಷಕ್ಕೆ ಬೆಂಬಲ ನೀಡಿದೆ. ಇವೆರಡೂ ಪಕ್ಷ

ಪುಟ 14ಕ್ಕೆ

ದೆಹಲಿ : ಜನರ ಧಾರುಣ ಬದುಕು

ದೆಹಲಿ ಒಂದು ರಾಜ್ಯವಾಗಿರುವಂತೆಯೇ ದೇಶದ ರಾಜಧಾನಿಯೂ ಆಗಿದೆ. ರಾಷ್ಟ್ರಪತಿ ಭವನ, ಪಾರ್ಲಿಮೆಂಟ್ ಭವನ, ಕುತುಬ್ ಮಿನಾರ್‌ಗಳ ನೆರಳಿನಲ್ಲಿ ವಾಸಿಸುವ ಜನಗಳ ಬದುಕನ್ನು ಸರಿಯಾಗಿ ನೋಡದವರ ಕಲ್ಪನೆಗಳೇ ಬೇರೆ ಇರಲು ಸಾಧ್ಯ.

ದೆಹಲಿಯಲ್ಲಿ ಹಿಂದೊಮ್ಮೆ ಬಿಜೆಪಿ ಅಧಿಕಾರದಲ್ಲಿತ್ತು. ಕಳೆದ ಎರಡು ಅವಧಿಯಿಂದ ಕಾಂಗ್ರೆಸ್ ಅಧಿಕಾರದಲ್ಲಿದೆ. ಕೋಮುವಾದದ ವಿಷಯದಲ್ಲಿ 'ಸ್ವಲ್ಪ' ವ್ಯತ್ಯಾಸ ಬಿಟ್ಟರೆ ಆರ್ಥಿಕ ಸಾಮಾಜಿಕ ನೀತಿಗಳಲ್ಲಿ ಇವು ಒಂದೇ ನಾಣ್ಯದ ಎರಡು. ಮುಖಗಳಿದ್ದಂತೆ. ಸಾಕ್ಷಿ ಬೇಕಾದರೆ ಇದೋ ನೋಡಿ.

ದೆಹಲಿ ಅತ್ಯಂತ ದೊಡ್ಡ ಶಿಕ್ಷಣ ಕೇಂದ್ರವಾಗಿದ್ದರೂ 17 ರಿಂದ 23 ವರ್ಷದ ಶೇ.11 ಜನ ಮಾತ್ರ ಉನ್ನತ ಶಿಕ್ಷಣ ಕಲಿಯುತ್ತಾರೆ. ಬಿಜೆಪಿ ಆಡಳಿತದ ಮಹಾನಗರ ಪಾಲಿಕೆ ಹೊಸ ಸರ್ಕಾರಿ ಶಾಲೆಗಳನ್ನು ತೆರೆಯುವ ಬದಲಿಗೆ ಅವನ್ನು ಮುಚ್ಚುತ್ತಾ ನಡೆದಿದೆ. ರಾಜ್ಯದಲ್ಲಿ ಆರಂಭವಾಗಿರುವುದು ನಾಲ್ಕು ಖಾಸಗಿ ವಿಶ್ವವಿದ್ಯಾಲಯಗಳು ಮಾತ್ರ. ಬಡವರದೇ ಒಂದು ಶಿಕ್ಷಣ ಲೋಕ. ಶ್ರೀಮಂತರದೇ ಒಂದು ಶಿಕ್ಷಣ ಲೋಕ. ಖಾಸಗಿ, ಶಿಕ್ಷಣ ಸಂಸ್ಥೆಗಳಲ್ಲಿ ಬಡ ಮಕ್ಕಳಿಗೆ ಶೇ.20 ಸೀಟು ಉಚಿತವಾಗಿ ನೀಡಬೇಕೆಂಬ ನ್ಯಾಯಾಲಯ ಆದೇಶಕ್ಕೆ ಗೆದ್ದಲು ಹಿಡಿದಿದೆ.

ಇಲ್ಲಿ ಆರೋಗ್ಯವು ಒಂದು ದೊಡ್ಡ ದಂಧೆ. 560 ಪ್ರಾಥಮಿಕ ಆರೋಗ್ಯ ಕೇಂದ್ರ ಇರಬೇಕಾದ ಕಡೆ ಇರುವುದು 79 ಮಾತ್ರ. ಖಾಸಗೀ ನರ್ಸಿಂಗ್ ಹೋಂಗಳಿಗೆ ನಿತ್ಯವೂ ಹಬ್ಬವೇ.



ಶೀಲಾ ದೀಕ್ಷಿತ್

ದೆಹಲಿ ಅಭಿವೃದ್ಧಿ ಪ್ರಾಧಿಕಾರ ಎಂಬುದೊಂದು ಇದೆ. ಅದು ಕಳೆದ ಎರಡು ದಶಕಗಳಿಂದ ಜನರಿಗಾಗಿ ಒಂದೇ ಮನೆ ಕಟ್ಟಿಕೊಟ್ಟಿಲ್ಲ. ದೆಹಲಿಯ ಶೇ.20.9ರಷ್ಟು ಮನೆಗಳು ಕಚ್ಚಾ ಮನೆಗಳು 30.16 ರಷ್ಟು. ಅರೆ ಕಚ್ಚಾ ಮನೆ. ಈಗ ಚುನಾವಣೆ ಬಂದಾಗ 1400 ಅನಧಿಕೃತ ಬಡಾವಣೆಗಳನ್ನು ಮಾನ್ಯ ಮಾಡುವ 'ದೊಡ್ಡ ಮನಸ್ಸು' ಮಾಡಿರುವ ಸರ್ಕಾರ ಅವುಗಳಿಗೆ ತಾತ್ಕಾಲಿಕ ಮಾನ್ಯತೆ ನೀಡಲು ಮುಂದಾಗಿದೆ. ದೆಹಲಿ ಸ್ಲಂಗಳ ಗೋಳಿನ ಕತೆಯಂತೂ ದೇಶ 'ವಿ' ಖ್ಯಾತ.

ರೇಷನ್ 'ಕಡಿತ': 2001 ರಲ್ಲಿ 1 ಕೋಟಿ 38 ಲಕ್ಷ ಇದ್ದ ದೆಹಲಿ ಜನಸಂಖ್ಯೆ 2007ಕ್ಕೆ 1 ಕೋಟಿ 70 ಲಕ್ಷಕ್ಕೆ ಏರಿತು. ಆದರೆ ಅದೇ ಸಮಯದಲ್ಲಿ ಸರ್ಕಾರಿ (ನ್ಯಾಯ)ಬೆಲೆ ಅಂಗಡಿಗಳ ಸಂಖ್ಯೆ 3165 ರಿಂದ 2501 ಕ್ಕೆ ಇಳಿಯಿತು. ಇಡೀ ದೆಹಲಿಯಲ್ಲಿ 3.8 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ಮಾತ್ರ ನೀಡಲಾಗಿದೆ. ವಿದ್ಯುತ್, ಸಾರಿಗೆ ವ್ಯವಸ್ಥೆಗಳನ್ನು ಜನರಿಗೆ ಒದಗಿಸುವ ಜವಾಬ್ದಾರಿಯಿಂದ ಆಳುವ ಸರ್ಕಾರ ಜಾರಿಕೊಳ್ಳಲು ಯತ್ನಿಸಿದರೆ ಇಲ್ಲಿನ ವಿರೋಧ ಅದನ್ನು ಬೆಂಬಲಿಸುತ್ತಿದೆ. ಮಹಾನಗರಪಾಲಿಕೆಯಲ್ಲಿ ಆಡಳಿತ ನಡೆಸುವ ಬಿಜೆಪಿ ನೀರಿನ ಸರಬರಾಜು ವ್ಯವಸ್ಥೆಯ ಖಾಸಗೀಕರಣಕ್ಕೆ ಯತ್ನಿಸಿದರೆ, ಕಾಂಗ್ರೆಸ್ ತುಟಿ ಬಿಚ್ಚುವುದಿಲ್ಲ.

ದುಡಿಯುವ ಜನರ ಪರಿಸ್ಥಿತಿಯನ್ನು ಯಾರು ಕೇಳುವವರು. ರಾಷ್ಟ್ರೀಯ ಕಾರ್ಮಿಕ ಆಯೋಗವು ಕನಿಷ್ಠ ಕೂಲಿ 8500 ಇರಬೇಕೆಂದರೆ, ಸರ್ಕಾರ ಅದನ್ನು 3683 ರಲ್ಲೇ ಇಟ್ಟಿದೆ. ವಾಸ್ತವವಾಗಿ ಎಷ್ಟೋ ಜನಕ್ಕೆ ಆ ಕೂಲಿಯು ಸಿಗುವುದಿಲ್ಲ. ದುಡಿಮೆಯ ಅವಧಿ, ಕೆಲಸದ ಪರಿಸ್ಥಿತಿ, ಜೀವನ ಭದ್ರತೆ ಇತ್ಯಾದಿ ಕಾನೂನುಗಳೆಲ್ಲ ಇಲ್ಲಿ ಧೂಳಿಪಟ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿಚಾರದಲ್ಲಿ ಮಾತ್ರ ದೆಹಲಿಯಲ್ಲಿ ಬಾರಿ 'ಪ್ರಗತಿ'. ಇದು ದೇಶದ 'ಅತ್ಯಾಚಾರ'ಗಳ ರಾಜಧಾನಿ. ಶೇ.11 ರಷ್ಟಿರುವ ಮುಸ್ಲಿಮರ ಸಂಖ್ಯೆ ರಾಜ್ಯ ಸರ್ಕಾರಿ ನೌಕರಿಯಲ್ಲಿ 3.2 ಮಾತ್ರ. ಬ್ಯಾಂಕ್ ಸಾಲದಲ್ಲಿ ಮುಸ್ಲಿಮರಿಗೆ ಸಿಕ್ಕಿರುವುದು ಶೇ.2.6 ಮಾತ್ರ. ಸಾಚಾರ್ ಸಮಿತಿ ಶಿಫಾರಸ್ಸುಗಳು ಧೂಳು ತಿನ್ನುತ್ತಿವೆ.

ದಲಿತರ ಪರಿಸ್ಥಿತಿ ಕೇಳುವುದೇ ಬೇಡ ರಾಜ್ಯದಲ್ಲಿ 17.8ರಷ್ಟು ಜನ ದಲಿತರಿದ್ದರೂ ಕಳೆದ 5 ವರ್ಷಗಳ ಅವಧಿಯಲ್ಲಿ ದಲಿತರಿಗಾಗಿ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಮಾಡಿರುವ ವೆಚ್ಚ ಒಟ್ಟು ವೆಚ್ಚದ ಶೇ.0.69 ಮಾತ್ರ ಅಂದರೆ ಶೇ.1 ಪಾಲು ಕೂಡ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಸಂಘಟಿತ ಕಾರ್ಮಿಕರು, ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಬೀದಿ ಬದಿ ವ್ಯಾಪಾರಿಗಳು, ಆಟೋರಿಕ್ಷಾ, ಚಾಲಕರು, ಸ್ಲಂ ನಿವಾಸಿಗಳು ಹೀಗೆ ವಿವಿಧ ಸಮುದಾಯಗಳಿಗೆ ಸಂಬಂಧಿಸಿದ ಹಲವು ಪ್ರಶ್ನೆಗಳಲ್ಲಿ ಸಿಪಿಐ(ಎಂ) ತನ್ನ ಶಕ್ತಿ ಮೀರಿ ಹೋರಾಟ ನಡೆಸಿದೆ. ಈಗ ಜನರ ಬದುಕಿನ ಪ್ರಶ್ನೆಗಳ ಆಧಾರದಲ್ಲಿ ಚುನಾವಣಾ ಕಣಕ್ಕೂ ಇಳಿದಿದೆ. ಸಿಪಿಐ(ಎಂ) ಪಕ್ಷ ದೆಹಲಿ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿದೆ. ಕರೋಲ್ ಬಾಗ್ (ಎಸ್.ಸಿ) ಕ್ಷೇತ್ರ ಸೇರಿದಂತೆ ಒಟ್ಟು 4 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ ಸಿಪಿಐ(ಎಂ) ಕೋಮುವಾದಿ ಬಿಜೆಪಿಯನ್ನು ತಿರಸ್ಕರಿಸಿ, ಜನವಿರೋಧಿ ಕಾಂಗ್ರೆಸ್ ಅನ್ನು ಸೋಲಿಸಿ ಎನ್ನುವ ಕರೆಯೊಂದಿಗೆ ತತ್ವಬದ್ಧ ಹೋರಾಟ ನಡೆಸುತ್ತಿದೆ.

ಜಗದಗಲ

ಶರತ್‌ಚಂದ್ರ

ಗಾಜಾ ಪಟ್ಟಿಯ ದಿಗ್ಭಂಧನ - ಅಮಾನವೀಯ ದುರಂತ

ಪ್ಯಾಲೆಸ್ಟೈನ್ ನ ಗಾಜಾ ಪಟ್ಟಿ ಮೇಲೆ ಎರಡು ವಾರಗಳಿಂದ ಇಸ್ರೇಲ್ ಪೂರ್ಣ ಪ್ರಮಾಣದ ದಿಗ್ಬಂಧನ ಹೊರಿಸಿದೆ. ಗಾಜಾ ಪಟ್ಟಿಗೆ ಹೋಗುವ ಎಲ್ಲಾ ದಾರಿಗಳನ್ನು ಪೂರ್ತಿಯಾಗಿ ಮುಚ್ಚಲಾಗಿದೆ. ಆಹಾರ, ಔಷಧಿ, ಅಡುಗೆ ಇಂಧನ ಮತ್ತಿತರ ಅಗತ್ಯ ವಸ್ತುಗಳನ್ನೂ ಬಿಡಲಾಗುತ್ತಿಲ್ಲ. ಇದು ಈಗಾಗಲೇ ವರ್ಷಗಳಿಂದ ಒಂದಿಲ್ಲೊಂದು ರೂಪದ ದಿಗ್ಬಂಧನದಿಂದ ತತ್ತರಿಸುತ್ತಿರುವ ಗಾಜಾ ಪಟ್ಟಿಯ 15 ಲಕ್ಷ ಜನರನ್ನು ತೀವ್ರ ಅಮಾನವೀಯ ದುರಂತಕ್ಕೆ ತಳ್ಳಿದೆ. ಈ ಪ್ರದೇಶದಲ್ಲಿ ಕೆಲವು ದಿನಗಳಿಗೆ ಬೇಕಾದ ಆಹಾರ ಮಾತ್ರ ಇದೆ. ವಿಶ್ವ ಸಂಸ್ಥೆಯ ನಿರಾಶ್ರಿತರ ಪರಿಹಾರ ಕಮಿಶನರ್ ಸಿಬ್ಬಂದಿ ಗಾಜಾ ಪಟ್ಟಿಯ ಅರ್ಧಕ್ಕೂ ಹೆಚ್ಚು ಜನರಿಗೆ ತುರ್ತು ರೇಶನ್ ಒದಗಿಸುತ್ತಾರೆ. ಕಮಿಶನರ್ ಈ ದಿಗ್ಬಂಧನ ವಿಶ್ವ ಸಂಸ್ಥೆಯ ದಿಗ್ಬಂಧನ ಸಹ ಎಂದಿದ್ದಾರೆ. ಅತ್ಯಂತ ತುರ್ತು ಅಗತ್ಯ ಇರುವ 60 ಸಾವಿರ ನಿರಾಶ್ರಿತರಿಗೂ ಒದಗಿಸಲು ಆಹಾರ ನಮ್ಮ ಬಳಿ ಇಲ್ಲ ಎಂದು ಕಮಿಶನರ್ ಹೇಳಿದ್ದಾರೆ.

ಗಾಜಾದ ಶೇ. 70 ಭಾಗ ವಿದ್ಯುತ್ ಕಡಿತದಿಂದ ಕತ್ತಲಲ್ಲಿದೆ. ವಿದ್ಯುತ್ ಜನರೇಟರ್‌ಗೆ ಬೇಕಾದ ಡಿಸೀಲ್ ಮೇಲೆ ಸಹ ದಿಗ್ಬಂಧನ ಹೊರಿಸಿದೆ. ಇಸ್ರೇಲಿನಿಂದ ಬರುವ ವಿದ್ಯುತ್ತನ್ನು ಕಡಿದು ಹಾಕಲಾಗಿದೆ. ಅಡುಗೆ ಅನಿಲದ ತೀವ್ರ ಅಭಾವ ಸಹ ಉಂಟಾಗಿದೆ. 300 ಅಗತ್ಯ ಔಷಧಿಗಳ ಅಭಾವದಿಂದ ಆರೋಗ್ಯ ತುರ್ತು ಪರಿಸ್ಥಿತಿ ಉಂಟಾಗಿದೆ.

ವಿದ್ಯುತ್ ಅಭಾವದಿಂದ ತೀರಾ ತುರ್ತಾಗಿರುವ ಆಪರೇಷನ್‌ಗಳನ್ನು ಮಾತ್ರ ಮಾಡಲಾಗುತ್ತಿದೆ. ಪಂಪ್ ಮಾಡಲು ವಿದ್ಯುತ್ ಇಲ್ಲದೆ ನೀರಿನ ತೀವ್ರ ಅಭಾವ ಸಹ ಉಂಟಾಗಿದೆ. ಹಲವು ಬಿಡಿಭಾಗಗಳ ಅಭಾವದಿಂದ ಕಲ್ಮಷ ನಿರ್ಮೂಲನ ಜಾಲ ಕುಸಿದು ಬಿದ್ದಿದೆ. ಇಸ್ರೇಲಿ ಬ್ಯಾಂಕುಗಳು ಗಾಜಾದಿಂದ ಯಾವುದೆ ಹಣಕಾಸು ವ್ಯವಹಾರ ನಿರಾಕರಿಸಿ, ಆರ್ಥಿಕ ದಿಗ್ಬಂಧನ ಸಹ ಹೇರಲಾಗಿದೆ.

ಗಾಜಾ ಕತ್ತಲು ಕವಿದ ಹಸಿವಿನ ಚಳಿಗಾಲದಲ್ಲಿ ನರಳುವುದು ಯಾರಿಗೆ ಗೊತ್ತಾಗದಂತೆ ಮತ್ತು ಇಸ್ರೇಲಿನ ನರಮೇಧ ಯಾರಿಗೂ ಕಾಣದಂತೆ ಎಲ್ಲಾ ಸುದ್ದಿ ಮಾಧ್ಯಮಗಳ ಕಣ್ಣು-ಬಾಯಿ ಮುಚ್ಚಿಸಿದೆ. ಗಾಜಾ ಪ್ರದೇಶಕ್ಕೆ ಯಾವುದೇ ಪತ್ರಕರ್ತ ಪ್ರವೇಶ ಮಾಡದಂತೆ, ಯಾವುದೇ ಸುದ್ದಿ ಕಳಿಸದಂತೆ ಎಲ್ಲಾ 'ಬಂದೋಬಸ್ತ್' ಮಾಡಲಾಗಿದೆ. ವಿದೇಶಿ ಪತ್ರಕರ್ತರ ಸಂಘ ಅಧಿಕೃತವಾಗಿ ಪ್ರತಿಭಟಿಸುವಷ್ಟು ಅದು ತೀವ್ರವಾಗಿದೆ. ಯುರೋಪಿನ ಪಾರ್ಲಿಮೆಂಟಿನ ಸದಸ್ಯರ ಗುಂಪಿನ ಗಾಜಾ ಭೇಟಿಯನ್ನು ಸಹ ತಡೆಯಿತು. ಆದರೆ ಆ ಗುಂಪು ಇಸ್ರೇಲಿ ಸೈನ್ಯ ಮತ್ತು ನೌಕಾ ಸೈನ್ಯ ಧಿಕ್ಕರಿಸಿ ಗಾಜಾ ಪಟ್ಟಿಗೆ ಭೇಟಿ ನೀಡಿ ಹಾಮಾಸ್ ನಾಯಕರ ಜತೆ ಮಾತುಕತೆ ನಡೆಸಿತು. 20 ಯುರೋಪಿನ ಕೌನ್ಸಲ್ ಜನರಲ್‌ಗಳ ತಂಡದ ಭೇಟಿಯನ್ನು ಸಹ ಇಸ್ರೇಲಿ ಸರ್ಕಾರ ತಡೆಯಿತು.

ಇವೆಲ್ಲಾ ಆರಂಭವಾಗಿದ್ದು ಇಸ್ರೇಲ್ ಮತ್ತು ಗಾಜಾ ಪಟ್ಟಿಯಲ್ಲಿ ಪ್ರಬಲ ಜನಬೆಂಬಲ ಇರುವ ಹಾಮಾಸ್ ನಡುವಿನ ಸುಮಾರು ಐದು ತಿಂಗಳ ಮಾತುಕತೆ ನವಂಬರ್ ಮೊದಲ ವಾರದಲ್ಲಿ ಮುರಿದು ಬಿದ್ದಾಗ. ಗಾಜಾ ಪಟ್ಟಿಯಿಂದ ರಾಕೆಟ್‌ಗಳು ಹಾರುತ್ತಿವೆ ಎಂದು ಆಪಾದಿಸಿ ಇಸ್ರೇಲಿ ಸರ್ಕಾರ ಗಾಜಾ ಜನತೆಗೆ 'ಬುದ್ಧಿ ಕಲಿಸಲು' ಈ ದಿಗ್ಭಂಧನ ಆರಂಭಿಸಿತು. ಕದನ ವಿರಾಮವನ್ನು ಮೊದಲು ಮುರಿದದ್ದು ಇಸ್ರೇಲಿ ಸೈನ್ಯ ಎಂದು ಮಾತ್ರ ಅವರು ಮರೆ ಮಾಚುತ್ತಿದ್ದಾರೆ. ಇಸ್ರೇಲಿನ ಈ ದಿಗ್ಭಂಧನ ನೀತಿ ಅಂತರ್ರಾಷ್ಟ್ರೀಯ ಖಂಡನೆಗೆ ಗುರಿಯಾಗಿದ್ದರೂ ಅದಕ್ಕೆ ಸೊಪ್ಪು ಹಾಕುತ್ತಿಲ್ಲ.

ಇಸ್ರೇಲಿ ಅತಿಕ್ರಮಣದ ವಿರುದ್ಧ ಪ್ರತಿರೋಧ ಒಡ್ಡಿರುವ ಹಾಮಾಸನ್ನು ನಾಶ ಮಾಡುವ ಪ್ರಾಜೆಕ್ಟ್‌ನಲ್ಲಿ ಅಮೆರಿಕ ಮತ್ತು ಯುರೋಪಿಯನ್ ಒಕ್ಕೂಟ ಗಾಜಾ ಪಟ್ಟಿಯ ದಿಗ್ಬಂಧನದ ನೀತಿಗೆ ಪ್ರತ್ಯಕ್ಷ-ಪರೋಕ್ಷ ಬೆಂಬಲ ನೀಡಿತ್ತು. ಈಗಲೂ ನಿರ್ಣಾಯಕವಾಗಿ ಅವು ಒತ್ತಡ ಹಾಕಿದರೆ ಇಸ್ರೇಲ್ ಈ 'ನರಮೇಧ'ದ ನೀತಿ ಮುಂದುವರೆಸಲು ಸಾಧ್ಯವಾಗುವುದಿಲ್ಲ.

ಬಾಗ್ದಾದ್‌ನಲ್ಲಿ ಬುಶ್‌ಗೆ ನೇಣು !

ಅಮೆರಿಕದ ಸೈನ್ಯ 2011 ರ ವರೆಗೆ ಇರಾಕ್ ನಲ್ಲಿ ಮುಂದುವರೆಯಲು ಅವಕಾಶ ಮಾಡುವ ಒಪ್ಪಂದಕ್ಕೆ ಕೈಗೊಂಬೆ ಸರ್ಕಾರ ಸಹಿ ಹಾಕಿದೆ. ಅದು ಇನ್ನೂ ಪಾರ್ಲಿಮೆಂಟಿನ ಮುಂದೆ ಬರಬೇಕಾಗಿದೆ. ಈ ಒಪ್ಪಂದದ ವಿರುದ್ಧ ಭಾರೀ ಪ್ರತಿಭಟನೆ ವ್ಯಕ್ತವಾಗಿದೆ. ಅಲ್-ಸದರ್ ಎಂಬ ಸಂಘಟನೆ ಸಂಘಟಿಸಿದ ಈ ಪ್ರತಿಭಟನೆಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ರ‍್ಯಾಲಿಯಲ್ಲಿ ಮುಸುಕು ಹಾಕಿದ ಬುಶ್ ಗೊಂಬೆಯನ್ನು ನೇಣಿಗೇರಿಸಲಾಯಿತು. ಅದೂ ಅಮೆರಿಕನ್ ಅತಿಕ್ರಮಣದ ನಂತರ ಸದ್ದಾಂ ಹುಸೇನ್ ಮೂರ್ತಿಯನ್ನು ಉರುಳಿಸಿದ ಸ್ತಂಭದಿಂದಲೇ ಬುಶ್‌ಗೆ ನೇಣು ಆಯಿತು!

'ಆಫ್ರಿಕಾದ ಅಮ್ಮ' ಮಿರಿಯಂ ಮಕೇಬಾ ಇನ್ನಿಲ್ಲ

'ಆಫ್ರಿಕಾದ ಅಮ್ಮ' ಎಂಬ ಬಿರುದನ್ನು ಜಗತ್ತಿನ ಜನತೆಯಿಂದ ಪಡೆದ ದಕ್ಷಿಣ ಆಫ್ರಿಕಾದ ಗಾಯಕಿ ಮಿರಿಯಂ ಮಕೇಬಾ ಇನ್ನಿಲ್ಲ. ಆಕೆ ತನ್ನ ಇಚ್ಛೆಯಂತೆ ಕೊನೆಯ ಉಸಿರು ಇರುವವರೆಗೂ ಹಾಡುತ್ತಲೇ ಸತ್ತರು. ಇಟಲಿಯಲ್ಲಿ ಒಂದು ಸಭೆಯಲ್ಲಿ ಹಾಡುತ್ತ ಅಸ್ವಸ್ಥರಾದ ಮಿರಿಯಂ ಹೃದಯಾಘಾತದಿಂದ ನಿಧನರಾದರು. ಸಭೆ ಘಾನಾದ ಆರು ವಲಸೆಗಾರರ ಕೊಲೆಗೆ ಪ್ರತಿಭಟನೆಯಾಗಿ ಏರ್ಪಟ್ಟಿತ್ತು. ಅಂದರೆ ಕೊನೆಯವರೆಗೂ ಮಿರಿಯಂ ಗಾಯಕಿ-ಸಕ್ರಿಯ ಕಾರ್ಯಕರ್ತೆಯ ಎರಡೂ ಪಾತ್ರ ಶ್ರದ್ಧೆಯಿಂದ ನಿರ್ವಹಿಸಿದರು.



1960 ರಿಂದ 1990 ರ ವರೆಗೆ ತಮ್ಮ ದೇಶದಿಂದ ಉಚ್ಚಾಟಿಸಲ್ಪಟ್ಟು ವಿದೇಶಗಳಲ್ಲಿ ನೆಲೆಸಿದ ಮಿರಿಯಂ, ದಕ್ಷಿಣ ಆಫ್ರಿಕಾದ ವರ್ಣಭೇಧದ ವಿರುದ್ಧ ತಮ್ಮ ಹಾಡುಗಳ ಮೂಲಕ ಹೋರಾಟ ಮಾಡಿದರು. 'ಆಕೆ ನಮ್ಮ ಹೋರಾಟದ ಮತ್ತು ನಮ್ಮ ಯುವರಾಷ್ಟ್ರದ ತಾಯಿ ಆಗಿದ್ದಳು... ಆಕೆ 31 ವರ್ಷಗಳ ಕಾಲ ದೇಶಾಂತರದಿಂದ ಅನುಭವಿಸಿದ ನೋವು ಮತ್ತು ಪರಕೀಯತೆ, ಸದಾ ಕಾಡುವ ಹಾಡುಗಳಾಗಿ ಹೊಮ್ಮಿವೆ' ನೆಲ್ಸನ್ ಮಂಡೇಲಾ ಮಿರಿಯಂಗೆ ಅರ್ಪಿಸಿದ ಶ್ರದ್ಧಾಂಜಲಿಯೇ ಆಕೆಯ ಜೀವನದ ಸಾರ್ಥಕ್ಯದ ಬಗ್ಗೆ ಹೇಳುತ್ತದೆ.

1932 ರಲ್ಲಿ ಜೋಹೆನ್ಸ್‌ಬರ್ಗ್‌ನಲ್ಲಿ ಹುಟ್ಟಿದ ಮಿರಿಯಂ ಗಾಯಕಿಯಾಗಿ ದಕ್ಷಿಣ ಆಫ್ರಿಕಾ ಮಾತ್ರವಲ್ಲ, ಅಂತರ್ರಾಷ್ಟ್ರೀಯ ಖ್ಯಾತಿ ಯಶಸ್ಸು ಗಳಿಸಿದರು. ಆಕೆಯ 1967 ರ ಅಲ್ಬಂ 'ಪಟಾ-ಪಟಾ' ಕರಿಯ ಗಾಯಕಿಯ ಮೊದಲ ಅಮೆರಿಕದ ಟಾಪ್-20 ಅಲ್ಬಂ ಆಗಿತ್ತು. ಆದರೆ ಆಕೆಯ ರಾಜಕೀಯ ನಂಬಿಕೆ, ನೇರ ನಡೆ-ನುಡಿ ಆಕೆಯನ್ನು ಬರಿಯ ಗಾಯಕಿಯಾಗಿರಲು ಬಿಡಲಿಲ್ಲ. ಆಕೆ ತಾನು ಬರಿಯ ಗಾಯಕಿ ಎಂದರೂ ರಾಜಕೀಯ ಕಾರ್ಯಕರ್ತೆಯೂ ಆದರು. ಅಮೆರಿಕನ್ ಕರಿಯ ರ‍್ಯಾಡಿಕಲ್ ಕರಿಮಚೇಲ್ ಜತೆ ಆಕೆಯ ಮದುವೆಯೊಂದಿಗೆ ರಾಜಕೀಯ-ಸಂಗೀತ ಎರಡೂ ಜೀವನದ ಭಾಗವಾಯಿತು. ದಕ್ಷಿಣ ಆಫ್ರಿಕಾದ ವರ್ಣಭೇದ ಸರ್ಕಾರದ ವಿರುದ್ಧ ದಿಟ್ಟ ನಿಲುವಿನಿಂದ ಆಕೆಯನ್ನು 1960 ರಲ್ಲಿ ದೇಶದಿಂದ ಉಚ್ಚಾಟನೆ ಮಾಡಲಾಯಿತು. ಪತಿ ಕರಿಮಚೇಲ್ ಜತೆ ಕ್ಯೂಬಾ ಪ್ರವಾಸದಿಂದ ಆಕೆ ಅಮೆರಿಕನ್ ಸರ್ಕಾರ ಮತ್ತು ಸಂಗೀತ ಉದ್ಯಮವನ್ನೂ ಎದುರು ಹಾಕಿಕೊಳ್ಳ ಬೇಕಾಯಿತು. ಆಕೆ ಹಲವು ವರ್ಷಗಳ ಕಾಲ ಗಿನಿಯಲ್ಲಿ ನೆಲೆಸಿದರು. 60ರ ದಶಕದಿಂದ 80ರ ದಶಕದವರೆಗೆ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಮತ್ತು ವರ್ಣಭೇಧ-ವಿರೋಧೀ ಆಂದೋಲನದ ದನಿಯಾಗಿದ್ದರು.

ವಿಧಾನಸಭಾ ಚುನಾವಣೆಗಳು.....

ಪುಟ 13 ರಿಂದ

ಇಲ್ಲದ ಕಡೆಗಳಲ್ಲಿ ಬಿಎಸ್‌ಪಿ ಹಾಗೂ ಜೆಡಿ(ಎಸ್) ಅಭ್ಯರ್ಥಿಗಳಿಗೆ ಬೆಂಬಲ ನೀಡಿದೆ.

'ಮಧ್ಯಪ್ರದೇಶ': ವಿದ್ಯುತ್ ಕಣ್ಣು ಮುಚ್ಚಾಲೆ, ಕುಡಿಯುವ ನೀರಿನ ಕೊರತೆ, ಹದಗೆಟ್ಟ ರಸ್ತೆಗಳು, ಮತ್ತಷ್ಟು ಕುಸಿದ ಜನಾರೋಗ್ಯ ಪರಿಸ್ಥಿತಿ, ಸಾಮಾಜಿಕ ಪ್ರಗತಿ ಕುಂಠಿತ. ಇದು ಬಿಜೆಪಿ ಆಳ್ವಿಕೆಯ ಮಧ್ಯಪ್ರದೇಶ ಪರಿಸ್ಥಿತಿ.

ರಾಜ್ಯದಲ್ಲಿ 3 ವರ್ಷದೊಳಗಿನ ಮಕ್ಕಳಲ್ಲಿ ಶೇ.60 ರಷ್ಟು ಮಕ್ಕಳು ಪೋಷಕಾಂಶದ ಕೊರತೆಯಿಂದ ನರಳುತ್ತಿದ್ದಾರೆ. ರಾಜ್ಯದ ಮಂತ್ರಿಗಳೇನು ಮಾಡುತ್ತಿದ್ದಾರೆ. 13 ಜನ ಮಂತ್ರಿಗಳು ಭ್ರಷ್ಟಾಚಾರದ ಪ್ರಕರಣದಲ್ಲಿ ಸಿಲುಕಿಕೊಂಡು ಒದ್ದಾಡುತ್ತಿದ್ದಾರೆ. ಪಾಪ ಅವರಿಗೆ ಈ ವಿಷಯದ ಬಗೆಗೆ ಗಮನಿಸುವುದಕ್ಕೆ ಪುರುಸೊತ್ತಾದರೂ ಎಲ್ಲಿದೆ? ಸ್ವತಃ ಮುಖ್ಯಮಂತ್ರಿ ಮತ್ತು ಅವರ ಪತ್ನಿ ಮೇಲೆ ಲಂಚವಾಗಿ ನಾಲ್ಕು ಕೋಟಿ ರೂಪಾಯಿಗಳ ಬೆಲೆಯ ಆಮಿಷ ಸ್ವೀಕರಿಸಿದ ಆಪಾದನೆ ಎದುರಿಸುತ್ತಿದ್ದಾರೆ. ಆಹಾ!! ಮಧ್ಯಪ್ರದೇಶದ ಜನರ ಭಾಗ್ಯವೇ ಭಾಗ್ಯ. ಮೊದಲಿಗೆ ಮುಖ್ಯಮಂತ್ರಿಯಾಗಿದ್ದ ಉಮಾಭಾರತಿಯವರದ್ದು ಗುಡಿ ಗುಂಡಾಗಳಿಗೆ



ಭೇಟಿ, ಪೂಜೆ ಪುನಸ್ಕಾರ, ಗೋ ಪೂಜೆಗಳಲ್ಲೇ, ಕಾಲ ಕಳೆಯಿತು. ಈಗಿನ ಶಿವರಾಜ್‌ಸಿಂಗ್ ಬಿಜೆಪಿಯ ಮೂರನೇ ಮುಖ್ಯಮಂತ್ರಿ. ಯಾರೇ ಬಂದರೂ ಜನರ ಭಾಗ್ಯ ಮಾತ್ರ ಅದೇ.

ಎಂದಿನಂತೆ ಕಾಂಗ್ರೆಸ್ ಪಕ್ಷ ಇಲ್ಲೂ ಎಲ್ಲ ಕಡೆಯಂತೆ. ಅಂದರೆ ವಿರೋಧ ಪಕ್ಷ ಎಂಬುದನ್ನೇ ಮರೆತುಬಿಟ್ಟಂತೆ ಕಾಣುತ್ತದೆ. ರಾಜ್ಯದಲ್ಲಿ ಎಡಪಕ್ಷಗಳು ಅಂತಹ ಬಲಿಷ್ಠ ಶಕ್ತಿಯೇನಲ್ಲ. ಸಣ್ಣ ಪಕ್ಷಗಳು, ತಮ್ಮ ಶಕ್ತ್ಯಾನುಸಾರ ಚಳವಳಿ, ಹೋರಾಟ ನಡೆಸಿವೆ. ಸಿಪಿಐ(ಎಂ) ಪಕ್ಷ ಇಲ್ಲಿ 12 ಕಡೆಗಳಲ್ಲಿ ಸ್ಪರ್ಧಿಸುತ್ತಿದೆ ಅದರಲ್ಲಿ 2 ಎಸ್.ಟಿ. ಮೀಸಲು ಕ್ಷೇತ್ರ. 1 ಎಸ್.ಸಿ. ಮೀಸಲು ಕ್ಷೇತ್ರ. ರಾಮ್‌ಪುರ್ ಬಾಘೈಲನ್ ಕ್ಷೇತ್ರ ಸಾಮಾನ್ಯ ಕ್ಷೇತ್ರ. ಈ ಸಾಮಾನ್ಯ ಕ್ಷೇತ್ರದಲ್ಲಿ ಸಿಪಿಐ(ಎಂ) ದಲಿತ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ.

ಛತ್ತೀಸ್‌ಗಡ: ನೆರೆಯ ಛತ್ತೀಸ್‌ಗಡ ರಾಜ್ಯದಲ್ಲಿ ಒಟ್ಟು 7 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ.

ಈ ವಾರ... ಜೆಡಿ(ಎಸ್)ನ ಪುನಶ್ಚೇತನ....

ಪುಟ 3 ರಿಂದ

ಇದರೊಂದಿಗೇ ಮಾಧ್ಯಮದೊಳಗೆ ಅಡಗಿರುವ ಕೇಸರಿ ಪಡೆಯ ಕಾರ್ಯಾಚರಣೆಗೆ ಇದೂ ಒಂದು ಒಳ್ಳೆಯ ಉದಾಹರಣೆ. ರಾಜ್ಯ ಸರ್ಕಾರದ ವೈಫಲ್ಯಗಳು ಎಲ್ಲೂ ಕಾಣದಂತೆ ಮುಚ್ಚಿದ ಪರಿಣಿತತ್ವ ಅವರದ್ದು.

ಪ್ರಜಾಸತ್ತಾತ್ಮಕ ಹಕ್ಕಿನ ಮೇಲೆ ತೂಗುವ ಕತ್ತಿ

ಇದೇ ಸಂದರ್ಭವನ್ನು ಬಳಸಿ ರಾಜಧಾನಿಯಲ್ಲಿ ಯಾವುದೆ ರ್‍ಯಾಲಿ-ಪ್ರತಿಭಟನಾ ಸಮಾವೇಶ ನಡೆಸದಂತೆ ನಿಷೇಧಿಸುವ ಯತ್ನಗಳ ಬಗ್ಗೆ ಪ್ರಜಾಸತ್ತಾತ್ಮಕ ಶಕ್ತಿಗಳು ಎಚ್ಚರ ವಹಿಸಬೇಕಿದೆ. ಇಂತಹ ಮೊಕದ್ದಮೆಯೊಂದು ಈಗಾಗಲೇ ನ್ಯಾಯಾಲಯದಲ್ಲಿದೆ. ತೀರ್ಪಿನ ಕತ್ತಿ ಪ್ರಜಾಪ್ರಭುತ್ವದ ಕುತ್ತಿಗೆಗೆ ಬಿದ್ದೀತೆ, ಇಲ್ಲ ರಕ್ಷಣೆಯ ಗುರಾಣಿಯಾಗಿ ಸಿಕ್ಕೀತೆ? ಈ ಆತಂಕ ಎಲ್ಲರದು.

ಇನ್ನೆಷ್ಟು ಬಲಿಗಳು?

ಮಲೆನಾಡಿನ ಹಸಿರು ಕಾನನದಲ್ಲಿ ಮತ್ತೆ ರಕ್ತ ಚೆಲ್ಲಿದೆ. ನವೆಂಬರ್ 19ರಂದು ಹೊರನಾಡಿನ ಪ್ರದೇಶದಲ್ಲಿ 'ಮಾವೋವಾದಿ' ನಕ್ಸಲೀಯರು ಹಾಗೂ ಪೋಲೀಸರ ನಡುವೆ ನಡೆದ 'ಗುಂಡಿನ ಚಕಮಕಿ'ಯಲ್ಲಿ ಮೂವರು ನಕ್ಸಲೀಯರು ಒಬ್ಬ ಪೋಲೀಸರ್ ಪೇದೆ ಹತ್ಯೆಗೀಡಾಗಿದ್ದಾರೆ. ಇದು ಇಲ್ಲಿಗೆ ಮುಗಿಯಲಾರದು ಎಂಬ ಸೂಚನೆಗಳು ಅದೇ ಹೊತ್ತಿನಲ್ಲಿ ವ್ಯಕ್ತವಾಗಿದೆ.

ತುಂಗಮೂಲ ಉಳಿಸಿ, ಕುದುರೆ ಮುಖ ರಾಷ್ಟ್ರೀಯ ಉದ್ಯಾನವನ ರಕ್ಷಿಸಿ, ಬುಡಕಟ್ಟು ಜನರ ಪ್ರಶ್ನೆಗಳು ಕೋಮುವಾದ, ಇತ್ಯಾದಿಗಳನ್ನಿಟ್ಟುಕೊಂಡು ಮಲೆನಾಡಿನ ದಟ್ಟ ಕಾಡುಗಳನ್ನು ತಮ್ಮ ಅಡಗುದಾಣಗಳನ್ನಾಗಿಸಿ ಕೊಂಡು ಮಾವೋವಾದಿಗಳು ಕಾರ್ಯವೆಸಗುತ್ತಿದ್ದಾರೆ. ಇಂತಹ ಪ್ರಶ್ನೆಗಳಿಗೆ ಜನತೆಯ ವಿಶಾಲ ಪ್ರಜಾಸತ್ತಾತ್ಮಕ ಚಳವಳಿಯನ್ನು ಕಟ್ಟದೇ ಹಾದಿ ತಪ್ಪಿದ ದುಸ್ಸಾಹಸವಾದೀ ಮಾರ್ಗದಿಂದಾಗಿ ಅನೇಕ ಪ್ರತಿಭಾವಂತ, ಯುವ ಜೀವಗಳನ್ನು ಬಲಿಕೊಡಲಾಗುತ್ತಿದೆ. ಸಾಕೇತ್ ರಾಜನ್ ಇತರರ ಹತ್ಯೆ ಸಂಭವಿಸಿದಾಗಲೇ ಪುನರ್ ಆಲೋಚಿಸಿ ತಪ್ಪು ಹಾದಿ ಬಿಡಲು ಆಗ್ರಹಿಸಿದ್ದರು. ಆದರೆ ಜಗತ್ತು ಬದಲಾಗುತ್ತಿದ್ದರೂ ಬದಲಾಗುವ ಈ ಜಗತ್ತಿನಲ್ಲಿ ತಾವು ಬದಲಾಗಬೇಕಾದವರಲ್ಲ ಎಂದೇ ಭಾರತದ 'ಮಾವೋವಾದಿ'ಗಳು ಭಾವಿಸಿದಂತಿದೆ. ಹೀಗಾಗಿಯೇ ಸಾಮಾಜಿಕ -ಆರ್ಥಿಕ ನ್ಯಾಯ, ಕೋಮುವಾದದ ವಿರುದ್ಧ ತಮ್ಮದೇ ಏಕೈಕ ರಾಜೀ ಇಲ್ಲದ ಹೋರಾಟ ಎಂದು ವಾದಿಸುವ ಇದೇ ಮಾವೋವಾದಿಗಳು ನಂದಿಗ್ರಾಮ, ಸಿಂಗೂರ್‌ಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ವಕ್ತಾರರಾದ ಘಾತುಕ ಗೂಂಡಾಪಡೆ ತೃಣಮೂಲ ಕಾಂಗ್ರೆಸ್ ನಂತಹವರ ಜೊತೆಗೆ, ಇನ್ನೊಂದೆಡೆ ಅವರೇ ಹೇಳುವ ಫ್ಯಾಸಿಸ್ಟ್ ಬಿಜೆಪಿ-ಸಂಘಪರಿವಾರದ ಜೊತೆ ಕೈಜೋಡಿಸಿ ಸಿಪಿಐ(ಎಂ)ನ ನಾಶ ಮಾಡಲು ತಮ್ಮದೇ ಬ್ರಾಂಡ್ ನ 'ಕ್ರಾಂತಿಕಾರಿ ಮಹಾಮೈತ್ರಿ ಸಾಧಿಸಿ ಸೈದ್ಧಾಂತಿಕ, ರಾಜಕೀಯ ದಿವಾಳಿಯನ್ನು ಪ್ರದರ್ಶಿಸಿದ್ದಾರೆ. ಇಂತಹ ಸುರ್‌ಸುರ್ ಬತ್ತಿಯ ಕ್ರಾಂತಿಗೆ ಇನ್ನೆಷ್ಟು ಜನ ಬಲಿಯಾಗಬೇಕು ಎಂಬುದೇ ಪ್ರಶ್ನೆ!

ಇದೇ ಹೊತ್ತಿನಲ್ಲಿ ಸರ್ಕಾರ ನಕ್ಸಲೀಯ ಸಮಸ್ಯೆಗೆ ಆರ್ಥಿಕ ರಾಜಕೀಯ-ಸಾಮಾಜಿಕ ಪ್ರಶ್ನೆಗಳೇ ಮೂಲವಾಗಿದ್ದು, ಅವುಗಳನ್ನು ಇತ್ಯರ್ಥವಾಗಿಸಿದರೆ ಸಮಸ್ಯೆ ನಿವಾರಣೆಯಾಗುತ್ತದೆಂಬ ಗಿಣಿ ಪಾಠ ಒಪ್ಪಿಸುತ್ತಲೇ, ಕನಿಷ್ಠ ತಾನೇ ಪ್ರಕಟಿಸಿದ ಪ್ಯಾಕೇಜ್ ಭರವಸೆಗಳನ್ನು ಈಡೇರಿಸದೇ ವಂಚಿಸುತ್ತಿದೆ. ಜನತೆಯ ಮನಗೆಲ್ಲುವ, ನಕ್ಸಲೀಯರನ್ನು ದೂರವಿಡುವ ಒಂದು ಪ್ರಜಾಸತ್ತಾತ್ಮಕ ಪರಿಹಾರದ ಬದಲು ಗುಂಡಿನಿಂದಲೇ ಎಲ್ಲವನ್ನು ಬಗೆಹರಿಸುವ ಯತ್ನ ನಡೆಸುತ್ತಿದೆ.

ಒಂದೆಡೆ ನಕ್ಸಲೀಯರು ಇನ್ನೊಂದೆಡೆ ಕಾರ್ಯಾಚರಣೆ ಪಡೆ ಇವುಗಳ ನಡುವೆ ತತ್ತರಿಸುತ್ತಿರುವ ಜನ.

ಇಂದು ಅಲ್ಲಿ ಬೇಕಿರುವುದು ಸಮಸ್ಯೆಗಳಿಗೆ ಪರಿಹಾರ. ಹಾದಿ ತಪ್ಪಿದ ನಕ್ಸಲೀಯರ ಹಾದಿ ತಿರಸ್ಕಾರ. ಬಲಗೊಳ್ಳಬೇಕಾದ ಜನತೆಯ ಪ್ರಜಾಸತ್ತಾತ್ಮಕ ಚಳುವಳಿ.

ಪ್ರಧಾನಿಗಳ ತಿರುಕಾ ಕಾಸು...

ಪುಟ 7 ರಿಂದ

ಮಾರ್ಗವನ್ನು ಹಿಡಿಯುವ ಸಂಭವ ಕಡಿಮೆ.

ಎರಡನೆ ಮಹಾಯುದ್ಧದ ನಂತರ ಬ್ರೆಟನ್‌ವುಡ್ ಸಮ್ಮೇಳನದಿಂದ ಮೂಡಿ ಬಂದ ಸಂಸ್ಥೆಗಳಿಗೆ, ಐಎಂಎಫ್. ಮತ್ತು ವಿಶ್ವಬ್ಯಾಂಕ್‌ಗಳಿಗೆ ಹಣಕಾಸು ಬಂಡವಾಳದ ಪ್ರಾಬಲ್ಯಕ್ಕೆ ಒಳಗಾಗಿರುವ ಈಗಿನ ಜಾಗತಿಕ ಆರ್ಥಿಕವನ್ನು ನಿರ್ವಹಿಸಲು ಇನ್ನು ಮುಂದೆ ಸಾಧ್ಯವಿಲ್ಲ. ಅವನ್ನು ಖಂಡಿತಾ ಪುನರ್‌ರಚಿಸ ಬೇಕಾಗುತ್ತದೆ. ಅಂದರೆ ಅವುಗಳ ಮೇಲೆ ಈಗ ಇರುವ ಜಿ-7 ಶ್ರೀಮಂತ ದೇಶಗಳ ಕೂಟದ ಕಪಿ ಮುಷ್ಟಿಯನ್ನು ಅಂತ್ಯಗೊಳಿಸಿ ಅವುಗಳನ್ನು ಪ್ರಜಾಪ್ರಭುತ್ವೀಕರಿಸಬೇಕು. ಕೆಲವು "ಮೂಡಿ ಬರುತ್ತಿರುವ ಆರ್ಥಿಕ"ಗಳು ಎನ್ನಲಾಗುವ ಭಾರತ ಮುಂತಾದ ಕೆಲವೇ ದೇಶಗಳಿಗೆ ಈ ಕೂಟದ ಜೊತೆಗೆ ಕುಳಿತುಕೊಳ್ಳುವ ಅವಕಾಶ ದೊರೆತ ಮಾತ್ರಕ್ಕೆ ಇಂತಹ ಪ್ರಜಾಪ್ರಭುತ್ವೀಕರಣ ಸಾಧ್ಯವಾಗದು. ಡಾ.ಮನಮೋಹನ ಸಿಂಗ್‌ರಿಗೆ ಮಾತ್ರ ಇಷ್ಟರಿಂದಲೇ ತೃಪ್ತಿ ಸಿಗಬಹುದು. ಇದರಾಚೆಗೆ ಒಂದು ಅರ್ಥಪೂರ್ಣ ಪ್ರಜಾಪ್ರಭುತ್ವೀಕರಣ ಅವರಿಗೆ ಬೇಕೆನಿಸಲಿಕ್ಕಿಲ್ಲ.

ಆರ್ಥಿಕದೊಳಗೆ ದೊಡ್ಡ ಪ್ರಮಾಣದಲ್ಲಿ ಹಣ ಹರಿದು ಬರುವಂತೆ ಮಾಡಿ ಬಿಕ್ಕಟ್ಟಿನ ಮೊದಲಿನ ಜಾಗತಿಕ ಹಣಕಾಸು ಬಂಡವಾಳದ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ನಿಲುವನ್ನೆ ಮುಂದುವರೆಸಿದರೆ ಈಗ ಕಾಣುವ ಆರ್ಥಿಕ ಹಿಂಜರಿತ ಆರ್ಥಿಕ ಕುಸಿತವಾಗಿ ಬೆಳೆಯುತ್ತದೆ. ವಿಶ್ವದ ಕೋಟ್ಯಂತರ ಜನಗಳ ಆರ್ಥಿಕ ಬದುಕು ನಾಶಗೊಳ್ಳುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಭಾರತದಲ್ಲಿ ಇರುವ ನಾವು ಮನಮೋಹನ ಸಿಂಗ್ ಸರಕಾರ ತುರ್ತಾಗಿ ಗಮನಾರ್ಹ ಪ್ರಮಾಣದಲ್ಲಿ ಸರಕಾರಿ ಹೂಡಿಕೆಗಳ ಮೂಲಕ ಒಂದು ಬೃಹತ್ ಪ್ರಮಾಣದ ಸಾರ್ವಜನಿಕ ಕಾಮಗಾರಿ ಕಾರ್ಯಕ್ರಮವನ್ನು ಆರಂಭಿಸುವಂತೆ ತೀವ್ರ ಒತ್ತಡ ತರಬೇಕಾಗಿದೆ. ಭಾರತದ ಜನಸಮೂಹಗಳ ಬದುಕು ಇನ್ನಷ್ಟು ಹದಗೆಡದಂತೆ ರಕ್ಷಿಸಬೇಕಾದರೆ ಇದು ಏಕೈಕ ದಾರಿ. ಬಂಡವಾಳಶಾಹಿ ವ್ಯವಸ್ಥೆ ಶೋಷಣೆಯ ಮೇಲೆ ನಿಂತಿದ್ದು, ಬಿಕ್ಕಟ್ಟುಗಳಿಂದ ತುಂಬಿದೆ, ಮಾನವ ಕುಲದ ಎದುರು ಇರುವ ಮೂಲ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಅದಕ್ಕಿಲ್ಲ, ಬದಲಾಗಿ ಅವನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ ಎಂಬುದನ್ನು ಇಲ್ಲಿ ಮತ್ತೆ ಹೇಳಬೇಕಾಗುತ್ತದೆ. ಈ ಬಂಡವಾಳಶಾಹಿಯ ಆಚೆಗೆ ಮಾತ್ರವೇ ಅಂತಿಮ ಪರಿಹಾರ ಇದೆ.

ಅಂಗಾತ ಮಲಗಿದ ಅಂಚೆ ಕಾರ್ಡ್

ಪುಟ 16 ರಿಂದ

ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ ಆರ್ಶಿಯವರ ಸಂಶೋಧನಾ ಪ್ರಬಂಧ. ನಿರಂಜನ, ಕಟ್ಟಿಮನಿ, ವ್ಯಾಸರಾಯ ಬಲ್ಲಾಳ ಮತ್ತು ಚದುರಂಗರ ಕಾದಂಬರಿಗಳನ್ನು ಅನುಲಕ್ಷಿಸಿ ಈ ಸಂಶೋಧನೆ ಮಾಡಿದ್ದಾರೆ. ಯಾವುದೇ ಪದೋನ್ನತಿಗಾಗಿ ಮಾಡಿದ ಸಂಶೋಧನೆ ಅಲ್ಲ. ಆರ್ಶಿಯವರು ನಾಟಕಕಾರರಾಗಿಯೂ ಸಂದವರು. ಯಶವಂತನ ಯಶೋಗೀತೆ ಇವರ ಮಕ್ಕಳ ಕಾದಂಬರಿ. ವಾಜಂತಿ ಶಿಕ್ಷಕ ಪ್ರಶಸ್ತಿ; ಕೊಗ್ರೆ ಶಿಕ್ಷಣ ಪ್ರತಿಷ್ಠಾನದ ಪ್ರಶಸ್ತಿ; ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳಿಗೆ ಭಾಜನರಾದವರು ಆರ್ಶಿ.

ಗೆಳೆಯ ಅರವಿಂದ ಕರ್ಕಿಕೋಡಿ ಆಗಷ್ಟೇ ಬರೆಯಲು ಪ್ರಾರಂಭಿಸಿದ್ದ. ಅವನ ಬರಹಗಳನ್ನು ನಮ್ಮ ಆರ್ಶಿ ಗಮನಿಸಿದರು. ಹೊನ್ನಾವರದ ಟಪ್ಪರ್ ಸರ್ಕಲ್‌ನಲ್ಲಿ ಇಬ್ಬರೂ ಒಂದು ಸಂಜೆ ಭೆಟ್ಟಿಯಾದರಂತೆ. ಹೊಸಬರಹಗಾರರನ್ನು ಯಾವತ್ತೂ ಬೆನ್ನು ತಟ್ಟುವವರು ಆರ್ಶಿ. ಅಂದು ಅರವಿಂದನನ್ನು ಅಭಿನಂದಿಸಿದರು. ನೀನು ಬಂಡಾಯ ಸಾಹಿತಿಯಾಗಬೇಕು ಅಂದರು. ಅರವಿಂದ ಒಂದು ಕ್ಷಣ ತಬ್ಬಿಬ್ಬು. ಅವನಿಗೆ ಬಂಡಾಯ ಸಾಹಿತಿ ಅಂದರೆ ಏನೆಂದು ಅರ್ಥ ಆಗಲಿಲ್ಲ. ಯಾವುದೋ ಸಂಘ ಇರಬೇಕು ಅಂದುಕೊಂಡ. ಅದ್ರ ಸದಸ್ಯ ಆಗಲು ಹೇಳುತ್ತಿದ್ದಾರೆ ಅಂದುಕೊಂಡ. ಸರಿ ಸಾರ್ ಅದಕ್ಕೆ ನಾನೇನು ಮಾಡಬೇಕು ಎಂದು ಕೇಳಿದ. ಅದಕ್ಕೆ ಆರ್ಶಿ ಹೇಳಿದರು: 'ಏನೂ ಇಲ್ಲ ಆದೆ ಅಂಥ ಅಂದುಕೊಂಡರೆ ಆಯ್ತು ಅಷ್ಟೆ.'

ಪ್ರಾಂತ ಕೃಷಿ ಕೂಲಿಕಾರರ ಸಂಘದ ಬೆಳ್ಳಿ ಹಬ್ಬ - ಅಖಿಲ ಭಾರತ ಜಾಥಾ

1982 ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಕ್ಕೆ ಈಗ ಬೆಳ್ಳಿಹಬ್ಬದ ಸಂಭ್ರಮ. ಅಂದಿನಿಂದ ಇಂದಿನವರೆಗೆ ದೇಶದ ಸುಮಾರು 14 ರಾಜ್ಯಗಳಲ್ಲಿ ಕೃಷಿ ಕೂಲಿಕಾರರ ಪ್ರಶ್ನೆಗಳಿಗಾಗಿ ಹೋರಾಟಗಳನ್ನು ನಡೆಸುತ್ತಾ ಸುಮಾರು 50 ಲಕ್ಷ ಸದಸ್ಯತ್ವವನ್ನು ಹೊಂದಿದೆ. ಇಂದು ದೇಶದಲ್ಲಿ ಕೇಂದ್ರ ಮತ್ತು ಕರ್ನಾಟಕದಂತಹ ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ದಿವಾಳಿಕೋರ ಉದಾರೀಕರಣದ ನೀತಿಗಳಿಂದ ಕೃಷಿ ಕ್ಷೇತ್ರದಲ್ಲಿ ಬಿಕ್ಕಟ್ಟು ಆವರಿಸಿದ್ದು ರೈತರ ಜೊತೆಯಲ್ಲಿ ಕೃಷಿ ಕೂಲಿಕಾರರೂ ನಿರ್ಗತಿಕರಾಗುತ್ತಿದ್ದಾರೆ. ಉಲ್ಬಣಗೊಂಡಿರುವ ಕೃಷಿ ಕೂಲಿಕಾರರ ಸಮಸ್ಯೆಗಳ ಬಗ್ಗೆ ಪ್ರಚಾರ ಪ್ರಕ್ಷೋಭೆ ನಡೆಸಲು 3 ಅಖಿಲ ಭಾರತ ಜಾಥಾಗಳನ್ನು ಏರ್ಪಡಿಸಲಾಗಿದ್ದು ಒಂದು ಜಾಥಾ ಪಂಜಾಬದ ಜಾಲಿಯಾನವಾಲಬಾಗ್ ನಿಂದಲೂ, ಎರಡನೇಯ ಜಾಥಾ ಉತ್ತರ ಪ್ರದೇಶದ ಬನಾರಸ್ ನಿಂದಲೂ ಮತ್ತು ಮೂರನೆಯ ಜಾಥಾ ತಮಿಳುನಾಡಿನ ಈರೋಡ್‌ನಿಂದಲೂ ಆರಂಭವಾಗಲಿವೆ. ತಮಿಳುನಾಡಿನಿಂದ ಹೊರಡುವ ಜಾಥಾವು ಕೇರಳದಲ್ಲಿ ಸಂಚರಿಸಿ ಕೊಡಗು ಜಿಲ್ಲೆಯ ಮೂಲಕ ಇದೇ ನವೆಂಬರ್ 27ರಂದು ಕರ್ನಾಟಕವನ್ನು ಪ್ರವೇಶಿಸಲಿದೆ. ಈ **ಅಖಿಲ ಭಾರತ ಜಾಥಾವು ಕೊಡಗು, ಮೈಸೂರು, ಮಂಡ್ಯ, ಬೆಂಗಳೂರು, ಚಿಕ್ಕಬಳ್ಳಾಪುರ ಮಾರ್ಗವಾಗಿ ಆಂಧ್ರಪ್ರದೇಶಕ್ಕೆ ತೆರಳುವುದು.**

ಕರ್ನಾಟಕದಲ್ಲಿ ಹಾದುಹೋಗುತ್ತಿರುವ ಜಾಥಾವನ್ನು ಅಲ್ಲಲ್ಲಿ ಸ್ವಾಗತಿಸಲು ವಿಶಾಲ ಸ್ವಾಗತ ಸಮಿತಿಗಳನ್ನು ರಚಿಸಲಾಗಿದೆ. ಮಂಡ್ಯ ನಗರದಲ್ಲಿ ಬೃಹತ್ ಬಹಿರಂಗ ಸಭೆ ನಡೆಯಲಿದೆ.


ಜಾಥಾ 28 ರಂದು ಬೆಂಗಳೂರು ತಲುಪುವಾಗ ಬೆಂಗಳೂರಿನಲ್ಲಿ ಕೃಷಿ ಕೂಲಿಕಾರರ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆ ನಡೆಯಲಿದೆ.

'ಹೆಣ್ಣು ಮಗು ಉಳಿಸಿ - ರಕ್ಷಿಸಿ' ಛಾಯಾಚಿತ್ರ ಸ್ಪರ್ಧೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯಮಟ್ಟದ 'ಹೆಣ್ಣು ಮಗು ಉಳಿಸಿ - ರಕ್ಷಿಸಿ' ಛಾಯಾಚಿತ್ರ ಸ್ಪರ್ಧೆಯನ್ನು ಏರ್ಪಡಿಸಿದೆ. ಛಾಯಾಗ್ರಾಹಕರು 8X10 ಸೈಜಿನ ವರ್ಣಚಿತ್ರಗಳನ್ನು ದಿ. 26.11.2008 ರ ಒಳಗೆ ಕೆಳಗಿನ ವಿಳಾಸಕ್ಕೆ ಕಳಿಸಬಹುದು. ಕರ್ನಾಟಕ ಫೋಟೋ ನ್ಯೂಸ್, 3ನೇ ಮಹಡಿ, 21/1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು - 1 ಪ್ರವೇಶ ಶುಲ್ಕವಿಲ್ಲ. ಒಬ್ಬರು ಎಷ್ಟು ಬೇಕಾದರೂ ಕಳಿಸಬಹುದು. ಬಹುಮಾನಗಳನ್ನು ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ವಿತರಿಸಲಾಗುವುದು.

ವಿವರಗಳಿಗೆ ಸಂಪರ್ಕಿಸಿ : ಲಕ್ಷ್ಮಿ ಕೆ.ಎಸ್., 94801 01468, ಗೌರಮ್ಮ 98451 97079

JANASHAKTHI KANNADA VARA PATRIKE NOVEMBER 30, 2008 Price : Rs. 5/-No. KARKAN /2006/17926 Postal Reg. No. RNP/KA/BGS/2078/2007-09



ನಮ್ಮನ್ನಗಲಿದ ಹಿರಿಯ ಬಂಡಾಯ ಸಾಹಿತಿ ಆರ್.ವಿ.ಭಂಡಾರಿಯವರ ಕುರಿತು ಜಿ.ಯೋಗೀಶ್‌ರವರು ಏನು ಹೇಳಿದ್ದಾರೆ.?

ಅಂಗಾತ ಮಲಗಿದ ಅಂಚೆ ಕಾರ್ಡ್: ಆರ್ವಿ

ಯೋಗಿಶ್. ಜಿ

ರೋಹಿದಾಸ ವಿಠ್ಠಲ ಭಂಡಾರಿಯವರು ಜೀವನವನ್ನು ಸೂಕ್ಷ್ಮವಾಗಿ ಗಮನಿಸುವ ಅಂತರ್ಮುಖತೆಯುಳ್ಳವರು. ಹಾಗೆ ಗಮನಿಸಿದ್ದನ್ನು, ಹೇಳಬೇಕೆಂದು ಅನ್ನಿಸಿದ್ದನ್ನು ವ್ಯಕ್ತಿವಿಶಿಷ್ಟವಾಗಿ ಅಭಿವ್ಯಕ್ತಿಸಬಲ್ಲವರು. ಕಂಡಿದ್ದನ್ನು-ಉಂಡಿದ್ದನ್ನು ಬರಹಗಳಲ್ಲಿ ಅಭಿವ್ಯಕ್ತಿಸುವವರು. ಬದುಕಿನುದ್ದಕ್ಕೂ ಪ್ರತಿಕ್ರಿಯಿಸುತ್ತ ಬಂದವರು. ಪ್ರತಿಭಟನೆಗಾಗಿ ಅವರು ಅಂಚೆ ಕಾರ್ಡ್‌ನನ್ನು ಬಳಸುತ್ತಿದ್ದ ರೀತಿಯೇ ವಿಶೇಷ.

ರಷ್ಯಾ

ಎಲ್ಲಾ ಸರಿಯಾಗೇ ಇತ್ತು.
ಆದರೂ
ಒಂದು ಬೆಕ್ಕು ಸಾಕಬೇಕಿತ್ತು.

ಹುಂಜಾ

ಇಲ್ಲಿ ದಿನ ಬೆಳಗಾದರೆ
ಧರ್ಮ
ಹುಂಜವಾಗುತ್ತದೆ
ಮತ್ತು ಅದರ ಕಾಲಿಗೆ ಕತ್ತಿ
ಕಟ್ಟಿರುತ್ತಾರೆ.

ಹೆಣ

ಭಟ್ಕಳದಲ್ಲಿ ಮೂರು ಹೆಣ
ಹಿಂದುವಿನದೋ ಮುಸ್ಲಿಮನದೋ?
ಎಂದ ಪಕ್ಕದ ಸೀಟಿನವ
ನಾನಂದೆ ಧರ್ಮದ್ದು.

ಡಾ.ಆರ್.ವಿ. ಭಂಡಾರಿ ಉತ್ತರ ಕನ್ನಡ ಕಂಡ ಸ್ಫೋಟಕ ಸ್ವಭಾವದ ಧೀರ ಬರಹಗಾರ. ಬಂಡಾಯ ಸಾಹಿತ್ಯ ಚಳುವಳಿಯ ರಾಜ್ಯಮಟ್ಟದ ಸಂಘಟಕರಾಗಿ 'ತಮ್ಮನ್ನು ತೊಡಗಿಸಿಕೊಂಡ ಈ ಕವಿ ಕಣ್ಣೆ ಮುಚ್ಚೆ ಕಾಡೇ ಗೂಡೆ', 'ಕೊಲೆಗಾರನ ಪತ್ತೆಯಾಗಲಿಲ್ಲ', 'ಹದ್ದುಗಳು' ಎಂಬ ಮೂರು ಸಂಕಲನಗಳನ್ನು ರಚಿಸಿದ್ದಾರೆ. ಅವರ ಸಮಗ್ರ ಕಥೆಗಳು ಮೀನ್‌ಪಳ್ದಿ ಎಂಬ ಹೆಸರಿನಲ್ಲಿ ಬಿಡುಗಡೆಯಾಗಿದೆ. ಸ್ವಾಂತಂತ್ರ್ಯೋತ್ತರ ತಲೆಮಾರಿನ ಪ್ರಬುದ್ಧ ಚಿಂತಕರಲ್ಲಿ ಒಬ್ಬರಾದ ಡಾ. ಆರ್.ವಿ.ಭಂಡಾರಿಯವರ ಕೃತಿಗಳ ಸಂಖ್ಯೆ ಕಡಿಮೆಯಾದರೂ ಸತ್ವದ ದೃಷ್ಟಿಯಿಂದ ಪ್ರಮುಖವಾದವುಗಳಾಗಿವೆ. (ಸ್ವರ್ಣ ದರ್ಪಣ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆಯಲ್ಲಿನ) ವಿಷ್ಣು ನಾಯ್ಕರ ಈ ಮಾತುಗಳು ಆರ್ವಿಯವರನ್ನು ಸ್ಪಷ್ಟವಾಗಿ ಪರಿಚಯಿಸುತ್ತವೆ.



ಇಂಥ ಆರ್ವಿಯವರ ಮೂರು ಸಣ್ಣ ಪದ್ಯಗಳು ರಷ್ಯಾ, ಹೆಣ ಮತ್ತು ಹುಂಜ.

ನಾಡಿನ ಸಾರಸ್ವತ ಲೋಕದಲ್ಲಿ ತಮ್ಮ ಬಂಡಾಯ ಹಾಗೂ ಮಕ್ಕಳ ಸಾಹಿತ್ಯದ ಮೂಲಕ ಪರಿಚಿತರಾಗಿದ್ದ ಆರ್ವಿ (74) ಅಕ್ಟೋಬರ್ 25, 2008 ಶನಿವಾರ ಮಧ್ಯಾಹ್ನ ನಿಧನ ಹೊಂದಿದರು.

ಪ್ರತಿಭಟನೆಗಾಗಿ ಅವರು ಅಂಚೆ ಕಾರ್ಡ್‌ನ್ನು ಬಳಸುತ್ತಿದ್ದ ರೀತಿಯೇ ವಿಶೇಷ. ನಾಡಿನಲ್ಲಿ ಯಾವುದೇ ಹಂತದ ಅಸಮಾನತೆ- ಶೋಷಣೆ- ದಮನವನ್ನು ಇವರು ಗಮನಿಸಿದರೆ; ಪತ್ರಿಕೆಗಳಲ್ಲಿ ಪ್ರತಿಕ್ರಿಯಾತ್ಮಕ ಪ್ರತಿಭಟನೆಯಾಗಿ ಇವರದೊಂದು ಅಂಚೆ ಕಾರ್ಡ್‌ನ ಪತ್ರ ಪ್ರಕಟವಾಗುತ್ತಿತ್ತು. ಮಾಸ್ತಿ, ಹೊನ್ನ, ಅಮಾಸಿ, ಈರು-ಗೀರು ಮುಂತಾದವರಿಗೆ ಧ್ವನಿಯಾಗುವ ಹಂಬಲದವರು ಆರ್ವಿ. ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಹೇಳುವಂತೆ ಎಲ್ಲ ಶೋಷಿತ ಸಮುದಾಯಗಳ ಒಳಸಂಕಟಗಳನ್ನು ಧಾರಣ ಮಾಡಿಕೊಂಡವರು ನಮ್ಮ ಆರ್ವಿ. ಕವನದಲ್ಲಿಯೂ ಕಥೆಹೇಳುವ ಜಾಯಮಾನದವರು.

ಧರ್ಮ, ಸಂಸ್ಕೃತಿ, ಆರ್ಥಿಕತೆ ಮತ್ತು ರಾಜಕಾರಣದ ಅಂಗಗಳನ್ನೊಳಗೊಂಡ ನಮ್ಮ ವ್ಯವಸ್ಥೆಯ ಸ್ತರದಲ್ಲಿ ಸಿಕ್ಕು ಶೋಷಣೆಗೊಳಗಾಗಿ ಜರ್ಝರಿತರಾದ ಜನಸಾಮಾನ್ಯರೊಡನೆ ಮಾತಾಡಬೇಕೆಂಬುದೇ ನನ್ನ ಎಲ್ಲ ಬರವಣಿಗೆಯ ಉದ್ದೇಶ ಎಂಬುದು ಆರ್ವಿಯವರ ಬದ್ಧತೆ. ಕಷ್ಟವೋ ಸುಖವೋ ಜನ್ಮಕೊಟ್ಟ ನೆಲಬಿಟ್ಟಾಚೆ ಕದಲದೇ ಸವಾಲುಗಳನ್ನೆಲ್ಲ ಜೀರ್ಣಿಸಿಕೊಳ್ಳುತ್ತ ಸಾಹಿತ್ಯ ಕೃಷಿಯಲ್ಲೂ ಸಾಮಾಜಿಕ ಹೋರಾಟಗಳಲ್ಲಿಯೂ ನಿರಂತರವಾಗಿ ತೊಡಗಿಸಿಕೊಂಡಿರುವ ಡಾ.ಆರ್.ವಿ. ಭಂಡಾರಿಯವರು ಉತ್ತರ ಕನ್ನಡ ಜಿಲ್ಲೆಗೆ ರಾಜ್ಯ ಸಾಹಿತ್ಯ ಭೂಪಟದಲ್ಲಿ ಒಂದು ಮಹತ್ವದ ಸ್ಥಾನ ದೊರಕಿಸಿಕೊಟ್ಟ ಬಹುಮುಖ ಪ್ರತಿಭೆಯ ಹಿರಿಯ ಲೇಖಕರು ಎಂದು ವಿಷ್ಣು ನಾಯಕರು ದಾಖಲಿಸಿದ ಮಾತುಗಳನ್ನು ನಾವೆಲ್ಲಾ ಮನಸಾರೆ ಒಪ್ಪಿಕೊಂಡವರು.

ಮೊನ್ನೆ ಶನಿವಾರ (25.10.2008) ಅಂಕೋಲೆಯ ಅಂಬಾರಕೊಡ್ಲದ ಕವಿ ವಿಷ್ಣು ನಾಯ್ಕರ ಮನೆಯಲ್ಲಿದ್ದಾಗ ಆರ್ವಿಯವರ ಸಾವಿನ ಸುದ್ದಿ ತಿಳಿಯಿತು. ಸಂಜೆ ಕತೆಗಾರ ರಾಮಕೃಷ್ಣ ಗುಂದಿಯವರ ಜತೆ ಹೊನ್ನಾವರದ ಕೆರೆಕೋಣಕ್ಕೆ ಹೋಗಿಬಂದೆ. ಮನೆಯ ಮೊದಲ ಕೋಣೆಯಲ್ಲಿ ಆರ್ವಿ ಅಂಗಾತ ಮಲಗಿದ್ರು. ತಣ್ಣನೆಯ ಮೈಯನ್ನು ಒಂದಿಷ್ಟು ಹಾರಗಳು ಮುಚ್ಚಿದ್ದವು. ಮುಖ ಮಾತ್ರ ಕಾಣುತ್ತಿತ್ತು. ಅಂಚೆ ಕಾರ್ಡೊಂದು ಅಂಗಾತ ಮಲಗಿದೆ ಅನ್ನಿಸಿತು. ಆರ್ವಿಯವರ ಪತ್ನಿ, ಮೂವರು ಮಕ್ಕಳು, ಸಂಬಂಧಿಕರು, ಒಡನಾಡಿಗಳು, ವಿಡಂಬಾರಿ, ಶ್ರೀಪಾದ ಹೆಗಡೆ ಕಣ್ಣೆ, ಎಂ.ಜಿ. ಹೆಗಡೆ, ಶಾಂತಾರಾಮ ನಾಯ್ಕ, ಹಿಚ್ಕಡ, ವಿ.ಜೆ. ನಾಯ್ಕ, ವಿಷ್ಣು ನಾಯ್ಕ, ಕಿರಣ ಭಟ್ಟ, ಶ್ರೀಪಾದ ಭಟ್ಟ ಮುಂತಾದವರಿದ್ದರು. ಕರೆಂಟ್ ಇಲ್ಲದ ಕಾರಣ ಅಕ್ಷರಶಃ ಕತ್ತಲಾವರಿಸಿತ್ತು. ಆರ್ವಿಯವರ ವ್ಯಂಗ್ಯ ವಿಡಂಬನೆ, ಮಗಳು ಮಾಧವಿಯು ಭಂಡಾರಿಯವರ 'ಹರಿದಸ್ಕರ್ಟಿನ ಹುಡುಗಿ' ಸಂಕಲನದಲ್ಲಿಯೂ ಕಾಣಸುತ್ತದೆ. ಮಗ ಡಾ. ವಿಠ್ಠಲ ಭಂಡಾರಿ ಸಿದ್ದಾಪುರದ ಎಂ.ಜಿ.ಸಿ. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕ. ತಂದೆಯವರ ಜತೆಗೆ ಬಂಡಾಯ ಪ್ರಕಾಶನದಲ್ಲಿ ಕೈ ಜೋಡಿಸಿದ್ದಲ್ಲದೇ ಚಿಂತನ ತಂಡದಲ್ಲಿದ್ದಾರೆ.



ಪುಟ 15ಕ್ಕೆ

ಪರಿಮಳದ ಹೂವು

ಹೋರಾಡಿ ಹೋರಾಡಿ ಉಣ್ಣುತ್ತ ನೋವು
ನಾಡಿಗೇ ತಂದಿರುವೆ ಪರಿಮಳದ ಹೂವು
ಈ ಹೂವು ಇಲ್ಲಿರಲು ನಿನಗೆಲ್ಲಿ ಸಾವು
ಸತ್ತಿದ್ದು ಬರೆ ದೇಹ ಮತ್ತದರ ನೋವು

- ವಿಡಂಬಾರಿ

ಭವದಿಂದ - ಭಾವಕ್ಕೆ - ಭಂಡಾರಿ

ನೀಳವದನ ಆಳನಯನ
ಕೃಷಕಾಯ ಹಿಮಗೂದಲು
ನಾಸ್ತಿಕರ ನಾಯಕ, ಕಡ್ಡಿ ಪೈಲ್ವಾನ
ಬದ್ಧತೆಯ ಅಖಾಡದಲ್ಲಿ
ಸಿದ್ಧಾಂತದ ಕಪ್ತಾನ.

ಸೋಲುವವನಲ್ಲ ಜಗಜಟ್ಟಿ
ನಿಂತೇ ಬಿಡುತ್ತಾನೆ ತೊಡೆ ತಟ್ಟಿ
ಸೋತಿದ್ದಿದೆ ಸ್ನೇಹಕ್ಕೆ
ಅತ್ತಿದ್ದಿದೆ ವಿಶ್ವಾಸ ಭಂಗಕ್ಕೆ

ಆ ಜಾತಿ ಈ ವರ್ಣ ಅ ವರ್ಗ
ಛಪ್ಪನ್ನ ಚೂರು ಈ ಸಮಾಜ
ವಿಷಮ ಶ್ರೇಣಿ, ಅಸಮ ವರ್ತನ
ಕಸವನೆಲ್ಲ ಆಯ್ದು-ತೇಯ್ದು
ಕುಸುರಿಯಾಗಿಸುವ ತವಕ
ನೇಯ್ದು-ನೇಯ್ದು.

ಕಲುಷಿತ ಜಲ, ಕಲ್ಮಷ ಕೆರೆ-
ಕೇಳಿಯಾಡುವ ಕೋಣಗಳ
ಹೊಡೆದಟ್ಟಿ
ಹೊಸ ಹರೆಯ, ಹೊರ ಹರಿವ
ಸೃಷ್ಟಿಸುವ ಹೊಂಗನಸ ಹೊತ್ತ
ಹಿರಿ ಜೀವ.

ಬದುಕು ಅಗ್ನಿದಿವ್ಯ, ಈತ ಏಕಲವ್ಯ
ಮೈಬಿಸಿಕೆಂಡ; ಬಂಡಾಯದ ಗಂಡ
ಮಾತಿನ ಮತ್ತಿಗೆ ಮದ್ದರೆದು, ಗುದ್ದಿಕ್ಕಿ
ಮೌನ ಬೀಜದ ಬಿತ್ತಿ ಮುತ್ತು ಬೆಳೆದಾತ.

ಬುದ್ಧಿ ಬರದುರಿಗೆ, ಬರಹ ಮದ್ದನ್ನರೆದು
ಕೆಂಗುಲಾಬಿಯ ಬೆಳೆಸಿ ಬೀರಿದಾತ.
ಅರೆಯ ಅಂಗಡಿಯಲ್ಲಿ, ಅರಿವಿನ ದೀಪ,
ಧೂಪವುರಿಸುತ್ತಲೇ ನೆನಪ ಪ್ರತಿಮೆಯಾದ
ಮಣ್ಣನ್ನೇ ಮಿನುಗಿಸಿದ, ಹೊನ್ನವರವಾದ
ಜಡಭವದ ಬೇಲಿ ಛಿದ್ರಿಸಿ,
ಭಾವ ಜೀವದ ಭಂಡಾರಿಯಾದ.

- ಸುಬ್ರಾಯ ಮತ್ತೀಹಳ್ಳಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH